
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಕಾರ್ಮಿಕರಿಗೆ ರಾಜಕೀಯ ಕಲಿಸಿದ
ಮಾದರಿ ಕಾರ್ಮಿಕ ನಾಯಕ

ಎನ್.ಎಂ.ಸುಂದರಂ
ಇನ್ನಿಲ್ಲ



ಸಂಪುಟ 12 ಸಂಚಿಕೆ 1 | ಜನವರಿ 1-7, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಕ್ಕೆ ಮುನ್ನಡೆಯಿರಿ...

ರ್‍ಯಾಲಿ ಬಹಿರಂಗ ಸಭೆ

2 ಜನವರಿ 2018 ಬೆಳಗ್ಗೆ 11 ಗಂಟೆಗೆ
ಸ್ವರಾಜ್ ಮೈದಾನ, ಮೂಡಬಿದಿರೆ



ಭಾಷಣಕಾರರು
ಸೀತಾರಾಂ ಯೆಚೂರಿ



ಬಿಜೆಪಿ ರಾಜಕಾರಣಕ್ಕೆ ಚಾಟಿ ಏಟು






"ಬಿದಿರು ಮರ ಅಲ್ಲ"ವಂತೆ !

ತ್ರಿವಳಿ ತಲಾಖ್‌ಗೆ ತರಾತುರಿ ಏಕೆ?





ಸಾಮಾಜಿಕ ಸುರಕ್ಷೆ ಬರಿಯ ಹಣಕಾಸಿನ ವಿಷಯವಲ್ಲ

ಜಿಎಸ್‌ಟಿ : 'ಒಟ್ಟು ಸಂಕಟದ ತೆರಿಗೆ'

ಮಾರ್ಕ್ಸ್ 200 ಕ್ಯಾಲೆಂಡರ್ ಬಿಡುಗಡೆ

ಜಾತ್ಯತೀತ ಜನವಾದಿ ಗಣತಂತ್ರದ ಕ್ರೋಡೀಕರಣ ನೇಪಾಳದ ಕಮ್ಯುನಿಸ್ಟ್ ಪಕ್ಷಗಳಿಗೆ ಯೆಚುರಿ ಅಭಿನಂದನೆ

ನೇಪಾಳದ ಚುನಾವಣೆಗಳಲ್ಲಿ ಸಿಪಿಎನ್(ಯುಎಂಎಲ್) ಅಂದರೆ ನೇಪಾಳ ಕಮ್ಯುನಿಸ್ಟ್ ಪಕ್ಷ(ಏಕೀಕೃತ ಮಾರ್ಕ್ಸ್‌ವಾದಿ ಲೆನಿನ್‌ವಾದಿ) ಮತ್ತು ಸಿಪಿಎನ್(ಎಂಸಿ) ಅಂದರೆ ನೇಪಾಳ ಕಮ್ಯುನಿಸ್ಟ್ ಪಕ್ಷ(ಮಾವೋವಾದಿ ಕೇಂದ್ರ) ಮೈತ್ರಿಕೂಟದ ಭಾರೀ ಗೆಲುವಿನ ಹಿನ್ನೆಲೆಯಲ್ಲಿ ಈ ಪಕ್ಷಗಳನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಅಭಿನಂದಿಸಿದ್ದಾರೆ. ಈ ಮೈತ್ರಿಕೂಟವನ್ನು ರಚಿಸಿಕೊಂಡದ್ದು ಒಂದು ಮಹತ್ವದ ರಾಜಕೀಯ ಹಜ್ಜೆ ಎಂದು ಇದರಿಂದ ಸ್ಪಷ್ಟವಾಗಿದೆ ಎಂದಿದ್ದಾರೆ.

ಸಿಪಿಎನ್(ಯುಎಂಎಲ್) ಅಧ್ಯಕ್ಷ ಕೆ.ಪಿ. ಒಲಿಯವರಿಗೆ ಬರೆದ ಪತ್ರದಲ್ಲಿ ಅವರು ಈ ಎರಡೂ ಪಕ್ಷಗಳ ಎಲ್ಲ ಸದಸ್ಯರನ್ನು ಅಭಿನಂದಿಸುತ್ತ ಒಂದು ಜಾತ್ಯತೀತ ಜನವಾದಿ ಗಣತಂತ್ರದತ್ತ ಚಾರಿತ್ರಿಕ ಸಂಕ್ರಮಣವನ್ನು ಗಟ್ಟಿಗೊಳಿಸುವಲ್ಲಿ ಮತ್ತು ನೇಪಾಳದ ಜನತೆಯ ಬದುಕನ್ನು ಉತ್ತಮಪಡಿಸುವಲ್ಲಿ ಹಾಗೂ ಪ್ರಗತಿ ಮತ್ತು ಸಮೃದ್ಧಿ ಸಾಧಿಸುವಲ್ಲಿ ಯಶಸ್ಸು ಸಿಗಲಿ ಎಂದು ಹಾರೈಸಿದ್ದಾರೆ.

ನೇಪಾಳದಲ್ಲಿ ರಾಜಕೀಯ ಸ್ಥಿರತೆಗೆ ಇದು ಹೊಸ ಆರಂಭದ ಸಂಕೇತ. ಈ ಮೈತ್ರಿಕೂಟ ಈ ಚುನಾವಣೆಗಳಲ್ಲಿ ಮೂರನೇ ಎರಡು ಬಹುಮತದ ಬಹಳ ಸಮೀಪ ಬಂದಿದೆ. ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದತ್ತ ಸಂಕ್ರಮಣದ ಸುಮಾರು ಒಂದು ದಶಕದ ಅವಧಿಯ ಈ ಘಟ್ಟ ಖಂಡಿತವಾಗಿಯೂ ಪೂರ್ಣಗೊಳ್ಳುತ್ತಿದೆ, ದೃಢವಾಗಿ ಕ್ರೋಡೀಕರಣಗೊಳ್ಳುತ್ತಿದೆ ಎಂದು ತಮ್ಮ ಪತ್ರದಲ್ಲಿ ಹೇಳಿರುವ ಯೆಚುರಿ ನೇಪಾಳದ ಜಾತ್ಯತೀತ ಗಣತಂತ್ರದ ಸ್ವರೂಪ ನೇಪಾಳದಲ್ಲಿ ಮಾತ್ರವಲ್ಲ, ಇಡೀ ದಕ್ಷಿಣ ಏಶ್ಯದಲ್ಲಿ ಸ್ಥಿರತೆ ಮತ್ತು ಶಾಂತಿಯ ಮೇಲೆ ದೀರ್ಘಕಾಲದ ಪ್ರಭಾವ ಬೀರುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ನೇಪಾಳ ಮತ್ತು ಭಾರತದ ಜನತೆಗಳ ನಡುವೆ ಬಲಿಷ್ಟವಾದ ಮತ್ತು ಬಹು-ಆಯಾಮಗಳ ಬಂಧಗಳಿವೆ. ಇಲ್ಲಿ ಯಾರೂ ದೊಡ್ಡಣ್ಣ ಅಥವ ಚಿಕ್ಕತಮ್ಮ ಇಲ್ಲ. ಭಾರತೀಯರು ಮತ್ತು ನೇಪಾಳಿಗಳು ಅವಳಿ ಸೋದರರು, ಪರಸ್ಪರರ ವಿಜಯಗಳಲ್ಲಿ ಸಂತೋಷಾಚರಣೆ ನಡೆಸುವವರು, ಬಿಕ್ಕಟ್ಟುಗಳು ಬಂದಾಗ ನೋವುಗಳನ್ನು ಹಂಚಿಕೊಳ್ಳುವವರು. ನೇಪಾಳದಲ್ಲಿ ಈ ಹೊಸ ಸರಕಾರದೊಂದಿಗೆ ಭಾರತ ಮತ್ತು ನೇಪಾಳೀ ಜನತೆಗಳ ನಡುವಿನ ಗೆಳೆತನದ ಬಂಧಗಳು ಇನ್ನಷ್ಟು ಗಟ್ಟಿಗೊಳ್ಳುತ್ತವೆ ಎಂಬ ಆಶಯವನ್ನು ಯೆಚುರಿ ತಮ್ಮ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ.

ಅರಣ್ಯಗಳನ್ನು ಕಾರ್ಪೊರೇಟ್‌ಗಳಿಗೆ ತೆರೆದು ಕೊಡಲು ಅರಣ್ಯ ಕಾಯ್ದೆಗೆ ತಿದ್ದುಪಡಿ-ಎಐಎಡಬ್ಲ್ಯುಯು ಕಳವಳ

ಭಾರತ ಸರಕಾರ ಡಿಸೆಂಬರ್ 27ರಂದು ಸಂಸತ್ತಿನಲ್ಲಿ ಭಾರತೀಯ ಅರಣ್ಯ ಕಾಯ್ದೆ, 1927ಕ್ಕೆ ಒಂದು ತಿದ್ದುಪಡಿಯನ್ನು ಮಂಡಿಸಿದೆ. ಇದು 90 ವರ್ಷಗಳ ನಂತರ ಬಿದಿರನ್ನು ಒಂದು ಮರ ಎಂಬ ಸ್ಥಾನಮಾನದಿಂದ ತೆಗೆದು ಹಾಕುವ ತಿದ್ದುಪಡಿ. ಇದು ಜನಗಳು ಬಿದಿರು ಬೆಳೆಸಲು ಉತ್ತೇಜನೆ ನೀಡಬಹುದು. ಆದರೆ ಈ ತಿದ್ದುಪಡಿಯನ್ನು ತರುವ ತರಾತುರಿಯ ಹಿಂದೆ ರೈತಾಪಿಗಳು, ಅರಣ್ಯವಾಸಿಗಳು ಮತ್ತು ಬುಡಕಟ್ಟು ಜನಗಳ ಹಿತಗಳಿಗಿಂತ ಹೆಚ್ಚಾಗಿ ಕಾಗದ ಉದ್ದಿಮೆಯ ಮತ್ತು ಅರಣ್ಯಗಳನ್ನು ಕಾರ್ಪೊರೇಟ್‌ಗಳಿಗೆ ತೆರೆದು ಕೊಡುವ ಹುನ್ನಾರವೇ ಮುಖ್ಯವಾಗಿರುವಂತೆ ಕಾಣುತ್ತದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಕಳವಳ ವ್ಯಕ್ತಪಡಿಸಿದೆ.

ಇದರಲ್ಲಿನ ಅಂಶಗಳಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ಗ್ರಾಮಸಭಾಗಳಿಗೆ ಕೊಟ್ಟಿರುವ ಅಧಿಕಾರವನ್ನು ಉಲ್ಲಂಘಿಸುವ ಒರಟು ಪ್ರಯತ್ನ ಕಾಣಿಸುತ್ತದೆ ಎಂದು ಎಐಎಡಬ್ಲ್ಯುಯು ಅಭಿಪ್ರಾಯ ಪಟ್ಟಿದೆ. ಅದೇ ರೀತಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬಿದಿರಿನ ವರ್ಗಾವಣೆಗೆ ರಾಜ್ಯ ಸರಕಾರದ ಅನುಮತಿಯ ಅಗತ್ಯವನ್ನು ತೆಗೆದು ಸಂವಿಧಾನದ ಒಕ್ಕೂಟ ಸ್ವರೂಪವನ್ನು ಉಲ್ಲಂಘಿಸುವ ಪ್ರಯತ್ನವೂ ಕಾಣಿಸುತ್ತದೆ, ಜತೆಗೆ ನಮ್ಮ ಅರಣ್ಯಗಳಲ್ಲಿರುವ ಬಿದಿರಿನ ಈಗಿರುವ ಸಂಪನ್ಮೂಲಗಳನ್ನು ವಹಿಸಿಕೊಳ್ಳಲು ಕಾರ್ಪೊರೇಟ್‌ಗಳಿಗೆ ಅನುಮತಿ ನೀಡಿರುವುದು ಕಟ್ಟಡ ನಿರ್ಮಾಣಕ್ಕೆ ಮತ್ತು ಸ್ಥಳೀಯ ಜನಗಳ ಗುಡಿ ಕೈಗಾರಿಕೆಗಳಿಗೆ ಲಭ್ಯವಾಗುವ ಬಿದಿರಿನ ಪ್ರಮಾಣವನ್ನು ಇಳಿಸುತ್ತದೆ. ಇದು ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ. ಅಲ್ಲದೆ ಬೀಳು ಭೂಮಿಯನ್ನು ಭೂಹೀನರಲ್ಲಿ ಹಂಚುವ ಬದಲು ದೊಡ್ಡ ಪ್ರಮಾಣದಲ್ಲಿ ಕಾರ್ಪೊರೇಟ್‌ಗಳಿಗೆ ವಹಿಸುವ ಅಂಶ ಇರುವುದು ಇದರ ರೈತ-ವಿರೋಧಿ ಸ್ವರೂಪವನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದೂ ಎಐಎಡಬ್ಲ್ಯುಯು ಹೇಳಿದೆ.

ಬಿದಿರು ಬೆಳೆಯುವುದು ಮತ್ತು ಕುಯ್ಯುವುದನ್ನು ಜನಗಳು, ಸ್ಥಳೀಯ ಸಂಸ್ಥೆಗಳು ಮತ್ತು ರಾಜ್ಯ ಸರಕಾರಗಳ ಕೈಗಳಿಂದ ತೆಗೆದು ಕೇಂದ್ರ ಸರಕಾರದ ಇನ್ನೊಂದು ಗುತ್ತೇದಾರಿಕೆಯಾಗಿ ಮಾಡುವ ಕ್ರಮವಾಗಿ ಇದು ಕಾಣುತ್ತದೆ ಎಂದು ಎಐಎಡಬ್ಲ್ಯುಯು ಹೇಳಿದೆ.

ಸ್ಥಳೀಯ ಸಂಪನ್ಮೂಲಗಳು ಸ್ಥಳೀಯ ಸಂಸ್ಥೆಗಳ ಹತೋಟಿಯಲ್ಲಿರಬೇಕು ಎಂಬ ಪ್ರಶ್ನೆ, ಮತ್ತು ರಾಜ್ಯ ಸರಕಾರಗಳ ಅಧಿಕಾರಗಳು ಹಾಗೂ ಸಾಮಾಜಿಕ ನ್ಯಾಯದ ಪ್ರಶ್ನೆಗಳು ಇಲ್ಲಿರುವುದರಿಂದ ಅವನ್ನು ಎತ್ತಿಕೊಂಡು ಈ ಬಗ್ಗೆ ವ್ಯಾಪಕ ಚರ್ಚೆಯಾಗುವಂತೆ ಮಾಡಬೇಕು ಎಂದು ಎಐಎಡಬ್ಲ್ಯುಯು ತನ್ನ ಘಟಕಗಳಿಗೆ ಕರೆ ನೀಡಿದೆ.

ಜಮ್ಮು ಮತ್ತು ಕಾಶ್ಮೀರ: ಕರಾಳ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ಬದಲು ಮತ್ತೊಂದು ಕರಾಳ ಆದೇಶ

ಜಮ್ಮು ಮತ್ತು ಕಾಶ್ಮೀರದ ಪಿಡಿಪಿ-ಬಿಜೆಪಿ ಸರಕಾರ ಒಂದು 'ಸಾಮಾಜಿಕ ಮಾಧ್ಯಮ ಬಳಕೆ ಧೋರಣೆ'ಯನ್ನು ಪ್ರಕಟಿಸಿದೆ.ಇದರ ಪ್ರಕಾರ ಸರಕಾರದ ನೌಕರರು ಸಾಮಾಜಿಕ ಮಾಧ್ಯಮಗಳಲ್ಲಿ ರಾಜಕೀಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತಿಲ್ಲ, ಧೋರಣೆಗಳನ್ನು ಮತ್ತು ಸರಕಾರದ ಕಾರ್ಯನಿರ್ವಹಣೆಯನ್ನು ಟೀಕಿಸುವಂತಿಲ್ಲ, ಹಾಗೇನಾದರೂ ಮಾಡಿದರೆ ಅವರನ್ನು ವಜಾ ಮಾಡಲಾಗುವುದು. ನೌಕರರು ಮಾತ್ರವಲ್ಲ ಅವರ ಕುಟುಂಬದವರೂ ಇಂತಹ ಚಟುವಟಿಕೆಗಳಲ್ಲಿ ತೊಡಗುವಂತಿಲ್ಲವಂತೆ.

ಇದು ಸರ್ವಾಧಿಕಾರಶಾಹಿ ಅಧಿಸೂಚನೆ. ಸರಕಾರದ ಸರ್ವಾಧಿಕಾರಿ ಮತ್ತು ಪ್ರತಿಗಾಮಿ ಮನೋಭಾವವನ್ನು ಇದು ತೋರಿಸುತ್ತದೆ, ಇದನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಜಮ್ಮು-ಕಾಶ್ಮೀರ ಘಟಕ ಆಗ್ರಹಿಸಿದೆ.

ರಾಜ್ಯದಲ್ಲಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸುವಲ್ಲಿ ಗಣನೀಯ ಯಶಸ್ಸು ಸಿಕ್ಕಿದೆ ಎಂದು ಹೇಳಿಕೊಳ್ಳುವ ಸರಕಾರ ಈ ರೀತಿ ಸಾಮಾಜಿಕ ಮಾಧ್ಯಮದ ಮೇಲೆ ಮಿತಿ ಹಾಕಿರುವುದು ಆ ದಾವೆಯನ್ನು ಹುಸಿಗೊಳಿಸುತ್ತದೆ, ಮಾತ್ರವಲ್ಲ, ಇದು ರಾಜ್ಯದ ಗಮನಾರ್ಹ ಸಂಖ್ಯೆಯ ಜನಸಮೂಹಗಳಲ್ಲಿ ಪರಕೀಯ ಭಾವವನ್ನು ಉಂಟುಮಾಡುವ ನಕಾರಾತ್ಮಕ ಪ್ರಭಾವ ಬೀರುತ್ತದೆ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡ ಹಾಗೂ ಶಾಸಕ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

ಪಿಡಿಪಿ-ಬಿಜೆಪಿ ರಾಜ್ಯ ಸರಕಾರ ಹೇಳಿಕೊಳ್ಳುವಂತೆ ಪರಿಸ್ಥಿತಿ ಉತ್ತಮಗೊಂಡಿದ್ದರೆ, ಅದು ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆಯಂತಹ ಕರಾಳ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕಾಗಿತ್ತು. ಆದರೆ ಅದರ ಬದಲು ಸುಮಾರು 5ಲಕ್ಷ ನೌಕರರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುವ ಪ್ರಜಾಪ್ರಭುತ್ವ-ವಿರೋಧಿ ಆದೇಶವನ್ನು ಹೊರಡಿಸಿದೆ ಎಂದು ತರಿಗಾಮಿ ಟೀಕಿಸಿದ್ದಾರೆ.


3ಲಕ್ಷ ಆದಿವಾಸಿಗಳು ನಿರ್ವಸಿತರಾಗುವ ಭೀತಿ: ಮಧ್ಯಪ್ರವೇಶಿಸಲು ರಾಷ್ಟ್ರಪತಿಗಳಿಗೆ ಮನವಿ

ಝಾರ್ಖಂಡ್‌ನ ಛೋಟಾ ನಾಗ್ಪುರ ಪ್ರದೇಶದ ಮೂರು ಪ್ರಾಜೆಕ್ಟ್‌ಗಳಿಗಾಗಿ ಮೂರು ಲಕ್ಷಕ್ಕೂ ಹೆಚ್ಚು ಮಂದಿಯನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಇವರಲ್ಲಿ ಬಹುಪಾಲು ಆದಿವಾಸಿಗಳು. ಇವರ ಹಕ್ಕುಗಳ ಮೇಲೆ ಸರಕಾರ ಯುದ್ಧವನ್ನೇ ಸಾರಿದೆ. ಆದ್ದರಿಂದ ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕೆಂದು ಕೋರಿ ಆದಿವಾಸಿ ಅಧಿಕಾರ್ ಮಂಚ್‌ನ ಒಂದು ನಿಯೋಗ ಡಿಸೆಂಬರ್ 22ರಂದು ರಾಷ್ಟ್ರಪತಿಗಳನ್ನು ಭೇಟಿ ಮಾಡಿತು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ಆದಿವಾಸಿ ಅಧಿಕಾರ್ ಮಂಚ್‌ನ ಝಾರ್ಖಂಡ್ ಕಾರ್ಯದರ್ಶಿ ಪ್ರಫುಲ್ ಲಿಂಡ ನೇತೃತ್ವದ ಈ ನಿಯೋಗದಲ್ಲಿ ಈ ಪ್ರದೇಶದ ಆದಿವಾಸಿ ಮುಖಂಡರಿದ್ದರು.

ಇಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅರಣ್ಯ ಹಕ್ಕುಗಳ ಕಾಯ್ದೆಯನ್ನು ದುರ್ಬಲಗೊಳಿಸುತ್ತಿವೆ, ಕಾಯ್ದೆಯ ಪ್ರಕಾರ ಕೇಳಬೇಕಾದ ಗ್ರಾಮಸಭಾದ ಅಭಿಪ್ರಾಯವನ್ನು ಮೂಲೆಗೆ ತಳ್ಳಲಾಗುತ್ತಿದೆ, ಪ್ರತಿದಿನ ಲಕ್ಷಾಂತರ ಜನಗಳು ತಮ್ಮ ಪೂರ್ವಜರ ಮನೆಗಳು, ತಮ್ಮ ಅರಣ್ಯಗಳು ಮತ್ತು ಜೀವನ ಶೈಲಿಯ ಮೇಲೆ ದಾಳಿಯ ಭೀತಿಯಲ್ಲೇ ಬದುಕಬೇಕಾಗಿದೆ.

ತಮ್ಮ ಸಂವಿಧಾನಿಕ ಅಧಿಕಾರಗಳನ್ನು ಬಳಸಿ ಈ ಸಾಮೂಹಿಕ ಒಕ್ಕಲೆಬ್ಬಿಸುವ ಕ್ರಮವನ್ನು, ಒಂದು ರೀತಿಯ ಭೂಕಬಳಿಕೆ ಎನ್ನಬಹುದಾದ ಕ್ರಮವನ್ನು ರದ್ದು ಮಾಡಬೇಕು, ಈ ಪ್ರದೇಶಗಳಲ್ಲಿ ಯಾವುದೇ ಪ್ರಾಜೆಕ್ಟಿಗೆ ಗ್ರಾಮಸಭಾಗಳ ಸಮ್ಮತಿಯ ಅಗತ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ನಿಯೋಗ ರಾಷ್ಟ್ರಪತಿಗಳನ್ನು ಆಗ್ರಹಿಸಿತು.

ರಾಷ್ಟ್ರಪತಿಗಳು ನಿಯೋಗದ ಮಾತುಗಳನ್ನು ಸಹಾನುಭೂತಿಯಿಂದ ಆಲಿಸಿದರು ಎಂದು ಆದಿವಾಸಿ ಅಧಿಕಾರ್ ಮಂಚ್ ಹೇಳಿದೆ.



ಬೇಜವಾಬ್ದಾರಿ ಮತ್ತು ದುರುದ್ದೇಶದ ಮಾತುಗಳನ್ನಾಡುವ ಮಂತ್ರಿಗಳು ತಕ್ಷಣವೇ ರಾಜೀನಾಮೆ ನೀಡಬೇಕು, ಕ್ಷಮೆ ಕೋರಬೇಕು- ರಾಷ್ಟ್ರಪತಿಗಳಿಗೆ ಪ್ರತಿಷ್ಠಿತ ನಾಗರಿಕರ ಪತ್ರ

ಕೇಂದ್ರ ಕೌಶಲ್ಯಾಭಿವೃದ್ಧಿ ಮಂತ್ರಿ ಬೇಜವಾಬ್ದಾರಿ ಮತ್ತು ದುರುದ್ದೇಶದ ಮಾತುಗಳನ್ನಾಡಿದ್ದಾರೆ, ಅವರು ರಾಜೀನಾಮೆ ನೀಡಬೇಕು ಮತ್ತು ದೇಶದ ನಾಗರಿಕರ ಕ್ಷಮೆ ಕೋರಬೇಕು ಎಂದು ಹಲವು ಪ್ರತಿಷ್ಠಿತ ನಾಗರಿಕರು ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ. ಏಕೆಂದರೆ, ಈತ 'ಈ ಜಾತ್ಯತೀತರು ಎಂದು ಹೇಳಿಕೊಳ್ಳುವ ಮಂದಿಗೆ ತಮ್ಮ ಅಪ್ಪ-ಅಮ್ಮ ಯಾರೆಂದು ಗೊತ್ತಿಲ್ಲ, ಆದರೂ ಇವರು ಬುದ್ಧಿಜೀವಿಗಳು' ಎಂದೆಲ್ಲ ಹೇಳಿ ತಮ್ಮ ಸಹ-ನಾಗರಿಕರನ್ನು ಅವಮಾನ ಮಾಡಿ ಅವರ ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸಿರುವುದಲ್ಲದೆ, ಸಂಸದ್ ಸದಸ್ಯನಾಗಿ ಮತ್ತು ಕೇಂದ್ರ ಮಂತ್ರಿಯಾಗಿ ತಾನು ಕೈಗೊಂಡಿರುವ ಪ್ರತಿಜ್ಞೆಯನ್ನು ಕೂಡ ಭಂಡತನದಿಂದ ಉಲ್ಲಂಘಿಸಿದ್ದಾರೆ, ಇವು ಪ್ರಜಾಸತ್ತಾತ್ಮಕವಾಗಿ ಚುನಾಯಿತ ವ್ಯಕ್ತಿಗೆ ಒಪ್ಪುವ ಮಾತುಗಳಲ್ಲ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

ಈ ಮಂತ್ರಿ ತಮ್ಮ ಅಧಿಕಾರದ ಸ್ಥಾನದ ದುರುಪಯೋಗ ಮಾಡಿದ್ದಾರೆ, ಮಾತ್ರವಲ್ಲ, ತಮ್ಮನ್ನು ಜಾತಿ-ಮತಗಳ ಆಧಾರದಲ್ಲಿ ಗುರುತಿಸಿಕೊಳ್ಳದಿರಲು ನಿರ್ಧರಿಸಿರುವ ವ್ಯಕ್ತಿಗಳ ವೈಯುಕ್ತಿಕ ಜೀವನ ಮತ್ತು ' ಘನತೆಯ ಮೇಲೆ ಹಲ್ಲೆ ಮಾಡಿದ್ದಾರೆ. ಇದು ಬೇಜವಾಬ್ದಾರಿ ಹೇಳಿಕೆ ಮಾತ್ರವಲ್ಲ, ನಮ್ಮ ಸಂವಿಧಾನದ ಮೂಲ ರಚನೆಯನ್ನೇ ಬದಲಿಸುವ ದುಷ್ಟ ಆಶಯದಿಂದ ಕೂಡಿರುವಂತದ್ದು ಎಂದಿರುವ ಈ ಪ್ರತಿಷ್ಠಿತ ನಾಗರಿಕರು ಒಬ್ಬ ಕೇಂದ್ರ ಮಂತ್ರಿಗಳು ಭಾರತೀಯ ಪ್ರಜಾಪ್ರಭುತ್ವದ ಮೂಲಾಧಾರಕ್ಕೇ ಬೆದರಿಕೆ ಹಾಕಿರುವುದು ಗಂಭೀರ ಆತಂಕದ ಸಂಗತಿ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಇಂತಹ ಮಂತ್ರಿ ತಕ್ಷಣವೇ ರಾಜೀನಾಮೆ ನೀಡಬೇಕು ಮತ್ತು ತನ್ನ ಸಹ-ನಾಗರಿಕರ ಕ್ಷಮೆ ಕೋರಬೇಕು. ಇಲ್ಲದಿದ್ದರೆ ಮುಂದೆ ಇದು ಭಾರತೀಯ ಸಮಾಜದ ಸಾಮಾಜಿಕ ಮತ್ತು ರಾಜಕೀಯ ಹಂದರವನ್ನೇ ಹಾಳುಗೆಡವುತ್ತದೆ ಎಂದಿರುವ ಪತ್ರ , ರಾಷ್ಟ್ರಪತಿಗಳು ಈ ರೀತಿ ಯಾವುದೇ ಸಂಸತ್ ಸದಸ್ಯ ಭಾರತೀಯ ಸಂವಿಧಾನದ ಮೂಲರಚನೆಯನ್ನೇ ಬದಲಿಸುವ ದುರುದ್ದೇಶಕ್ಕಾಗಿ ತನ್ನ ಅಧಿಕಾರ ಸ್ಥಾನವನ್ನು ದುರುಪಯೋಗ ಪಡಿಸಿಕೊಳ್ಳದಂತೆ ಖಾತ್ರಗೊಳಿಸಬೇಕು ಎಂದು ಕೋರಿದ್ದಾರೆ.

ಸಾರ್ವಜನಿಕ ಹುದ್ದೆಯನ್ನು ಸ್ವೀಕರಿಸುವಾಗ ಕೈಗೊಂಡ ಪ್ರತಿಜ್ಞೆಗಳನ್ನು ಎತ್ತಿ ಹಿಡಿಯಬೇಕು ಎಂದು ಅವರು ಸಂಸದರು ಮತ್ತು ಮಂತ್ರಿಗಳಿಗೂ ಮನವಿ ಮಾಡಿಕೊಂಡಿದ್ದಾರೆ.

ಪ್ರೊ. ಜಯತಿ ಘೋಷ್, ಪ್ರೊ. ಝೋಯಾ ಹಸನ್, ಗೌಹರ್ ರಝಾ, ಸೆಹ್ಬಾ ಫಾರುಕಿ, ಸೋನಾಲ್ ಸಿಂಗ್ ಮುಂತಾದವರು ರಾಷ್ಟ್ರಪತಿಗಳಿಗೆ ಬರೆದಿರುವ ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಸಂಸತ್ತಿನಲ್ಲೂ ಈ ಮಂತ್ರಿ ಪ್ರತಿಪಕ್ಷಗಳಿಂದ ಭಾರೀ ಟೀಕೆಗೆ ಒಳಗಾದರು. ಈಗ ಸಾಮಾನ್ಯ ಸಂಗತಿಯಾಗಿರುವ 'ನನ್ನ ಮಾತುಗಳು ಅಪಾರ್ಥ ಬರುವಂತೆ ವರದಿಯಾಗಿದೆ"ಎಂದು ಹೇಳಿದ ಮೇಲೆ ಇದರಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೋರುತ್ತೇನೆ ಎಂದು ಅರೆ ಮನಸ್ಸಿನಿಂದಲಾದರೂ ಈಗ ಹೇಳಬೇಕಾಗಿ ಬಂದಿದೆ.

ಸಂಪಾದಕೀಯ

ಬಿಜೆಪಿ ರಾಜಕಾರಣಕ್ಕೆ ಚಾಟೀಯೇಟು

ಕರ್ನಾಟಕದಲ್ಲಿ ಬಿಜೆಪಿ ಜನತೆಯ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡುವುದುನ್ನು ಬಿಟ್ಟು ಹಲವು ರೀತಿಯ "ರಾಜಕಾರಣ"ಗಳನ್ನು ಮಾಡುತ್ತದೆ. ಒಂದು "ವಿಕಾಸ"ದ ಹೆಸರಲ್ಲಿ ಕೆಲವು ಯೋಜನೆಗಳ ಬಗ್ಗೆ. ಇನ್ನೊಂದು ಹಿಂದುತ್ವದ ಸಿದ್ಧಾಂತವನ್ನು ಕಂತಿನಲ್ಲಿ ಮುಂದಕ್ಕೊಯ್ಯುವ "ಕೋಮುವಾದಿ ಧ್ರುವೀಕರಣ" ದ ರಾಜಕಾರಣ. ಬಿಜೆಪಿ–ಸಂಘ ಪರಿವಾರ ಹಲವು ನಾಲಿಗೆಗಳಲ್ಲಿ ಹಲವು ವಿಷಯಗಳ ಬಗ್ಗೆ ಹಲವು ನಿಲುವು ಪ್ರಕಟಿಸುತ್ತಾ ಬಹು ಸಂಖ್ಯಾತ ಜನತೆಯನ್ನು ತನ್ನತ್ತ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಸದ್ಯಕ್ಕೆ "ವಿಕಾಸ"ದ ರಾಜಕಾರಣವನ್ನು ಯೆಡಿಯೂರಪ್ಪ ನವರೂ, ಕೇಂದ್ರ ಸಚಿವ ಅನಂತಕುಮಾರ ಹೆಗಡೆ "ಕೋಮುವಾದಿ ಧ್ರುವೀಕರಣ" ರಾಜಕಾರಣವನ್ನೂ ಮಾಡುತ್ತಿದ್ದಾರೆ. ಈ ವಾರ ಈ ಎರಡೂ ರಾಜಕಾರಣದಲ್ಲಿ ಅವರ ಪ್ರಮುಖ ನಡೆಗಳಿಗೆ ತೀವ್ರ ಹಿನ್ನಡೆಯಾಗಿದ್ದು, ಹಲವು ದಿಕ್ಕುಗಳಿಂದ ತೀವ್ರ ನಕಾರಾತ್ಮಕ ಪ್ರತಿಕ್ರಿಯೆ ಬಂದಿದೆ. ಇದನ್ನು ಚಾಟಿಯೇಟು ಎಂದು ಕರೆಯಬಹುದಾದಷ್ಟು ತೀವ್ರವಾಗಿದೆ.

"ಮಹದಾಯಿ ವಿವಾದವನ್ನು ನ್ಯಾಯಮಂಡಳಿ ಹೊರಗೆ, ಸರ್ವಸಮ್ಮತ ಒಪ್ಪಿಗೆ ಮೂಲಕ ಬಗೆಹರಿಸಿಕೊಳ್ಳಲು ಗೋವಾ ಸರ್ಕಾರ ಸಿದ್ಧವಿದೆ' ಎಂದು ಅಲ್ಲಿನ ಮುಖ್ಯಮಂತ್ರಿ ಮನೋಹರ ಪರಿಕ್ಕರ್ ಅವರು ತಮಗೆ ಬರೆದ ಪತ್ರವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ . ಡಿಸೆಂಬರ್ 21ರಂದು ಹುಬ್ಬಳ್ಳಿಯಲ್ಲಿನ ಬಿಜೆಪಿ ಪರಿವರ್ತನಾ ಯಾತ್ರೆಯ ಸಾರ್ವಜನಿಕ ಸಭೆಯಲ್ಲಿ ಓದಿ ಹೇಳಿದರು. ಹೊಸದೊಂದು ರಾಜಕೀಯ ಗಿಮಿಕ್ ಮಾಡಲು ಪ್ರಯತ್ನಿಸಿದರು. ಇದು ಅರ್ಥಹೀನ ಗಿಮಿಕ್ ಎಂದೂ, ಕೇಂದ್ರ–ರಾಜ್ಯ ಹಾಗು ರಾಜ್ಯ–ರಾಜ್ಯಗಳ ನಡುವಿನ ವಿವಾದಗಳ ಪರಿಹಾರಕ್ಕೆ ಮಾಡಿರುವ ಸಂವಿಧಾನಾತ್ಮಕ ವ್ಯವಸ್ಥೆಯ ಉಲ್ಲಂಘನೆ ಎಂದೂ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಯಿತು. ಆ ಮೇಲಿನ ಗೋವಾ ಮುಖ್ಯಮಂತ್ರಿ, ನೀರಾವರಿ ಮಂತ್ರಿಗಳ ಹೇಳಿಕೆಗಳು ಬಿಜೆಪಿಯ ರಾಜಕೀಯ ನಡೆಯ ವಿಶ್ವಾಸಾರ್ಹತೆ ಬಗ್ಗೆ ಇನ್ನಷ್ಟು ಅನುಮಾನಗಳನ್ನು ಹೆಚ್ಚಿಸಿದೆ. ಇದರಿಂದ ಆಕ್ರೋಶಗೊಂಡ ಉತ್ತರ ಕರ್ನಾಟಕದ ರೈತರು ಬೆಂಗಳೂರಿನಲ್ಲಿ ಬಿಜೆಪಿ ಕಚೇರಿ ಮುಂದೆ ಸತತವಾಗಿ ಧರಣಿ ಕೂತದ್ದು, ಡಿಸೆಂಬರ್ 27ರಂದು ಉತ್ತರ ಕರ್ನಾಟಕ ಬಂದ್ ಕರೆ ಕೊಟ್ಟಿದ್ದು, ಆ ಭಾಗದ ಬಿಜೆಪಿ ಸಂಸದರ ವಿರುದ್ಧ ಪ್ರತಿಭಟಿಸಿದ್ದು ಸೇರಿ ಬಿಜೆಪಿಯ ಈ ರಾಜಕೀಯ ನಡೆ ಫಲ ಕೊಟ್ಟಿಲ್ಲ ಮಾತ್ರವಲ್ಲ, ಬ್ಯೂಮರಾಂಗ್ ಆಗಿದೆ. ಗೋವಾದ ಮುಖ್ಯಮಂತ್ರಿಯ ಕರ್ನಾಟಕದ ರಾಜಕಾರಣಿಗಳನ್ನು ನಂಬುವಂತಿಲ್ಲ ಎಂಬ ಹೇಳಿಕೆ, ಕರ್ನಾಟಕದ ಅಗತ್ಯವಿರುವ ಕುಡಿಯಲು ನೀರಿನ ಪ್ರಮಾಣ 0.1 ಟಿಎಂಸಿ ಅಡಿ ಮಾತ್ರ ಎಂಬ ಗೋವಾದ ವಕೀಲರ ಹೇಳಿಕೆ, ಕರ್ನಾಟಕ ಬಿಜೆಪಿಯನ್ನು ಇನ್ನಷ್ಟು ಪೇಚಿಗೆ ಸಿಕ್ಕಿಸಿದೆ. ಮಹಾದಾಯಿ ಸಮಸ್ಯೆಯನ್ನು ಇನ್ನಷ್ಟು ಕಗ್ಗಂಟಾಗಿಸಿದೆ. ಪರಿಹಾರದಿಂದ ಇನ್ನಷ್ಟು ದೂರ ತಳ್ಳಿದೆ.



ಕೃಪೆ: ಸತೀಶ್ ಆಚಾರ್ಯ

ಇದು ಸಾಲದೆಂಬಂತೆ, 'ಜಾತ್ಯತೀತತೆಯನ್ನು ಪ್ರತಿಪಾದಿಸುವ ಸಂವಿಧಾನವನ್ನು ಬದಲಿಸಲಿಕ್ಕಾಗಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ. ಜಾತ್ಯತೀತರು ಎಂದು ಹೇಳಿಕೊಳ್ಳುವವರಿಗೆ ತಮ್ಮ ಅಪ್ಪ–ಅಮ್ಮನ ಪರಿಚಯವೇ ಇರುವುದಿಲ್ಲ' ಎಂಬಿತ್ಯಾದಿ "ಕೋಮುವಾದಿ ಧ್ರುವೀಕರಣ" ಪರಿಣತ ಕೇಂದ್ರ ಸಚಿವ ಅನಂತ ಕುಮಾರ ಹೆಗಡೆ ಅವರ ಹೇಳಿಕೆಗೂ ನಿರೀಕ್ಷೆಗೂ ಮೀರಿ ನಕಾರಾತ್ಮಕ ಪ್ರತಿಕ್ರಿಯೆ ಬಂದಿದೆ. ಕೊಪ್ಪಳದಲ್ಲಿ ನಡೆದ ಬ್ರಾಹ್ಮಣ ಯುವ ಪರಿಷತ್ ಸಮಾರಂಭದಲ್ಲಿ ಹೆಗಡೆ ಜಾತಿ, ಸಂವಿಧಾನ, ಮನುಸ್ಮೃತಿ ಇನ್ನೂ ಹಲವು ವಿಷಯಗಳ ಬಗ್ಗೆ ತಮ್ಮ ಮತ್ತು ಬಿಜೆಪಿ–ಸಂಘ ಪರಿವಾರಗಳ "ಮನದ ಮಾತ"ನ್ನು ತಮ್ಮ ಪ್ರಿಯವಾದ "ರೌಡಿ ಭಾಷೆ"ಯಲ್ಲಿ ಹೇಳಿದ್ದರು. ಆದರೆ ಅವರ ಹೇಳಿಕೆಗೆ ಜಾತ್ಯತೀತರಿಂದ ಸಾಮಾಜಿಕ ಮಾಧ್ಯಮದಲ್ಲೂ ಹೊರಗೂ ಆಕ್ರೋಶ, ವ್ಯಂಗ್ಯ, ಸವಾಲು, ಪ್ರಶ್ನೆ, ಉತ್ತರ, ಸೆಕ್ಯುಲರಿಸಂ ಬಗ್ಗೆ ಚರ್ಚೆ ಇತ್ಯಾದಿ ನಡೆಯಿತು. ದೇವನೂರ ಮಹಾದೇವ ತೀಕ್ಷ್ಣ ಪ್ರತಿಕ್ರಿಯೆಯಾಗಿ ಬರೆದ ಬಹಿರಂಗ ಪತ್ರ ಮುಖ್ಯವಾಹಿನಿ ಮಾಧ್ಯಮಗಳಲ್ಲೂ ಸುದ್ದಿ ಮಾಡಿ, ಸಾಮಾನ್ಯವಾಗಿ ಇಂತಹ ವಿಷಯಗಳ ಬಗ್ಗೆ "ಜಾಣಮೌನ" ವಹಿಸುವ ಪತ್ರಿಕೆಗಳಲ್ಲಿ ಕೆಲವಾದರೂ ಸಾಕಷ್ಟು ಪ್ರಬಲವಾದ ಟೀಕೆಗಳು ಬಂದವು. ಇತ್ತೀಚೆಗೆ ಅಪರೂಪವೆಂದು ಹೇಳಬಹುದಾದ ನಡೆಯಲ್ಲಿ ಪ್ರಜಾವಾಣಿ ಸಾಕಷ್ಟು ಗಟ್ಟಿಯಾದ ಸಂಪಾದಕೀಯ (ಡಿಸೆಂಬರ್ 29) ಬರೆಯಿತು.

> "ಬೀದಿ ಬದಿಯ ಕಿಡಿಗೇಡಿಗಳನ್ನು ಮೀರಿಸುವಂತೆ ಕೇಂದ್ರ ಸರ್ಕಾರದ ಸಚಿವರೊಬ್ಬರು ಆಡಿದ ಈ ಮಾತುಗಳು ದೇಶದೆಲ್ಲೆಡೆ ಸಹಜವಾಗಿಯೇ ಚರ್ಚೆಗೆ ಎಡೆಮಾಡಿಕೊಟ್ಟಿದ್ದವು. ಅನಂತಕುಮಾರ್ ಹೆಗಡೆ ವಿವೇಚನಾರಹಿತವಾಗಿ ಮಾತನಾಡಿರುವುದು ಇದು ಮೊದಲೇನಲ್ಲ .. ದೇಶದ ಜಾತ್ಯತೀತ ಸ್ವರೂಪವನ್ನು ಕುರೂಪಗೊಳಿಸುವಂತಹ ಮಾತುಗಳನ್ನು ಬಿಜೆಪಿ ನಾಯಕರು ಆಡಿರುವುದು ಇದು ಮೊದಲೇನಲ್ಲ. ತಮ್ಮ ವಿಚಾರಧಾರೆಗೆ ಒಪ್ಪದವರನ್ನು ಪಾಕಿಸ್ತಾನಕ್ಕೆ ಕಳುಹಿಸುವ ಅಥವಾ ಅವರ ಕೈಕಾಲು–ತಲೆ ಕತ್ತರಿಸುವ ಮಾತುಗಳನ್ನು ಅನೇಕ ನಾಯಕರು ಆಡಿದ್ದಾರೆ, ಅವುಗಳನ್ನು ಅರಗಿಸಿಕೊಂಡಿಯೂ ಇದ್ದಾರೆ. ಆಹಾರಸಂಸ್ಕೃತಿ ಕುರಿತ ಚರ್ಚೆಗಳು, ದಲಿತರ ಮೇಲಿನ ಹಲ್ಲೆಗಳು ಹಾಗೂ ಸಂವಿಧಾನದ ರಚನೆಯಲ್ಲಿ ಅಂಬೇಡ್ಕರ್ ಪಾತ್ರವನ್ನು ಗೌಣಗೊಳಿಸುವ ಪ್ರಯತ್ನಗಳು ಮತ್ತೆ ಮತ್ತೆ ನಡೆಯುತ್ತಿವೆ. ಇಂಥ ಸಂದರ್ಭಗಳಲ್ಲಿ ಪ್ರತಿಕ್ರಿಯಿಸಬೇಕಾದ ಕೇಂದ್ರ ಸರ್ಕಾರ ಹಾಗೂ ಬಿಜೆಪಿ ಮೌನವಾಗಿರುವುದೇ ಹೆಚ್ಚು. ಅಭಿವೃದ್ಧಿ ಕುರಿತಂತೆ ಸಮ್ಮೋಹಕವಾಗಿ ಮಾತನಾಡುವ ಪ್ರಧಾನಿ ಕೂಡ ಗುಜರಾತ್ ಚುನಾವಣಾ ಸಂದರ್ಭದಲ್ಲಿ, ಅಭಿವೃದ್ಧಿಯೇತರ ವಿಷಯಗಳ ಬಗ್ಗೆ ಮಾತನಾಡಿದ್ದರು.. .. .. ಸಂವಿಧಾನದ ವಿರುದ್ಧ ಮಾತನಾಡುವವರನ್ನು ಮಾತ್ರವಲ್ಲದೆ, ಎಲ್ಲ ಬಗೆಯ ಬಾಯಿಬಡುಕತನಗಳನ್ನೂ ವಿರೋಧಿಸುವುದು ಇಂದಿನ ತುರ್ತು ಅಗತ್ಯವಾಗಿದೆ"

ಮಾತ್ರವಲ್ಲ, ಇದು ರಾಷ್ಟ್ರೀಯ ಚರ್ಚೆಯ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಬಿಜೆಪಿಗೆ ತೀವ್ರ ಇರುಸು ಮುರಸಿನ ವಿಷಯವಾಯಿತು. 'ಭಾರತದ ಸಂವಿಧಾನ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ನಾನು ಸದಾ ಗೌರವಿಸುತ್ತೇನೆ. ಸಂವಿಧಾನ ನನಗೆ ಅತ್ಯಂತ ಮುಖ್ಯ. ಈ ಬಗ್ಗೆ ಯಾವುದೇ ಸಂದೇಹವಿಲ್ಲ. ದೇಶದ ಪ್ರಜೆಯಾಗಿ ಎಂದೂ ಸಂವಿಧಾನವನ್ನು ವಿರೋಧಿಸುವುದಿಲ್ಲ' ಎಂದು ಸ್ಪಷ್ಟೀಕರಣ ನೀಡಿ ನುಣಿಚಿಕೊಳ್ಳಲು ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಕ್ಷಮಾಪಣೆ ಕೇಳಲು ವಿರೋಧ ಪಕ್ಷದ ಸದಸ್ಯರು ಪಟ್ಟು ಹಿಡಿದಾಗ, ಸ್ಪೀಕರ್ ಅವರೂ ಹೇಳಿದಾಗ ಹೆಗಡೆ ಕ್ಷಮಾಪಣೆ ಕೇಳಲೇಬೇಕಾಯಿತು. ಆದರೆ ಹೆಗಡೆ ಅಥವಾ ಇತರರು ಇನ್ನೊಮ್ಮೆ ಬಿಜೆಪಿ–ಸಂಘ ಪರಿವಾರದ "ಮನದ ಮಾತು"ಗಳನ್ನು ಆಡುವುದಿಲ್ಲ ಎಂಬ ಯಾವುದೇ ಗ್ಯಾರಂಟಿ ಇಲ್ಲ. ಆದರೆ ಇದು ರಾಜಕೀಯವಾಗಿ ಪ್ರಯೋಜನಕ್ಕಿಂತ ಬ್ಯೂಮರಾಂಗ್ ಆಗುವ ಸಾಧ್ಯತೆ ಇರುವುದರಿಂದ ಎರಡು ಬಾರಿ ಯೋಚಿಸಿಯಾರು ಎಂದಷ್ಟೇ ಹೇಳಬಹುದು. ಆದರೆ ಬಿಜೆಪಿ ರಾಜಕಾರಣಕ್ಕೆ ಈ ವಾರ ಸಿಕ್ಕಿರುವ ಚಾಟಿಯೇಟು ಅದನ್ನು ಸುಳ್ಳು/ರೌಡಿ "ಮಾತು"ಗಳ ಬದಲು ಹೆಚ್ಚೆಚ್ಚು ರೌಡಿ "ಕೃತಿ"(ಕೋಮು ದಂಗೆಗಳು ಎಂದು ಓದಿಕೊಳ್ಳಿ)ಗಳಿಗೆ ಇಳಿಸುವ ಸಾಧ್ಯತೆ ಇದೆ. ಅದಕ್ಕಾಗಿ ಬಿಜೆಪಿ–ಸಂಘ ಪರಿವಾರ ವ್ಯಾಪಕ ಸಿದ್ಧತೆ–ಸಂಘಟನೆ ನಡೆಸಿದೆ.

ಯಾವುದೇ ಸಮಸ್ಯೆಗಳನ್ನು ಬಗೆಹರಿಸದ ಸುಳ್ಳು ವಿಕಾಸದ, ಪ್ರಚೋದಕ ಕೋಮುವಾದೀಕರಣದ ಮಾತುಗಳಾಗಲಿ, ಕೋಮು ದಂಗೆಗಳಂತಹ ಕೃತಿಗಳಾಗಲಿ ರಾಜಕೀಯ ಫಲ ಕೊಡುವುದಿಲ್ಲ ಎಂಬ ರಾಜಕೀಯ ಪರಿಸ್ಥಿತಿಯನ್ನು ನಿರ್ಮಿಸುವುದು ಇಂದಿನ ಪರಿಸ್ಥಿತಿಯಲ್ಲಿ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯವಾಗಿದೆ. ಬಿಜೆಪಿ–ಕಾಂಗ್ರೆಸ್ ಗಳ ಇಂತಹ ಬೋಗಸ್ ರಾಜಕಾರಣವನ್ನು ಬಯಲು ಮಾಡಿ, ಅದರ ಬದಲು ಜನರ ನಿಜವಾದ ಸಮಸ್ಯೆಗಳು, ಅದಕ್ಕೆ ಕಾರಣವಾದ ನೀತಿಗಳ ಬದಲಾವಣೆಯತ್ತ ಜನರ ಗಮನ ಸೆಳೆಯುವತ್ತ ಕೆಲಸ ಮಾಡಬೇಕಾಗಿದೆ. ●



ಜಾತ್ಯಾತೀತರ ರಕ್ತದ ಬಗ್ಗೆ ಸಂಶಯವಿದೆ ಎಂದು ವ್ಯಾಧಿಗ್ರಸ್ತ ಮನಸಿನ ಸಂಸದರೊಬ್ಬರು ಹೇಳಿಕೆ ನೀಡಿರುವ ಈ ಹೊತ್ತಿನಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ ನಾನಂತು ಜಾತ್ಯಾತೀತ, 'ಸಮಾಜದ ಲೆಕ್ಕಾಚಾರದ ಪ್ರಕಾರ' ನನ್ನ ಅಪ್ಪ ಈಡಿಗ, ನನ್ನಮ್ಮ ಒಕ್ಕಲಿಗ
(ಹುಟ್ಟಿನಿಂದಲೇ ನನ್ನ ರಕ್ತ ಜಾತ್ಯಾತೀತ ಅನ್ನೋ ಹೆಮ್ಮೆ ನನಗೆ)
ನನ್ನ ಅಕ್ಕನ ಮದುವೆ ಮಾಡಿದ್ದು ಶೆಟ್ಟರ ಹುಡುಗನಿಗೆ, ನಾನು ಮದುವೆ ಆಗಿದ್ದು ಎಸ್ ಟಿ ಗುಂಪಿಗೆ ಸೇರಿದ ಹುಡುಗಿಯನ್ನು. ನನ್ನ ತಂಗಿ ಮದುವೆ ಆಗಿದ್ದು ಈಡಿಗರ ಹುಡುಗನನ್ನು. ನನ್ನ ಬದುಕಿನ ಆದರ್ಶವಾದ ಕುವೆಂಪು ಅವರು ರೂಪಿಸಿದ ಮಂತ್ರ ಮಾಂಗಲ್ಯ ಪದ್ಧತಿಯಂತೆ ಮದುವೆಯಾಗುವಾಗ ಮನಸಾರೆ ಸ್ವೀಕರಿಸಿದ ಒಂದು ಪ್ರಮಾಣ ವಚನದ ಪ್ರಕಾರ ನಾನು ಯಾವುದೇ ಸಂಕುಚಿತ ಜಾತಿ, ಧರ್ಮಗಳಿಗೂ ಸೇರಿದವನಲ್ಲ. ಮಾನವತೆಯೇ ನನ್ನಧರ್ಮ.

– ಕವಿರಾಜ್
ಚಿತ್ರ ಸಾಹಿತಿ ಮತ್ತು ನಿರ್ದೇಶಕ


ಮಾತೆಂದರೆ ಇದು



ಯಾವುದೇ ಸಾಮಾಜಿಕ ವ್ಯವಸ್ಥೆ ಎಷ್ಟೆಲ್ಲಾ ಉತ್ಪಾದನಾ ಶಕ್ತಿಗಳಿಗೆ ಅದು ಸಾಲುತ್ತದೋ, ಅವೆಲ್ಲವೂ ವಿಕಾಸಗೊಳ್ಳುವ ವರೆಗೆ, ತನ್ನನ್ನು ಎಂದೂ ನಾಶಪಡಿಸಿಕೊಳ್ಳುವದಿಲ್ಲ, ಮತ್ತು ಹೊಸ ಮೇಲ್ಮಟ್ಟದ ಉತ್ಪಾದನಾ ಸಂಬಂಧಗಳು ಹಳೆಯ ಸಮಾಜದ ಚೌಕಟ್ಟಿನೊಳಗೆ ಅವುಗಳ ಅಸ್ತಿತ್ವಕ್ಕೆ ಬೇಕಾದ ಭೌತಿಕ ಪರಿಸ್ಥಿತಿಗಳು ಪಕ್ವವಾಗುವ ವರೆಗೆ ಹಳೆಯದವುಗಳ ಸ್ಥಾನ ಪಡೆಯುವುದಿಲ್ಲ. ಹೀಗೆ ಮಾನವ ಕುಲ ಅನಿವಾರ್ಯವಾಗಿಯೇ ತಾನು ಪರಿಹರಿಸಬಲ್ಲ ಕಾರ್ಯಗುರಿಗಳನ್ನು ಮಾತ್ರ ತನ್ನ ಮುಂದಿಟ್ಟುಕೊಳ್ಳುತ್ತದೆ. ಏಕೆಂದರೆ, ನಿಕಟವಾಗಿ ಪರೀಕ್ಷಿಸಿದಾಗ ಒಂದು ಸಮಸ್ಯೆ ಹುಟ್ಟಿಕೊಳ್ಳುವದು ಅದರ ಪರಿಹಾರಕ್ಕೆ ಭೌತಿಕ ಪರಿಸ್ಥಿತಿಗಳು ಅದಾಗಲೇ ಇದ್ದಾಗ ಅಥವ ಮೂಡಿಕೊಳ್ಳುತ್ತಿರುವಾಗ ಮಾತ್ರವೇ ಎಂಬುದು ಕಂಡುಬರುತ್ತದೆ.

–ಕಾರ್ಲ್ ಮಾರ್ಕ್ಸ್, Preface to the Critique of Political Economy (1859)

ಖ್ಯಾತ ಶಿಕ್ಷಕ ವಿಚಾರವಾದಿ ಕೆ. ರಾಮಚಂದ್ರ ಉಡುಪ ನಿಧನ



ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ತಲೆಮಾರಿನ ಖ್ಯಾತ ಶಿಕ್ಷಕರ ಕೊನೆಯ ಕೊಂಡಿಯೊಂದು ಕಳಚಿದೆ. ತಮ್ಮ 96ನೇಯ ವಯಸ್ಸಿನಲ್ಲಿ ಜಿಲ್ಲೆಯ ಖ್ಯಾತ ಶಿಕ್ಷಕ ಹಾಗೂ ಖ್ಯಾತ ವಿಚಾರವಾದಿಗಳಾಗಿದ್ದ ಕಾರ್ಕಡ ರಾಮಚಂದ್ರ ಉಡುಪರು ಉಡುಪಿ ಜಿಲ್ಲೆಯ ಕೋಟದ ತಮ್ಮ ಸ್ವಗೃಹದಲ್ಲಿ ಡಿಸೆಂಬರ್ 26 ರಂದು ನಿಧನರಾಗಿದ್ದಾರೆ.

ಕಳೆದ ಶತಮಾನದ ನಲ್ವತ್ತರ ದಶಕದಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿ ಮಂಗಳೂರಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಪಡೆಯುತ್ತಿದ್ದ ತರುಣರ ಮಧ್ಯೆ ನವ ಭಾರತದ ಕನಸುಗಳಿದ್ದುವು. ಸ್ವಾತಂತ್ರ್ಯ ಹೋರಾಟದ ಕಿಚ್ಚು ಪ್ರಜ್ವಲಿಸುತ್ತಿದ್ದ ಕಾಲದ ಈ ತರುಣರು ತಾವು ಶಿಕ್ಷಕರಾಗಿ ಉತ್ತಮ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಆದರ್ಶ ಹೊಂದಿದ್ದರು. ಈ ಕಾರಣದಿಂದಲಾಗಿ ದಕ್ಷಿಣಕನ್ನಡ ಜಿಲ್ಲೆ ಸ್ವಾತಂತ್ರ್ಯೋತ್ತರದಲ್ಲಿ ಶೈಕ್ಷಣಿಕವಾಗಿ ಅತ್ಯಂತ ಮುಂದುವರಿದ ಜಿಲ್ಲೆಯಾಗಿ ಬೆಳೆಯಲು ಕಾರಣವಾಯಿತು. ಜಿಲ್ಲೆಯ ಶೈಕ್ಷಣಿಕ ಮುನ್ನಡೆಗೆ ಕಾರಣರಾದ ಶ್ರೇಷ್ಠ ಶಿಕ್ಷಕರಲ್ಲಿ ಒಬ್ಬರು ಕೆ. ರಾಮಚಂದ್ರ ಉಡುಪರು.

1943 ರಲ್ಲಿ ಶಿಕ್ಷಕ ತರಬೇತಿ ಪಡೆದ ಬಳಿಕ ಕೋಟ ಪ್ರದೇಶದ ಗಿಳಿಯಾರು, ಬಾರ್ಕೂರುಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿ, ಮುಂದೆ ಇಂಟರ್ ಹಾಗೂ ಬಿ.ಎ. ಪದವಿಗಳನ್ನು ಅನೌಪಚಾರಿಕವಾಗಿ ಅಧ್ಯಯನ ಮಾಡಿ, ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ 1951 ರಲ್ಲಿ ಪದವೀಧರ ಶಿಕ್ಷಕ (ಬಿ.ಟಿ) ತರಬೇತಿ ಪಡೆದರು. ಅವರು ಪ್ರಾಥಮಿಕ ಶಿಕ್ಷಕ ತರಬೇತಿಯನ್ನು 2 ವರ್ಷ ಮಂಗಳೂರಿನಲ್ಲಿ ಪಡೆಯುತ್ತಿದ್ದಾಗ ಇದ್ದ ಖಾಸಗಿ ಹಾಸ್ಟೇಲಿನಲ್ಲಿ ಮುಂದೆ ಖ್ಯಾತನಾಮರಾದ ಕು.ಶಿ.ಹರಿದಾಸ ಭಟ್ಟ, ಕೆ.ಆರ್.ಹಂದೆ, ಸುರತ್ಕಲ್ ವಾಸುದೇವರಾವ್, ಅಡೂರು ಶಿವಶಂಕರ ರಾವ್ (ಮುಂದೆ ಕಮ್ಯೂನಿಸ್ಟ್ ಚಳುವಳಿಯಲ್ಲಿದ್ದರು), ಎ.ಕೆ. ಪಟ್ಟಾಭಿ (ಮುಂದೆ ಚಲನಚಿತ್ರ ನಟರಾದವರು) ಮೊದಲಾದವರ ಸಹಚರ್ಯ ಹೊಂದಿದ್ದರಿಂದ, ವೈವಿಧ್ಯಮಯ ಆಸಕ್ತಿಗಳನ್ನು ಬೆಳೆಸಿಕೊಂಡು ತನ್ನ ಶಿಕ್ಷಕ ಜೀವನದಲ್ಲಿ ಅಳವಡಿಸಿದರು.

ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕ:

ಕುಂದಾಪುರದಲ್ಲಿ ರಾಮಚಂದ್ರ ಉಡುಪರು ಹೈಸ್ಕೂಲ್ ವಿದ್ಯಾಭ್ಯಾಸ ಪಡೆಯುವ ವೇಳೆ ವಿಜ್ಞಾನ ಶಿಕ್ಷಕರಾಗಿದ್ದ ಖ್ಯಾತ ವಿಚಾರವಾದಿ ಕೆ.ಎಲ್.ಕಾರಂತ (ಕೋಟ ಲಕ್ಷ್ಮಿನಾರಾಯಣ ಕಾರಂತ) ಅವರ ಪ್ರಭಾವಕ್ಕೊಳಗಾಗಿದ್ದರು. ಬಿ.ಟಿ.ತರಬೇತಿ ಪಡೆದ ಬಳಿಕ ಬಾರ್ಕೂರು, ಕೋಟ, ಬೈಂದೂರು, ಕೋಟೇಶ್ವರಗಳಲ್ಲಿ ಹೈಸ್ಕೂಲು ಶಿಕ್ಷಕರಾಗಿ ಕೆಲಸ ಮಾಡಿದ್ದರು. ಕೋಟವಿವೇಕ ಹೈಸ್ಕೂಲು ಆಡಳಿತ ಮಂಡಳಿಯು 1960ರಲ್ಲಿ ಮುಖ್ಯೋಪಾಧ್ಯಾಯರಾಗಿ ಅವರನ್ನು ಆಹ್ವಾನಿಸಿತು. 1972ರಲ್ಲಿ ಸಂಯುಕ್ತ ಪದವಿಪೂರ್ವ ಕಾಲೇಜಾಗಿ ಹೈಸ್ಕೂಲು ಉನ್ನತಗೊಂಡಾಗ, 1980ರಲ್ಲಿ ನಿವೃತ್ತರಾಗುವವರೆಗೂ ರಾಮಚಂದ್ರ ಉಡುಪರು ಪ್ರಿನ್ಸಿಪಾಲರಾಗಿ ಕಾರ್ಯ ನಿರ್ವಹಿಸಿದ್ದರು.

ಸಮಾಜ ವಿಜ್ಞಾನ ಮತ್ತುಇಂಗ್ಲಿಷ್ ಬೋಧನೆಯಲ್ಲಿ ರಾಮಚಂದ್ರ ಉಡುಪರದ್ದುಎತ್ತಿದ ಕೈ. ಎನ್‌ಸಿಇಆರ್‌ಟಿ ನಡೆಸಿದ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದ ಉಡುಪರು ಮುಂದೆರಾಷ್ಟ್ರೀಯ ಮಟ್ಟದತರಬೇತಿದಾರರಾಗಿರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ 300 ಕ್ಕೂ ಮೀರಿ ಕಾರ್ಯಾಗಾರಗಳನ್ನು ನಡೆಸಿಕೊಟ್ಟರು. ಪಶ್ಚಿಮ ಬಂಗಾಳ ರಾಜ್ಯದಲ್ಲೂ ಆಹ್ವಾನಿತರಾಗಿ ತರಬೇತಿ ಕೊಟ್ಟರು. 1970ರಲ್ಲಿ ಎನ್‌ಸಿಇಆರ್‌ಟಿ ರಾಷ್ಟ್ರೀಯ ಪ್ರಶಸ್ತಿಯನ್ನು ಡಿ.ಎಸ್.ಕೊಠಾರಿಯವರ ಕೈಯಿಂದ ಸ್ವೀಕರಿಸಿದ್ದರು. ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಯನ್ನು 1978ರಲ್ಲಿ ರಾಷ್ಟ್ರಪತಿ ಸಂಜೀವರೆಡ್ಡಿಯವರಿಂದ ಸ್ವೀಕರಿಸಿದ್ದರು. ಈ ಎಲ್ಲ ಪ್ರಶಸ್ತಿಗಳಿಗಿಂತಲೂ ಮಿಗಿಲಾದದ್ದು ಜಿಲ್ಲೆಯ ಅನೇಕ ಜನ ಪ್ರೌಢಶಾಲಾ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರು ಇಂಗ್ಲಿಷ್ ಭಾಷೆ ಬೋಧನೆ ಹಾಗೂ ಸಮಾಜ ವಿಜ್ಞಾನ ಬೋಧನೆಯಲ್ಲಿ ರಾಮಚಂದ್ರ ಉಡುಪರಿಂದ ತರಬೇತಿ ಪಡೆದರು ಎನ್ನುವುದು.

ಸಾಂಸ್ಕೃತಿಕ ಚೇತನ ಹಾಗೂ ವಿಚಾರವಾದಿ:

ವಿಚಾರವಾದಿ ದೃಷ್ಟಿ ಕೋನವು 1970ರ ಸಮುದಾಯದ ರಾಜ್ಯ ಜಾಥಾಗಳಲ್ಲಿ ನೀಡಿದ ಉಪನ್ಯಾಸಗಳಲ್ಲೂ, 1980ರ ಬಳಿಕ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ವಿದ್ಯಾರ್ಥಿ ಸಮೂಹಕ್ಕೆ ನೀಡಿದ ಕ್ಲಾಸುಗಳಿಂದಲೂ ಗೊತ್ತಾಗುತ್ತದೆ. ಸುಮಾರು 2000 ಇಸವಿಯವರೆಗೂ ಅವರ 80ರ ಪ್ರಾಯದವರೆಗೂ ಅವರು ಎಸ್‌ಎಫ್‌ಐಗೆ ಕ್ಲಾಸು ನಡೆಸಿದ್ದಾರೆ. ಅವರು ಶಿಕ್ಷಕರಾಗಿದ್ದ ಎಲ್ಲ ಶಾಲೆಗಳ ನಾಟಕ, ಯಕ್ಷಗಾನ ಚಟುವಟಿಕೆಗಳು ಸುತ್ತಮುತ್ತ ಇರುವ ಊರುಗಳಲ್ಲಿ ಸುಪ್ರಸಿದ್ಧವಾಗಿದ್ದವು. ಕಲಾವಿದರಾಗಿ, ನಿರ್ದೇಶಕರಾಗಿ ಅವರು ಖ್ಯಾತರಾಗಿದ್ದರು. ಅವರು ಸಿದ್ಧಪಡಿಸುತ್ತಿದ್ದ ನಾಟಕಗಳಿಗೆ ಅವರು ಅಳವಡಿಸುತ್ತಿದ್ದ ಸುಶ್ರಾವ್ಯ ಸಂಗೀತ ತುಂಬಾ ಜನಜನಿತವಾಗಿರುತ್ತಿತ್ತು.

ಎಲ್ಲ ಧಾರ್ಮಿಕ ಶ್ರದ್ಧೆಗಳನ್ನು ವೈಯುಕ್ತಿಕವಾಗಿ ಆಚರಿಸದೆ ಇದ್ದ ರಾಮಚಂದ್ರ ಉಡುಪರು, ತಮ್ಮ ದೇಹವನ್ನು ಮಣಿಪಾಲದ ಕಸ್ತೂರ್ಬ ವೈದ್ಯಕೀಯ ಕಾಲೇಜಿಗೆ ದಾನವಾಗಿತ್ತಿದ್ದಾರೆ. ಅವರ ದೇಹವನ್ನು ಮನೆಯಿಂದ ಬಿಟ್ಟುಕೊಡುವಾಗ ಯಾವ ಧಾರ್ಮಿಕ ವಿಧಿಗಳೂ ಇರಲಿಲ್ಲ. ಹಾಜರಿದ್ದ ಶಿಷ್ಯರು, ಹಿತೈಷಿಗಳು, ಕುಟುಂಬಿಕರು ಮೌನದ ಶ್ರದ್ಧಾಂಜಲಿ ಸಲ್ಲಿಸಿದರು.

ಹಳೆಯ ತಲೆಮಾರಿನ ಖ್ಯಾತ ಶಿಕ್ಷಕರು ಇಂದು ನೆನಪು ಮಾತ್ರ. 2003 ರಲ್ಲಿ ಅವರು ಪ್ರಕಟಿಸಿದ ಆತ್ಮಚರಿತ್ರೆ ಇಂದಿನ ತಲೆಮಾರಿಗೆ ಒಂದು ದಾರಿ ದೀಪ. ದ.ಕ.ಜಿಲ್ಲೆಯ ಶೈಕ್ಷಣಿಕ ಬೆಳವಣಿಗೆಯ ಒಂದು ಇತಿಹಾಸ ಕೂಡಾ.

– ವಾಸುದೇವ ಉಚ್ಚಿಲ್

ಕೇಳಿಸಿದ್ದು

ದ್ವೇಷವೇ ಅವರ ಅಪ್ಪ, ಅಸಹನೆಯೇ ಅಮ್ಮ, ಭ್ರಮೆಯೇ ಮೂಲಪುರುಷ"


ಕೇಂದ್ರ ಸಚಿವ ಅನಂತಕುಮಾರ್ ಹೆಗಡೆಯವರು ಯಲಬುರ್ಗಾ ತಾಲೂಕಿನ ಕುಕನೂರಿನಲ್ಲಿ ಆಡಿದ ಮಾತುಗಳನ್ನು ಕೇಳಿದರೆ ಬೆಚ್ಚಿಬೀಳುವಂತಾಗುತ್ತದೆ. "ಅಪ್ಪ ಅಮ್ಮನ ಗುರುತು ಇಲ್ಲದಿರುವವರು ಜಾತ್ಯಾತೀತರು ಎಂದು ಕರೆಸಿಕೊಳ್ಳುತ್ತಿದ್ದಾರೆ," ಎಂದು ಲೇವಡಿ ಮಾಡುತ್ತಾರೆ. ಈಗ ನಾವು ಅವರಿಗೆ ಅವರ ಅಪ್ಪ, ಅಮ್ಮನ ಗುರುತನ್ನು ತಿಳಿಸಿಕೊಡಬೇಕಾಗಿದೆ: ದ್ವೇಷವೇ ಅವರ ಅಪ್ಪ, ಅಸಹನೆಯೇ ಅವರ ಅಮ್ಮ, ಭ್ರಮೆಯೇ ಅವರ ಮೂಲ ಪುರುಷ, ಮಿಥ್ಯೆ ಎಂಬುದು ಅವರ ಜ್ಞಾನ ಸಂಪತ್ತು. ಇಷ್ಟು ಸಾಕೆನಿಸುತ್ತದೆ ... ...

ಆಮೇಲೆ ಹೆಗಡೆಯವರ ಇನ್ನೊಂದು ಮಾತು, "ಹುಟ್ಟಿದಾಗ ಪ್ರತಿಯೊಬ್ಬ ಮನುಷ್ಯನೂ ಪ್ರಾಣಿಯೇ. ಆದರೆ ಅವನು ಮಾಡುವ ಕೆಲಸ ಕಾರ್ಯಗಳಿಂದ ಮನುಷ್ಯನಾಗಿ ಬದಲಾಗುತ್ತಾನೆ," ಎನ್ನುತ್ತಾರೆ. ಇವರ ಕೇಸಲ್ಲಿ ಇದು ಯಾಕೋ ಉಲ್ಟಾ ಅನ್ನಿಸುತ್ತದೆ. ಅವರು ಅವರ ಗದ್ದಲದ ನಡುವೆ ಸ್ವಲ್ಪ ಕುವೆಂಪು ಅವರ, 'ಹುಟ್ಟುತ್ತಾ ವಿಶ್ವಮಾನವ' ಪರಿಕಲ್ಪನೆಯನ್ನು ಗಮನಿಸಲಿ ಎಂದು ವಿನಂತಿಸುವೆ.

ಹಾಗೆಯೇ, ಇವರ ಚರಿತ್ರೆಯ ಜ್ಞಾನವಂತೂ ಚಾರಿತ್ರ್ಯಹೀನವಾಗಿದೆ. "ಇತ್ತೀಚಿನ ದಿನಗಳಲ್ಲಿ ಜಾತಿ ಎನ್ನುವ ವಿಕೃತಿ ಬೆಳೆದಿದೆ," ಎನ್ನುತ್ತಾರೆ. ಗಮನಿಸಿ, 'ಇತ್ತೀಚೆಗೆ' ಅನ್ನುತ್ತಾರೆ. ಹಾಗಾದರೆ ಇವರಿಗೆ ಯಾವ ಕಾಲದ ಜಾತಿ ಬೇಕು? ಪೇಶ್ವೇ ಕಾಲದ್ದೇ? ಸಿಪಾಯಿದಂಗೆಯ ಪೇಶ್ವೆ ಮತ್ತು ಬ್ರಿಟಿಷರ ಯುದ್ಧದಲ್ಲಿ ಬ್ರಿಟಿಷರೇನಾದರೂ ಸೋತರೆ ಪೇಶ್ವೆಯ ಆಡಳಿತವು ತಳ ಸಮುದಾಯಕ್ಕೆ ನರಕ ಕಾಣಿಸಿಬಿಡುತ್ತದೆ ಎಂದು ಜ್ಯೋತಿಬಾ ಫುಲೆ ಆದಿಯಾಗಿ ತಳ ಸಮುದಾಯಗಳ ಪ್ರಜ್ಞಾವಂತರು ಕಂಗಾಲಾಗಿದ್ದರು. ಇದೇನು? ಇದು ಯಾಕೆ? ಎಂದು ಹೆಗಡೆಯವರು ಅರ್ಥ ಮಾಡಿಕೊಂಡರೆ ಅವರಿಗೆ ಭಾರತ ಅರ್ಥವಾಗುತ್ತದೆ.


ಮುಂದೆ ಹೆಗಡೆಯವರು ರಣರಂಗದಲ್ಲಿ ಠೇಂಕರಿಸುವಂತೆ, "ಸಂವಿಧಾನ ಬದಲಾಯಿಸುತ್ತೇವೆ. ಅದಕ್ಕೇ ನಾವು ಬಂದಿರುವುದು," ಎನ್ನುತ್ತಾರೆ. ಇಂಥವರ ಕೈಗೇನಾದರೂ ಸಂವಿಧಾನ ರಚನಾ ಕಾರ್ಯ ಆಗ ಸಿಕ್ಕಿಬಿಟ್ಟಿದ್ದರೆ, ಈ ಭ್ರಮಾಧೀನರು ನರಕ ಸೃಷ್ಟಿಸಿ ಅದನ್ನೇ ಸ್ವರ್ಗ ಅಂದುಬಿಡುತ್ತಿದ್ದರೇನೋ. ಸಂವಿಧಾನ ರಚನಾ ಕಾರ್ಯ ಡಾ.ಅಂಬೇಡ್ಕರ್ ಅವರ ಕೈಗೆ ಸಿಕ್ಕಿ ಭಾರತ ಮಾತೆ ಬಚಾವಾದಳು. ಸಂವಿಧಾನದ ಪ್ರಿಯಾಂಬಲ್ ಕಡೆಗೆ ಸಂವಿಧಾನದ ತಿದ್ದುಪಡಿಗಳು ಚಲಿಸಬೇಕಾಗಿದೆ. ಈ ನಮ್ಮ ಸಂಸತ್ ಸದಸ್ಯರು ಇದನ್ನು ನೆನಪಿನಲ್ಲಿಟ್ಟುಕೊಂಡರೆ ಒಳ್ಳೆಯದು.

ಕೊನೆಯದಾಗಿ ಅನಂತ ಕುಮಾರ್ ಹೆಗಡೆಯವರಿಗೆ ಒಂದು ಕಿವಿಮಾತು: ಕುವೆಂಪು ಅವರ ವೈಚಾರಿಕತೆಗೆ ತತ್ತರಿಸಿದ ಧರ್ಮಾಂದರು ತುಂಬಾ ನೀಚವಾಗಿ ಪ್ರತಿಕ್ರಿಯಿಸುತ್ತಿರುತ್ತಾರೆ. ಕುವೆಂಪು ಅಂಥದ್ದನ್ನೆಲ್ಲ ನಿರ್ಲಕ್ಷಿಸಿ ಹೇಳುತ್ತಾರೆ: "ಕುಸ್ತಿ ಅಖಾಡಕ್ಕೆ ಬರುವವರು ಕನಿಷ್ಠ ಲಂಗೋಟಿ ಹಾಕಿ ಬರಬೇಕು. ಲಂಗೋಟಿ ಹಾಕದೆ ಅಖಾಡಕ್ಕೆ ಬರುವವರ ಜೊತೆ ನಾನು ಕುಸ್ತಿ ಆಡಲಾರೆ." ಕುವೆಂಪು ಅವರ ಈ ಮಾತನ್ನು ಹೆಗಡೆಯವರು ಮನನ ಮಾಡಿಕೊಳ್ಳಲಿ ಎಂದು ವಿನಂತಿಸುವೆ. ಬೀದಿಯನ್ನೇ ಅಖಾಡ ಮಾಡಿಕೊಳ್ಳುವ ಹೆಗಡೆಯವರ ಮಾನ, ಮರ್ಯಾದೆ ಆಗ ಉಳಿಯಲೂಬಹುದು.



–ದೇವನೂರ ಮಹಾದೇವ

ವಿಮಾ ನೌಕರರ ಆಂದೋಲನದ ಹಿರಿಯ ಮುಖಂಡ ಎನ್.ಎಂ. ಸುಂದರಂ ನಿಧನ



ಭಾರತದ ವಿಮಾನೌಕರರ ಆಂದೋಲನದ ಹಿರಿಯ ಮುಖಂಡರಾದ ಎನ್.ಎಂ. ಸುಂದರಂ ಡಿಸೆಂಬರ್ 26 ರಂದು ನಿಧನರಾಗಿದ್ದಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಅಖಿಲ ಭಾರತ ವಿಮಾ ನೌಕರರ ಸಂಘದ ವಿವಿಧ ಹುದ್ದೆಗಳಲ್ಲಿ ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲ ದುಡಿದಿದ್ದ ಅವರು 16 ವರ್ಷ ಆ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ನಂತರ ಆರು ವರ್ಷ ಅದರ ಅಧ್ಯಕ್ಷರಾಗಿ ನೌಕರರ ಹೋರಾಟಗಳಿಗೆ ನೇತೃತ್ವ ನೀಡಿದ್ದರು. ಖಾಸಗೀಕರಣ ಮತ್ತು ಇತರ ನವ-ಉದಾರವಾದಿ ಧೋರಣೆಗಳ ವಿರುದ್ಧ ದೇಶದ ದುಡಿಯುವ ಜನಗಳ ಹೋರಾಟದಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರೆಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ಶ್ರದ್ಧಾಂಜಲಿ ಅರ್ಪಿಸಿದೆ.


ವಿಮಾ ಕಾರ್ಪೊರೇಷನ್ ನೌಕರರ ಸಂಘದ ಅಧ್ಯಕ್ಷರಾದ ವಿಜಯಕುಮಾರ್ ಹೇಳಿರುವಂತೆ ಎನ್.ಎಂ.ಸುಂದರಂ "ಮಧ್ಯಮ ವರ್ಗದ ನೌಕರರ ಸೀಮಿತ ಆರ್ಥಿಕ ಬೇಡಿಕೆಗಳ ಸ್ವಾರ್ಥದೋರೆಯನ್ನು ದುಡಿಯುವ ವರ್ಗದ ಹೋರಾಟಗಳ ಆಯಾಮಕ್ಕೆ ಒಗ್ಗಿಸಿದವರು. ಅವರ ತರ್ಕಬದ್ಧ ಪ್ರೌಢಿಮೆ ಮಾತಿನಲ್ಲಿ, ಬರಹದಲ್ಲಿ ಅನಾವರಣಗೊಳ್ಳುತ್ತಿತ್ತು.."

ಇತ್ತೀಚೆಗಷ್ಟೇ ನಮ್ಮ ರಾಜದ ಉಡುಪಿಯಲ್ಲಿ ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ 11ನೇ ಸಮ್ಮೇಳನದಲ್ಲಿ ಅವರು ಒಂದು ಗಂಟೆಗೂ ಹೆಚ್ಚು ಕಾಲ ಮಾತಾಡಿದ್ದು ಸಭಿಕರನ್ನು ಮೂಕವಿಸ್ಮಿತರಾಗಿಸಿತ್ತು.


ವಿಮಾ ನೌಕರರ ಆಂದೋಲನದ ಮುಖಂಡರಾಗಿ ಅವರು ಜಗವೆಲ್ಲ ಸುತ್ತಿ ಹಲವಾರು ಅಂತರ್ರಾಷ್ಟ್ರೀಯ ವಿಚಾರಸಂಕಿರಣಗಳು ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿದವರು, ಭಾರತದ ಹಲವು ವಿಶ್ವವಿದ್ಯಾಲಯಗಳಲ್ಲೂ ಉಪನ್ಯಾಸ ನೀಡಿದವರು.


ಅವರು ನವ-ಉದಾರವಾದಿ ಧೋರಣೆಗಳ ವಿವಿಧ ಆಯಾಮಗಳ ಬಗ್ಗೆ ಹಲವು ಪುಸ್ತಕಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ. ಅಖಿಲ ಭಾರತ ವಿಮಾ ನೌಕರರ ಸಂಘದ ಮಾಸಪತ್ರಿಕೆ 'ಇನ್ಶೂರೆನ್ಸ್ ವರ್ಕರ್'ನ ಸಂಪಾದಕರೂ ಆಗಿ ದುಡಿದಿದ್ದ ಅವರು ಅದರಲ್ಲಿ 'ಕಮ್ ಲೆಟ್ ಅಸ್ ಪ್ಲೇ ಪಾಲಿಟಿಕ್ಸ್'(ಬನ್ನಿ, ರಾಜಕೀಯ ಮಾಡೋಣ) ಎಂಬ ಮಾಲೆಯಲ್ಲಿ ದೇಶದಲ್ಲಿ ಮತ್ತು ಜಗತ್ತಿನೆಲ್ಲೆಡೆಗಳಲ್ಲೂ ದುಡಿಯುವ ವರ್ಗದ ಮೇಲೆ ನಡೆಯುತ್ತಿರುವ ಆರ್ಥಿಕ ದಾಳಿಗಳನ್ನು ವಿಶ್ಲೇಷಿಸುವ ಲೇಖನಗಳನ್ನು ಬರೆದಿದ್ದಾರೆ.


"ಸಮಾಜವಾದ ಸತ್ತಿದೆ ಎಂದು ಮಾತ್ರ ಹೇಳಬೇಡಿ; ಅದನ್ನು ಹಿಂದಕ್ಕೆ ತಳ್ಳಲಾಗಿದೆಯಷ್ಟೇ, ಹಿಂದೆ ಸರಿಯುವಂತೆ ಮಾಡಲಾಗಿದೆಯಷ್ಟೇ. ಅದು ಹೊಸ ಚೈತನ್ಯದೊಂದಿಗೆ ಮರಳಿ ಬರುತ್ತದೆ– ಏಕೆಂದರೆ ಜನರಿಗೆ ಅದು ಬೇಕಾಗಿದೆ–ಎಲ್ಲ ಜನರಿಗೆ. ಏನೇ ಆಗಲಿ, ಅದನ್ನು ಮರಳಿ ತರಬೇಕು.ಅದು ಮಾನವ ಸಮಾಜದ ಸಹಜ ಸ್ತಿತಿ. ಅದು ಖಂಡಿತವಾಗಿಯೂ ತನ್ನ ಆರಂಭದ ಅವಧಿಯಲ್ಲಿ ಮಾಡಿದ ತಪ್ಪುಗಳು ಮತ್ತು ಆದ ವಿಕೃತಿಗಳನ್ನು ಸರಿಪಡಿಸಿಕೊಂಡು, ನೀಗಿಸಿಕೊಂಡು ಬಂದೇ ಬರುತ್ತದೆ. ಆ ಬಗ್ಗೆ ಏನೇನೂ ಸಂದೇಹವಿಲ್ಲ. ನಮ್ಮೆಲ್ಲ ಹೋರಾಟಗಳು ಆ ಗುರಿಯತ್ತ ನಿರ್ದೇಶಿತವಾಗಿರಬೇಕು" ಎಂದು ಅವರ ಒಂದು ಲೇಖನದಲ್ಲಿ ಹೇಳಿದ ಮಾತುಗಳನ್ನು ಅವರ ಲೇಖನಗಳ ಪ್ರಕಟಣೆಯಲ್ಲಿ ನೆರವಾಗಿರುವ ಸಿ.ಆರ್.ಶಾನಭಾಗ ನೆನಪಿಸಿಕೊಂಡಿದ್ದಾರೆ. ●














ಮೂಡಬಿದರೆಯಲ್ಲಿ – ಪುಸ್ತಕ, ಕ್ಯಾಲೆಂಡರ್, ಡಿಸ್ಕೌಂಟ್ ಕೂಪನ್ ಬಿಡುಗಡೆ

ಮೂಡಬಿದರೆಯಲ್ಲಿ ಸೇರಲಿರುವ 22ನೇ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಈ ಕೆಳಗಿನವುಗಳನ್ನು ಬಿಡುಗಡೆ ಮಾಡಲಾಗುತ್ತಿದೆ :

- **ಕ್ರಿಯಾ ಪುಸ್ತಕದ ಮೂರು ಪ್ರಕಟನೆಗಳು**

1. ಕ್ಯಾಸ್ಟ್ರೋ ಕಥೆ (ಫಿಡೆಲ್ ಕ್ಯಾಸ್ಟ್ರೊ ಆತ್ಮಕತೆ) ಅನು: ಪ್ರಕಾಶ್ ಕೆ.
2. ಚಿತ್ತಗಾಂಗ್ ಶಸ್ತ್ರಾಗಾರ ಧಾಳಿ – ನನ್ನ ನೆನಪು (ಕಾಂ. ಸುಬೋಧ ರಾಯ್ ಆತ್ಮಕತೆ) ಅನು : ವಿಶ್ವ ಕುಂದಾಪುರ
3. ಹತ್ತು ಸೋವಿಯತ್ ಅದ್ಭುತಗಳು – ಲೇಖಕರು : ವಸಂತರಾಜ ಎನ್.ಕೆ., ವೇದರಾಜ ಎನ್.ಕೆ.

- ಮಾರ್ಕ್ಸ್ 200 ವಾರ್ಷಿಕೋತ್ಸವದ ಸಂದರ್ಭದಲ್ಲಿ 2018 ರ ವಿಶೇಷ **ಮಾರ್ಕ್ಸ್ ಕ್ಯಾಲೆಂಡರ್**
- **"ಮಾರ್ಕ್ಸ್ 200– ಕ್ಯಾಪಿಟಲ್ 150" ಯೋಜನೆಯ ಡಿಸ್ಕೌಂಟ್ ಕೂಪನ್ ಪೋಸ್ಟರ್ :**

ಕ್ರಿಯಾ–ನವಕರ್ನಾಟಕ ಜಂಟಿ ಪ್ರಕಟಣಾ ಯೋಜನೆಯ ಪ್ರಕಟಣೆಗಳಾದ ಬಂಡವಾಳ ಸಂಪುಟ –1 ಮತ್ತು ಇತರ ಆರು ಮಾರ್ಕ್ಸ್ ಕೃತಿಗಳು 5 ಮೇ 2018 ರ ಒಳಗೆ ಪ್ರಕಟವಾಗಲಿದೆ. ಈ ಪುಸ್ತಕಗಳ ಒಟ್ಟು ಮೌಲ್ಯ 2100.00 ರೂ. ಮುಂಗಡ ಹಣ ನೀಡಿ ಡಿಸ್ಕೌಂಟ್ ಕೂಪನ ಕೊಂಡರೆ 1400.00 ರೂಪಾಯಿಗೆ ಸಿಗಲಿದೆ.





ಫ್ಲೆಕ್ಸ್, ಬ್ಯಾನರ್ ಗಳನ್ನು ಹರಿದು ಹಾಕುವ ಸರಣಿ ಕೃತ್ಯಗಳು

ಜನವರಿ 2 ರಿಂದ ಮೂಡಬಿದ್ರೆಯಲ್ಲಿ ನಡೆಯುವ CPIM ರಾಜ್ಯ ಸಮ್ಮೇಳನದ ಮೇಲೆ ಕೋಮುವಾದಿಗಳ ದಾಳಿ ಶುರುವಾಗಿದೆ. ದುಡಿಯುವ ಜನ ತಮ್ಮ ದುಡಿಮೆಯ ಹಣದಿಂದ ಸಮ್ಮೇಳನದ ಪ್ರಚಾರಾರ್ಥ ಹಾಕಿರುವ ಫ್ಲೆಕ್ಸ್, ಬ್ಯಾನರ್ ಗಳನ್ನು ರಾತ್ರಿ ಹೊತ್ತು ಹರಿದು ಹಾಕುವ ಸರಣಿ ಕೃತ್ಯಗಳು ನಡೆದಿದೆ.

ನಮ್ಮಲ್ಲಿ ರಿಯಲ್ ಎಸ್ಟೇಟ್, ಶಿಕ್ಷಣ, ಲಿಕ್ಕರ್ ಲಾಬಿಯಿಂದ ಸಂಗ್ರಹಿಸಿದ, ಪ್ರಾಯೋಜಕತ್ವ ಪಡೆದ ಕಪ್ಪು ಹಣ ಇಲ್ಲ. ಬೆವರು ಸುರಿಸಿ ದುಡಿದ ದುಡಿಮೆಯ ಹಣದಿಂದ ಪ್ರಚಾರ ನಡೆಸುತ್ತಿದ್ದೇವೆ. ಹರಿಯುವುದು, ಕಿತ್ತು ಹಾಕುವುದು ನಿಮ್ಮ ಸಾಧನೆಯಾದರೆ ಮುಂದುವರಿಸಿ, ಜನವರಿ 2 ರಂದು ಸ್ವಯಂ ಪ್ರೇರಣೆಯಿಂದ ಸೇರುವ ಸಾವಿರ ಗಟ್ಟಲೆ ಜನರನ್ನು ನಿಮ್ಮ ಗೂಂಡಾಗಿರಿಯಿಂದ ತಡೆಯಲಾಗದು.

ಅತಿಥಿ ಅಂಕಣ



ಪ್ರೊ. ಟಿ. ಆರ್, ಚಂದ್ರಶೇಖರ

ಜಿ ಎಸ್ ಟಿ : 'ಒಟ್ಟು ಸಂಕಟದ ತೆರಿಗೆ'

ಜಿ ಎಸ್ ಟಿ ಯ ಸಂಗ್ರಹ ಜುಲೈನಲ್ಲಿ ರೂ.92283 ಕೋಟಿ, ಆಗಸ್ಟ್ ನಲ್ಲಿ ರೂ 90-669 ಕೋಟಿ, ಸೆಪ್ಟೆಂಬರ್‌ನಲ್ಲಿ ರೂ 92150 ಕೋಟಿಯಾಗಿದ್ದರೆ ಅಕ್ಟೋಬರ್‌ನಲ್ಲಿ ಅದು ರೂ. 83346 ಕೋಟಿಯಾಗಿತ್ತು. ಆದರೆ ನವೆಂಬರ್‌ನಲ್ಲಿ ರೂ 80808 ಕೋಟಿಯಾಗಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಕುಸಿತವುಂಟಾಗಿದೆ. ಆದರೆ ಇದಲ್ಲ ಸಮಸ್ಯೆ! ಸಮಸ್ಯೆಯಿರುವುದು ಸೈದ್ಧಾಂತಿಕವಾದುದು. ಜಿಎಸ್‌ಟಿ ಮೂಲಕ ಸರ್ಕಾರ ಎಷ್ಟು ತೆರಿಗೆ ಸಂಗ್ರಹ ಮಾಡಿಕೊಳ್ಳಲು ಬಯಸುತ್ತಿದೆಯೋ ಅಷ್ಟನ್ನು ವರಮಾನ ತೆರಿಗೆಯ ದರವನ್ನು ಈಗಿರುವ ಶೇ. 30ರ ಗರಿಷ್ಟ ದರದಿಂದ ಶೇ40 ರಷ್ಟಕ್ಕೆ ಏರಿಸಿದರೆ ಸಾಕು ಅಷ್ಟು ಸಂಗ್ರಹವಾಗುತ್ತದೆ. ಆದರೆ ಇದಕ್ಕೆ ಉದ್ದಿಮೆದಾರರ ಮರ್ಜಿಯಲ್ಲಿರುವ ಸರ್ಕಾರವು ಸಿದ್ಧವಿಲ್ಲ.

ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಸರಕು ಮತ್ತು ಸೇವೆ ತೆರಿಗೆಯ ಕ್ರಮವನ್ನು ಸ್ವಾತಂತ್ರ್ಯಾನಂತರದ ಬಹುದೊಡ್ಡ ತೆರಿಗೆ ಸುಧಾರಣೆ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ (ಈ ಸರ್ಕಾರಕ್ಕೆ 1991ರ ನರಸಿಂಹರಾವ್-ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು ಜಾರಿಗೊಳಿಸಿದ ಬೃಹತ್ ಆರ್ಥಿಕ ಸುಧಾರಣೆಗಿಂತ ನಮ್ಮದು ದೊಡ್ಡದು ಎಂದು ತೋರಿಸಿಕೊಳ್ಳುವ ರೋಗವಿದ್ದಂತೆ ಕಾಣುತ್ತದೆ). ಬಹು ತೆರಿಗೆ ವ್ಯವಸ್ಥೆಯಿಂದ ಏಕ ತೆರಿಗೆ ಪ್ರಭುತ್ವಕ್ಕೆ ಪರಿವರ್ತನೆಯಾಗಿದೆ ಎಂಬುದು ಅದರ ಮತ್ತೊಂದು ಹೆಗ್ಗಳಿಕೆ. ಅನಾಣ್ಯೀಕರಣದ ಸಂದರ್ಭದಲ್ಲಿ ಭರವಸೆ ನೀಡಿದಂತೆ ಇಲ್ಲಿಯೂ ಆರಂಭದಲ್ಲಿ ಜನರಿಗೆ – ವ್ಯಾಪಾರಗಾರರಿಗೆ ಇದರಿಂದ ತೊಂದರೆಯಾಗಬಹುದು. ಆದರೆ ದೀರ್ಘಾವಧಿಯಲ್ಲಿ ಎಲ್ಲರಿಗೂ ಇದರಿಂದ ಲಾಭವಾಗುತ್ತದೆ ಎಂದೂ, ಇದು ಎಲ್ಲರಿಗೂ ಸಂಭ್ರಮ ತರುತ್ತದೆ ಎಂದು ಹೇಳಲಾಗುತ್ತಿದೆ. ಇದರಿಂದ ದೇಶದ ಜಿ ಡಿ ಪಿ ಯಲ್ಲಿ ಶೇ.2 ರಷ್ಟು ಹೆಚ್ಚುವರಿ ಏರಿಕೆಯಾಗುತ್ತದೆ ಎಂದು ವಿತ್ತ ಮಂತ್ರಿಗಳು ಹೇಳುತ್ತಿದ್ದಾರೆ. ಅನಾಣ್ಯೀಕರಣವು ಯಾವ ಸಂಭ್ರಮವನ್ನು ಜನರಿಗೆ ತರಲಿಲ್ಲ. ಅದು ಜನರಿಗೆ ಸಂಕಟವನ್ನಷ್ಟೆ ನೀಡಿತು. ಅದು ಜಿ ಡಿ ಪಿ ಯಲ್ಲಿ ಏರಿಕೆಯನ್ನು ತರುವುದಕ್ಕೆ ಪ್ರತಿಯಾಗಿ ಕುಸಿತವನ್ನು ಉಂಟು ಮಾಡಿತು. ಜಿ ಎಸ್ ಟಿ ಯ ಕಥೆಯು ಇದಕ್ಕಿಂತ ಬೇರೆಯಾಗಿರುತ್ತದೆ ಅನ್ನುವುದಕ್ಕೆ ಆಧಾರಗಳೇನಿಲ್ಲ. ಅದು ತಂದಿದೆ ಅಥವಾ ತರುತ್ತದೆ ಅನ್ನುವ ಸಂಭ್ರಮಕ್ಕಿಂತ ಅದರಿಂದ ಸಾಮಾನ್ಯರಿಗೆ, ಸಣ್ಣ-ಪುಟ್ಟ ವ್ಯಾಪಾರಗಾರರಿಗೆ, ಅನೌಪಚಾರಿಕ ಮಾರುಕಟ್ಟೆಗೆ ಅದು ಇನ್ನಿಲ್ಲದ ಸಂಕಟವನ್ನು ತಂದಿದೆ ಎಂಬುದು ಮಾತ್ರ ನಿಜವಾಗಿದೆ. ಇದರಿಂದ ಸಂಭ್ರಮ ಕೆಲವರಿಗೆ, ಸಂಕಟ ಹಲವರಿಗೆ ಅನ್ನುವಂತಾಗಿದೆ.

ಬೃಹತ್ ಉತ್ಪಾದಕರಿಗೆ, ಸರಣಿ ಮಾರುಕಟ್ಟೆ ಉದ್ದಿಮೆಗಾರರಿಗೆ, ಲೆಕ್ಕಪರಿಶೋಧಕರಿಗೆ, ಸರ್ಕಾರಕ್ಕೆ ಇದು ನಿಜಕ್ಕೂ ಸಂಭ್ರಮದ ಸಂಗತಿಯಾಗಿದೆ. ಈಗಾಗಲೆ ಡಿಜಿಟಲೈಸೇಶನ್‌ಗೆ ಪಕ್ಕಾಗಿರುವುದರಿಂದ ಜಿಎಸ್‌ಟಿ ಪರಿಪಾಲನೆಯು ಅವರಿಗೆ ಯಾವ ಹೆಚ್ಚುವರಿ ವೆಚ್ಚವು ಉಂಟಾಗುವುದಿಲ್ಲ. ಲೆಕ್ಕಪರಿಶೋಧಕರ ತಂಡ ಅವರ ಬಳಿಯಿರುವುದರಿಂದ ಅವರಿಗೆ ಹೊಸದಾಗಿ ಅವರನ್ನು ನೇಮಿಸಿಕೊಳ್ಳುವ ಅಥವಾ ಅವರ ಸೇವೆಯನ್ನು ಪಡೆಯುವ ಪ್ರಮೇಯ ಬರುವುದಿಲ್ಲ. ಆದರೆ ಅತಿಸಣ್ಣ, ಸಣ್ಣ, ಮಧ್ಯಮಗಾತ್ರದ ಉದ್ದಿಮೆಗಳಿಗೆ ಮತ್ತು ಮುಖ್ಯವಾಗಿ ಅನೌಪಚಾರಿಕ ಮಾರುಕಟ್ಟೆಯಲ್ಲಿ ವ್ಯವಹರಿಸುವವರಿಗೆ ಇದು ಸಂಕಟದ ಸಂಗತಿಯಾಗಿದೆ. ಇಂದು ಸರ್ಕಾರವು ಪ್ರಜ್ಞಾಪೂರ್ವಕವಾಗಿ ಜಿ ಎಸ್ ಟಿ ಗೆ ಸಂಬಂಧಿಸಿದಂತೆ ದೊಡ್ಡ ಉದ್ದಿಮೆಗಾರರಿಗೆ ಉಂಟಾಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಹೆಚ್ಚಿನ ಗಮನ ನೀಡುತ್ತಿದೆ ವಿನಾ ಅತಿ ಸಣ್ಣ, ಸಣ್ಣ, ಮತ್ತು ಮಧ್ಯಮ ಗಾತ್ರದ ಹಾಗೂ ಅನೌಪಚಾರಿಕ ಮಾರುಕಟ್ಟೆಯಲ್ಲಿ ಉತ್ಪಾದಕರು ಎದುರಿಸುತ್ತಿರುವ ಸಮಸ್ಯೆಗೆ ಬಗ್ಗೆ ಸರ್ಕಾರ ಗಮನ ಹರಿಸುತ್ತಿಲ್ಲ. ಪ್ರಮುಖ ಸಾಂಖ್ಯಿಕ ತಜ್ಞ ಪ್ರಣಬ್ ಸೆನ್ ಪ್ರಕಾರ ತೆರಿಗೆ ಮೊತ್ತದ ಅನಿಶ್ಚಿತತೆಯಿಂದ 2018-19ರ ಬಜೆಟ್ ಸಿದ್ಧತೆಯು ಕೇವಲ ಊಹೆಯ ಮೇಲೆ ನಡೆಯುವ ಸಾಧ್ಯತೆಯಿದೆ. ಜಿಎಸ್‌ಟಿ ಸಂಗ್ರಹದಲ್ಲಿನ ಕುಸಿತವು 2018-19ರ ಬಜೆಟ್ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿದೆ.

ತೆರಿಗೆ ಕಟ್ಟದವರ ಸಮಾಜ ಭಾರತ

ನಮ್ಮ ವಿತ್ತ ಮಂತ್ರಿಯವರು ಮತ್ತೆ ಮತ್ತೆ ನಮ್ಮ ಸಮಾಜವನ್ನು 'ತೆರಿಗೆ ಪಾವತಿ ಪಾಲಿಸದ ಸಮಾಜ' ಎಂದು ಹೇಳುತ್ತಿದ್ದಾರೆ. ಈಗ ಜಾರಿಗೆ ಬಂದಿರುವ ಜಿಎಸ್‌ಟಿಯು ಇದನ್ನು ಬದಲಾಯಿಸಿ ತೆರಿಗೆ ಪಾವತಿ ಪಾಲಿಸುವವರ ಸಮಾಜವನ್ನಾಗಿ ಪರಿವರ್ತಿಸುತ್ತದೆ ಎಂದೂ ಹೇಳುತ್ತಿದ್ದಾರೆ. ಇದನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡುವ ಅಗತ್ಯವಿದೆ. ಅರ್ಥಶಾಸ್ತ್ರದ ಪ್ರಥಮ ಪಾಠವೆಂದರೆ ಜನರ-ಸಮಾಜದ ತೆರಿಗೆ ಕಟ್ಟುವ ಸಾಮರ್ಥ್ಯವು ಜನರ ಮತ್ತು ಆರ್ಥಿಕತೆಯ ವರಮಾನದ ಮಟ್ಟವನ್ನು ಸಾಮಾನ್ಯವಾಗಿ ಅವಲಂಬಿಸಿದೆ. ಆದರೆ ಜಿಎಸ್‌ಟಿಯು ಅರ್ಥಶಾಸ್ತ್ರದ ಪ್ರಥಮ ಪಾಠಕ್ಕೆ ವಿರುದ್ಧವಾದುದಾಗಿದೆ. ಏಕೆಂದರೆ ಜಿಎಸ್‌ಟಿಯಲ್ಲಿ ಜನರ ವರಮಾನ ಮಟ್ಟವನ್ನು ಪರಿಗಣಿಸುವುದಿಲ್ಲ. ಈ ತೆರಿಗೆಗಳು ಬಲ್ಲಿದರಿಗೂ ಒಂದೆ, ಬಡವರಿಗೂ ಒಂದೆ. ಈ ತೆರಿಗೆಗಳ ಮೂಲ ಉದ್ದೇಶ ಸರ್ಕಾರದ ಬೊಕ್ಕಸವನ್ನು ಭರ್ತಿ ಮಾಡಿಕೊಳ್ಳುವುದು. ನಮ್ಮ ವಿತ್ತ ಮಂತ್ರಿ ಹೇಳುವಂತೆ ಪ್ರತಿಯೊಬ್ಬರೂ ತೆರಿಗೆ ಕಟ್ಟುವಂತೆ ಮಾಡಬೇಕು.

ನಮ್ಮ ಸರ್ಕಾರವು ಅಪ್ರತ್ಯಕ್ಷ ತೆರಿಗೆಗಳ ಬಗ್ಗೆ(ಜಿಎಸ್‌ಟಿ) ತೋರುತ್ತಿರುವಷ್ಟು ಆಸಕ್ತಿ, ಉತ್ಸಾಹ, ಕಠಿಣ ನಿಲುವು, ಜಾರಿಗೆ ಕ್ರಮಗಳು ಮುಂತಾದವುಗಳನ್ನು ನೇರ ತೆರಿಗೆಗಳ ಬಗ್ಗೆ ಪ್ರದರ್ಶಿಸಲಾರದು. ಏಕೆಮದರೆ ನಮ್ಮ ಸರ್ಕಾರದ ಸಾಮಾಜಿಕ ಧೋರಣೆ ಉಳ್ಳವರನ್ನು ಓಲೈಸುವುದು, ಅವರ ಹಿತಾಸಕ್ತಿಗಳನ್ನು ಕಾಪಿಡುವುದು, ಅವರು ಸದಾ ಸಂಭ್ರಮದಿಂದಿರುವಂತೆ ನೋಡಿಕೊಳ್ಳುವುದು. ಜಿ ಎಸ್ ಟಿ ಕಟ್ಟುವ ಸಾಮಾನ್ಯ ಜನರ ಕೋಪತಾಪಗಳನ್ನು ಸರ್ಕಾರ ನಿರ್ವಹಿಸಬಲ್ಲದು. ಅದೇ ಉಳ್ಳವರ ಕೋಪತಾಪವನ್ನು ಎದುರಿಸುವುದು ಸರ್ಕಾರಗಳಿಗೆ ಸಾಧ್ಯವಿಲ್ಲ. ಉಳ್ಳವರ ಅಸಮಧಾನದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಅಧಿಕಾರದಲ್ಲಿರುವದೇ ಕಷ್ಟವಾಗುತ್ತದೆ.

ಈಗ ಸಕಾರವು ಪ್ರಕಟಿಸಿರುವಂತೆ ಜಿ ಎಸ್ ಟಿ ಯ ಸಂಗ್ರಹ ಜುಲೈನಲ್ಲಿ ರೂ.92283 ಕೋಟಿ, ಆಗಸ್ಟ್ ನಲ್ಲಿ ರೂ 90-669 ಕೋಟಿ, ಸೆಪ್ಟೆಂಬರ್‌ನಲ್ಲಿ ರೂ 92150 ಕೋಟಿಯಾಗಿದ್ದರೆ ಅಕ್ಟೋಬರ್‌ನಲ್ಲಿ ಅದು ರೂ. 83346 ಕೋಟಿಯಾಗಿತ್ತು. ಆದರೆ ನವೆಂಬರ್‌ನಲ್ಲಿ ರೂ 80808 ಕೋಟಿಯಾಗಿದೆ. ಜಿ ಎಸ್ ಟಿ ಸಂಗ್ರಹದಲ್ಲಿ ಕುಸಿತವುಂಟಾಗಿದೆ. ಆದರೆ ಇದಲ್ಲ ಸಮಸ್ಯೆ! ಸಮಸ್ಯೆಯಿರುವುದು ಸೈದ್ಧಾಂತಿಕವಾದುದು. ಜಿಎಸ್‌ಟಿ ಮೂಲಕ ಸರ್ಕಾರ ಎಷ್ಟು ತೆರಿಗೆ ಸಂಗ್ರಹ ಮಾಡಿಕೊಳ್ಳಲು ಬಯಸುತ್ತಿದೆಯೋ ಅಷ್ಟನ್ನು ವರಮಾನ ತೆರಿಗೆಯ ದರವನ್ನು ಈಗಿರುವ ಶೇ. 30ರ ಗರಿಷ್ಟ ದರದಿಂದ ಶೇ40 ರಷ್ಟಕ್ಕೆ ಏರಿಸಿದರೆ ಸಾಕು ಅಷ್ಟು ಸಂಗ್ರಹವಾಗುತ್ತದೆ. ಆದರೆ ಇದಕ್ಕೆ ಉದ್ದಿಮೆದಾರರ ಮರ್ಜಿಯಲ್ಲಿರುವ ಸರ್ಕಾರವು ಸಿದ್ಧವಿಲ್ಲ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಅನೇಕರು ಜಿಎಸ್‌ಟಿ ಒಂದು ಒಳ್ಳೆಯ ತೆರಿಗೆ ಕ್ರಮ. ಆದರೆ ಅದರ ಅನುಷ್ಠಾನ ಸರಿಯಾಗಿ ನಡೆಯುತ್ತಿಲ್ಲ ಭಾವಿಸಿದ್ದಾರೆ. ತಪ್ಪು. ಅನಾಣ್ಯೀಕರಣದಂತೆ ಇಲ್ಲಿಯೂ ಅನುಷ್ಠಾನದ ಕ್ಷಮತೆ ಅತೃಪ್ತಿಕರವಾಗಿದೆ. ನಾವು ಗಮನಿಸಬೇಕಾದುದು ಅದು ಸಣ್ಣ-ಪುಟ್ಟ ವ್ಯಾಪಾರಿಗಳಿಗೆ, ಅನೌಪಚಾರಿಕ ಮಾರುಕಟ್ಟೆಗೆ ಉಂಟು ಮಾಡುತ್ತಿರುವ ಅಘಾತಕಾರಿ ಪರಿಣಾಮಗಳು. ಇವರೆಲ್ಲ ಜಿ ಎಸ್ ಟಿ ಯನ್ನು ಪಾಲಿಸಬೇಕಾದರೆ ಲೆಕ್ಕಪರಿಶೋದಕರನ್ನು ನೇಮಿಸಿಕೊಳ್ಳಬೇಕಾಗುತ್ತದೆ, ಮಾಹಿತಿ ತಂತ್ರಜ್ಞಾನಕ್ಕೆ ಮೊರೆ ಹೋಗಬೇಕಾಗುತ್ತದೆ, ಪ್ರತಿಯೊಂದು ವ್ಯವಹಾರಕ್ಕೂ ಲೆಕ್ಕ ಇಡಬೇಕಾಗುತ್ತದೆ. ಹಾಗಾದರೆ ಇವೆಲ್ಲ ಬೇಡವೇ ಅಂದರೆ ಉತ್ತರ ಬೇಕು. ಆದರೆ ಇವೆಲ್ಲವನ್ನೂ ಜನರು ಒಂದು ರಾತ್ರಿ-ಹಗಲಿನಲ್ಲಿ ಸಾಧಿಸಿಕೊಳ್ಳುವುದು ಅಸಾಧ್ಯ. ಇದನ್ನು ಸರ್ಕಾರವು ಬಲವಂತದಿಂದ ಹೇರುತ್ತಿರುವುದು ಪುಟ್ಟ ವ್ಯಾಪಾರಿಗಳ ಹಿಂಸೆಗೆ ಕಾರಣವಾಗುತ್ತದೆ. ಜಿಎಸ್‌ಟಿ ಪಾವತಿಸಲು ಪುಟ್ಟ ವ್ಯಾಪಾರಿಗಳು ಬಂಡವಾಳವನ್ನು ವಿನಿಯೋಗಿಸಬೇಕಾಗುತ್ತದೆ. ಇದು ಅನವಶ್ಯಕ. ಅದರಲ್ಲೂ ಅನೌಪಚಾರಿಕ ಮಾರುಕಟ್ಟೆಯಲ್ಲಿ ಹೆಚ್ಚು ಮಹಿಳೆಯರು ವ್ಯಾಪಾರದಲ್ಲಿ ನಿರತರಾಗಿದ್ದಾರೆ. ಇವರೆಲ್ಲರಿಂದಲೂ ಜಿಎಸ್‌ಟಿ ನಿರೀಕ್ಷಿಸುವುದು ಅನ್ಯಾಯ. ಅದರಲ್ಲೂ ಈ ತೆರಿಗೆ ಪಾವತಿಸಲು ಅನೇಕ ಫಾರಂಗಳನ್ನು ತುಂಬಬೇಕು. ಅವರು ತುಂಬಿದ ಫಾರಂನ ವಿವರಗಳು ಸರಬರಾಜುದಾರರು ನೀಡಿದ ವಿವರಗಳಿಗೆ ತಾಳೆಯಾಗಬೇಕು. ಇವೆಲ್ಲ ತೆರಿಗೆ ಪಾವತಿಗಾರರು ಎದುರಿಸಬೇಕಾದ ಸಮಸ್ಯೆಯಾಗಿದೆ. ಇದೊಂದು ವಿಷಚಕ್ರದಂತಿದೆ.

ಈ-ವೇ ಬಿಲ್ಲು ಕಥೆ

ಈ ಕ್ರಮದ ಪಾಲನೆಯನ್ನು ನಿಭಾಯಿಸಲು ... ನ್ ನ್ ಪಿ ಸಿ ಕ್ ಒಂ ಡ್ ರ್ ಭಯವಾಗುತ್ತದೆ. 'ಒಂದು ದೇಶ-ಒಂದು ತೆರಿಗೆ' ಅನ್ನುವುದನ್ನು ಸಾಧಿಸಿಕೊಳ್ಳಬೇಕಾದರೆ ಈ-ವೇ ಬಿಲ್ಲು ವ್ಯವಸ್ಥೆಯ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ವಾಸ್ತವವಾಗಿ ಇದು ಸರಕುಗಳ ಸಾಗಣಿಕೆಗೆ ಸಂಬಂಧಿಸಿದ ಅನುಮತಿ ಪ್ರಮಾಣ ಪತ್ರ. ಇದರಲ್ಲಿ ಅನೇಕ ಜಟಿಲ ಸಂಗತಿಗಳಿವೆ. ಅಂತರ-ರಾಜ್ಯ ಸರಕು ಸಾಗಣಿಕೆಯನ್ನು ನಿಯಂತ್ರಿಸುವ ಉದ್ದೇಶ ಈ-ವೇ ಬಿಲ್ಲಿಗಿದೆ. ಇದನ್ನು ಜಾರಿಗೆ ತರುವುದಕ್ಕೆ ಸರ್ಕಾರವು ಮೀನಮೇಷವೆಣಿಸುತ್ತಿದೆ.

ನಮ್ಮ ವಿತ್ತ ಮಂತ್ರಿಗಳು ಜಿಎಸ್‌ಟಿಯು ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತದೆ ಎಂದು ಹೇಳುತ್ತಿದ್ದಾರೆ. ವಾಸ್ತವ ಇದಕ್ಕೆ ವಿರುದ್ಧವಾಗಿದೆ. ಈ ತೆರಿಗೆಯು ಕೇಂದ್ರೀಕರಣಕ್ಕೆ ಅವಕಾಶ ಮಾಡಿಕೊಡುತ್ತದೆ. ಕೇಂದ್ರದ ಮರ್ಜಿಯಲ್ಲಿ ರಾಜ್ಯಗಳು ತಮ್ಮ ಹಣಕಾಸು ವ್ಯವಸ್ಥೆಯನ್ನು ನಿರ್ವಹಿಸಬೇಕಾಗುತ್ತದೆ. ಕೇಂದ್ರ ಸರ್ಕಾರವು ಆಶ್ವಾಸನೆ ನೀಡಿದಂತೆ ದೀರ್ಘಾವಧಿಯಲ್ಲಿ ಅನಾಣ್ಯೀಕರಣವು ಬಡವರಿಗೆ ಅನೇಕ ಬಗೆಯ ಅನುಕೂಲಗಳು ಉಂಟಾಗುತ್ತವೆ ಎಂಬುದು ಹುಸಿಯಾಗಿದೆ. ಇದುವರೆವಿಗೂ ಅದರಿಂದ ಏನೆಲ್ಲ ಅನುಕೂಲಗಳುಂಟಾಗಿವೆ ಎಂಬುದರ ಕೇಂದ್ರ ವಿವರಣೆ ನೀಡಿಲ್ಲ. ಸಾರ್ವಜನಿಕರ ನೆನಪು ಅಲ್ಪಾವಧಿ ಎಂಬ ಮಾತಿದೆ. ಆದರೆ ಇದನ್ನು ಸಾರ್ವತ್ರಿಕ ಸಂಗತಿ ಎಂದು ತಿಳಿಯುವುದು ಸಾಧ್ಯವಿಲ್ಲ. ಭಾರತದಂತಹ ಉಪಖಂಡ ವಿಸ್ತಾರದ ದೇಶದಲ್ಲಿ ಒಂದು ತೆರಿಗೆ ಅನ್ನುವುದು ಅವಾಸ್ತವಿಕ. ಇಂದು ಅಖಂಡತೆಗೆ ಬಗ್ಗೆ ಹುಚ್ಚು ಭ್ರಮೆ ಎಲ್ಲ ಕಡೆ ಹರಡುತ್ತಿದೆ. ಬಹುವಚನ ಸಾಮಾಜಿಕ ವ್ಯವಸ್ಥೆಗೆ ಇದು ಸೂಕ್ತವಾದ ತೆರಿಗೆಯಲ್ಲ. ಈ ಎಲ್ಲ ಬೆಳವಣಿಗೆಗಳು ಒಕ್ಕೂಟ ವ್ಯವಸ್ಥೆಗೆ ದಕ್ಕೆ ಉಂಟು ಮಾಡುತ್ತದೆ. ಈ ತೆರಿಗೆ ಸುಧಾರಣೆಯು ಉಳ್ಳವರಿಗೆ ಸಂಭ್ರಮವನ್ನು ಉಂಟು ಮಾಡಿದರೆ ಉಳಿದವರಿಗೆ ಸಂಕಟವನ್ನು ತರುತ್ತದೆ. ಇದು 'ಒಟ್ಟು ಸಂಕಟದ ತೆರಿಗೆ' ಅನ್ನುವಂತಾಗಿದೆ. ●

ಪ್ರತಿಗಾಮಿ ಅಪ್ರತ್ಯಕ್ಷ ತೆರಿಗೆ ಜಿಎಸ್‌ಟಿ

ತೆರಿಗೆಗಳಲ್ಲಿ ಎರಡು ವಿಧ. ಮೊದಲನೆಯದು ಪ್ರತ್ಯಕ್ಷ ತೆರಿಗೆ. ಉದಾಹರಣೆಗೆ ವರಮಾನ ತೆರಿಗೆ. ಎರಡನೆಯದು ಅಪ್ರತ್ಯಕ್ಷ ತೆರಿಗೆ. ಉದಾಹರಣೆಗೆ ಮಾರಾಟ ತೆರಿಗೆ, ಅಬಕಾರಿ ತೆರಿಗೆ ಮುಂತಾದವು. ಮೊದಲನೆಯದು ನೇರವಾಗಿ ಉಳ್ಳವರ ವರಮಾನದ ಮೇಲೆ ವಿಧಿಸುವ ತೆರಿಗೆಯಾಗಿದೆ. ಇದು ಆರೋಹಣ ತೆರಿಗೆ. ವ್ಯಕ್ತಿಯ ವರಮಾನ ಏರಿಕೆಯಾದಂತೆ ಅವರು ನೀಡಬೇಕಾದ ತೆರಿಗೆ ದರವೂ ಏರಿಕೆಯಾಗುತ್ತದೆ. ನಮ್ಮ ದೇಶದಲ್ಲಿ ಗರಿಷ್ಠ ಪ್ರತ್ಯಕ್ಷ ತೆರಿಗೆ ದರ ಶೇ.30. ಕಾರ್ಪೋರೇಟ್ ವರಮಾನ ತೆರಿಗೆ ದರವನ್ನು ಶೇ.30 ರಿಂದ ಶೇ.25ಕ್ಕಿಳಿಸಬೇಕು ಎಂಬುದು ಉದ್ದಿಮೆ ವಲಯದ ಬೇಡಿಕೆಯಾಗಿದೆ ಮತ್ತು ಸರ್ಕಾರವೂ ಅದರ ಪರವಾಗಿದೆ. ಸರಕು ಮತ್ತು ಸೇವೆ ತೆರಿಗೆಯು ಅಪ್ರತ್ಯಕ್ಷ ತೆರಿಗೆ. ಅಂದರೆ ಸಾಮಾನ್ಯ ಕೂಲಿಕಾರ ಹೆಣ್ಣು ಮಗಳು ಹಣ್ಣನ್ನು ಕೊಂಡಾಗ ಎಷ್ಟು ಜಿ ಎಸ್ ಟಿ ಸಲ್ಲಿಸುತ್ತಾಳೋ ಅಷ್ಟೇ ತೆರಿಗೆಯನ್ನು ದಿನಕ್ಕೆ ಕೋಟ್ಯಾಂತರ ವರಮಾನ ಗಳಿಸುವ ಮುಖೇಶ್ ಅಂಬಾನಿ ಹಣ್ಣನ್ನು ಕೊಂಡಾಗ ಅದೇ ದರದಲ್ಲಿ ತೆರಿಗೆ ಸಲ್ಲಿಸುತ್ತಾರೆ. ಇದು ನ್ಯಾಯಸಮ್ಮತ ತೆರಿಗೆಯಲ್ಲ. ಅದು ಪ್ರತಿಗಾಮಿ ತೆರಿಗೆ.





ಪ್ರತಿಗಾಮಿ ಶಕ್ತಿಗಳ ಆಟಾಟೋಪಗಳ ಏರಿಕೆಯೊಂದಿಗೆ ಆರಂಭವಾದ 2017 ಕೊನೆಗೊಳ್ಳುವ ವೇಳೆಗೆ ಅವುಗಳ ವಿರುದ್ಧ ಪ್ರತಿರೋಧದ ಶಕ್ತಿಗಳು ಸೆಟೆದು ನಿಲ್ಲುವುದು ಆರಂಭವಾಗಿದೆ. ಜನರ ಜೀವನೋಪಾಯದ ವಿರುದ್ಧದ ದಾಳಿಗಳ ವಿರುದ್ಧ, ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮತ್ತು ಹಿಂದೂತ್ವ ಕೋಮುವಾದದ ವಿರುದ್ಧ ಹೋರಾಟಗಳನ್ನು ಹೆಚ್ಚಿಸುವುದು, ಈ ವಿಷಯಗಳ ಮೇಲೆ ಜನತೆಯ ಏಕತೆಯನ್ನು ಕಟ್ಟಿ ಬೆಳೆಸಿ ಬಿಜೆಪಿಯನ್ನು ಸೋಲಿಸಲು ಅಗತ್ಯವಾದ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲ ಐಕ್ಯತೆ ಮೂಡಿ ಬರುವಂತೆ ಮಾಡುವುದು – ಇದು 2018ರ ಸಂಕಲ್ಪವಾಗಲಿ.

ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳ ವಿಶಾಲ ಐಕ್ಯತೆ



2018ಕ್ಕೆ ನಮ್ಮ ಸಂಕಲ್ಪ

* ಪ್ರಕಾಶ್ ಕಾರಟ್



ಈಗಷ್ಟೇ ಮುಗಿಯುತ್ತಿರುವ 2017ನೇ ವರ್ಷದ ಬಗ್ಗೆ ಒಮ್ಮೆ ಹೊರಳಿ ನೋಡಿದಾಗ ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಗಮನಿಸಲೇ ಬೇಕಾದ ಒಂದು ಮಹತ್ವದ ಅಂಶ ಕಾಣುತ್ತದೆ. ಈ ವರ್ಷ ಅನಾವರಣಗೊಂಡದ್ದು ಪ್ರತಿಗಾಮಿ ಶಕ್ತಿಗಳ ಆಟಾಟೋಪಗಳ ಏರಿಕೆಯೊಂದಿಗೆ. ಆದರೆ ವರ್ಷದ ಕೊನೆಯ ಮೂರು ತಿಂಗಳ ಅವಧಿಯಲ್ಲಿ ಬಲಪಂಥೀಯ ಶಕ್ತಿಗಳ ವಿರುದ್ಧ ಪ್ರತಿರೋಧದ ಶಕ್ತಿಗಳು ಸೆಟೆದು ನಿಲ್ಲಲು ಆರಂಭಿಸಿವೆ, ತಮ್ಮ ಅಸ್ತಿತ್ವವನ್ನು ತೋರ್ಪಡಿಸಿಕೊಂಡಿವೆ.

2017ರಲ್ಲಿ ಬಲಪಂಥೀಯ ಶಕ್ತಿಗಳ ದಾಳಿಯ ಬಹುಪಾಲು ಹೊರೆಯನ್ನು ಎದುರಿಸಬೇಕಾದ್ದು ಜನತೆಯೇ. ನರೇಂದ್ರ ಮೋದಿ ಸರಕಾರದ ಆಡಳಿತದಡಿಯಲ್ಲಿ ಹಿಂದೂತ್ವವಾದಿ ಶಕ್ತಿಗಳು ಭಂಡತನ ಹೆಚ್ಚಿಸಿಕೊಂಡಿವೆ. ಗೋರಕ್ಷಕರೆನಿಸಿಕೊಳ್ಳುವವರ ಅಟ್ಟಹಾಸಕ್ಕೆ ರಾಜಸ್ತಾನದ ಆಳ್ವಾರ್‌ನಲ್ಲಿ ಪೆಹಲೂ ಖಾನ್ ಹತ್ಯೆ ಸಾಕ್ಷಿಯಾಯಿತು. ದ್ವೇಷದ ಪ್ರಚಾರಕ್ಕೆ ಜುನೈದ್ ಖಾನ್ ಮತ್ತು ಅಫ್ರಾಜುಲ್‌ರಂಥವರು ಬಲಿಯಾದರು. ಯಾವ ರೀತಿಯ ಸಿನಿಮಾ ಪ್ರದರ್ಶನ ಆಗಬೇಕು, ಯಾವ ರೀತಿಯ ಪುಸ್ತಕ ಓದಬೇಕು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಏನನ್ನು ಕಲಿಸಬೇಕು ಎಂದು ಡಿಕ್ಟೇಟ್ ಮಾಡುವ ಮಟ್ಟಕ್ಕೆ ಬಂದಿವೆ ಹಿಂದುತ್ವವಾದಿ ಶಕ್ತಿಗಳು.

ರಾಜಕೀಯವಾಗಿ ನೋಡಿದರೆ, ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭಾರೀ ವಿಜಯ ಸಾಧಿಸುವುದರೊಂದಿಗೆ ವರ್ಷ ಆರಂಭವಾಯಿತು. ಆದಿತ್ಯನಾಥ ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗುವುದರೊಂದಿಗೆ ಉನ್ಮತ್ತ ಬಲಪಂಥೀಯ ಕೋಮುವಾದಿ ರಾಜಕೀಯದ ಶಕೆ ಆರಂಭವಾದಂತಾಯಿತು. ಬಹುಮತ ಪಡೆಯಲು ವಿಫಲವಾದ ಗೋವಾ ಮತ್ತು ಮಣಿಪುರದಲ್ಲಿ ಕೂಡ ಕತಂತ್ರದಿಂದ ಸರಕಾರ ರಚಿಸಲು ಈ ಶಕ್ತಿಗಳಿಗೆ ಸಾಧ್ಯವಾಯಿತು. ಅದು ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ನ್ನು ಸೋಲಿಸಿತು. ಗುಜರಾತ್‌ನಲ್ಲಿ ಅಧಿಕಾರ ಉಳಿಸಿಕೊಳ್ಳಲು ಅದಕ್ಕೆ ಸಾಧ್ಯವಾಯಿತಾದರೂ ಚುನಾವಣೆಯಲ್ಲಿ ಅದು ತೀವ್ರ ಪ್ರತಿರೋಧ ಎದುರಿಸಿದ್ದಂತೂ ನಿಜ. ಪಂಜಾಬ್‌ನಲ್ಲಿ ಮಾತ್ರವೇ ಅಕಾಲಿ–ಬಿಜೆಪಿ ಕೂಟವನ್ನು ಸೋಲಿಸಲು ಕಾಂಗ್ರೆಸ್‌ಗೆ ಸಾಧ್ಯವಾಯಿತು.

ಆರ್ಥಿಕ ಕ್ಷೇತ್ರದ ಬಗ್ಗೆ ಹೇಳುವುದಾದರೆ, 2016ರ ಕೊನೆಯಲ್ಲಿ ಘೋಷಿಸಲಾದ ನೋಟುರದ್ದತಿಯ ಪ್ರಭಾವ 2017ರಲ್ಲಿಯೂ ಮುಂದುವರಿಯಿತು. ಸಣ್ಣ ಉದ್ದಿಮೆ ಕ್ಷೇತ್ರ ಮತ್ತು ವಿಶೇಷವಾಗಿ ಅನೌಪಚಾರಿಕ ಕ್ಷೇತ್ರದ ಮೇಲೆ ಅದರ ದುಷ್ಪರಿಣಾಮವಾಗಿ ಉದ್ಯೋಗಗಳು ನಷ್ಟವಾದವು. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನುಷ್ಠಾನದಿಂದ ಜನರ ಮೇಲೆ ಇನ್ನಷ್ಟು ಹೊರೆ ಬಿತ್ತು ಹಾಗೂ ಸಣ್ಣ ವರ್ತಕರು, ವ್ಯಾಪಾರಸ್ಥರು ಮತ್ತು ಕಿರಾಣಿ ಅಂಗಡಿಗಳವರು ತೊಂದರೆ ಅನುಭವಿಸಿದರು.

ದೇಶದ ನಾನಾ ಭಾಗಗಳಲಿ ರೈತರು ಕೃಷಿ ಬಿಕ್ಕಟ್ಟಿನ ಬಿಸಿಯನ್ನು ತೀವ್ರವಾಗಿ ಅನುಭವಿಸಿದರು. ಆರ್ಥಿಕತೆಯ ನಿಧಾನಗತಿಯಿಂದಾಗಿ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗ ಕಡಿತಗೊಂಡವು. ಹೆಚ್ಚುತ್ತಿರುವ ನಿರುದ್ಯೋಗವು ಉದ್ಯೋಗ ಕ್ಷೇತ್ರದಲ್ಲಿ ಮೋದಿ ಸರಕಾರದ ಸಂಪೂರ್ಣ ವೈಫಲ್ಯದ ಸಂಕೇತವಾಗಿದೆ. ಇದರೊಂದಿಗೆ ಅವಶ್ಯಕ ಸಾಮಗ್ರಿಗಳ ಗಗನಮುಖಿ ಬೆಲೆ ಜನತೆಯ ಸಂಕಷ್ಟವನ್ನು ಹೆಚ್ಚಿಸಿದೆ.

ಮೋದಿ ಸರಕಾರ ಸಾರ್ವಜನಿಕ ಕ್ಷೇತ್ರ ಮತ್ತು ಆರ್ಥಿಕತೆಯ ವಿವಿಧ ವಲಯಗಳಲ್ಲಿ ಖಾಸಗೀಕರಣ ನೀತಿಯನ್ನು ಬಿರುಸಿನಿಂದ ಮುಂದೊತ್ತುತ್ತಿದೆ. ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರಗಳಲ್ಲಿ ದೊಡ್ಡ ಪ್ರಮಾಣದ ಖಾಸಗೀಕರಣಕ್ಕೆ ಅದು ಯೋಜನೆಗಳನ್ನು ರೂಪಿಸಿದೆ. ಈಗ ಸಂಸತ್ತಿನ ಮುಂದಿರುವ ಫೈನಾನ್ಷಿಯಲ್ ರಿಸಲೂಷನ್ ಅಂಡ್ ಡಿಪಾಸಿಟ್ ಇನ್ಶೂರೆನ್ಸ್ ಮಸೂದೆ(ಎಫ್‌ಆರ್‌ಡಿಐ ಬಿಲ್) ಕಾರ್ಪೊರೇಟ್ ಕಂಪೆನಿಗಳು ಮತ್ತು ದೊಡ್ಡ ವ್ಯಾಪಾರಸ್ಥರಿಗೆ ಅಪಾರ ಲಾಲ ನೀಡಿದ್ದರಿಂದ ಉಂಟಾಗಿರುವ ಮರುಪಾವತಿಯಾಗದ ಆಸ್ತಿಯ (ಎನ್‌ಪಿಎ)ಹೊರೆಯಲ್ಲಿ ನಲುಗುತ್ತಿರುವ ಬ್ಯಾಂಕ್‌ಗಳ ಪರಿಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ಬ್ಯಾಂಕ್‌ಗಳಲ್ಲಿ ಸಾರ್ವಜನಿಕರು ಇಟ್ಟಿರುವ ಠೇವಣಿಗಳನ್ನು ಬಳಸಿಕೊಳ್ಳುವ ಪ್ರಯತ್ನವಾಗಿದೆ.

ಬಿಜೆಪಿ–ಆರ್‌ಎಸ್‌ಎಸ್ ಕೂಟ ಪ್ರಭುತ್ವ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ನಾಶ ಮಾಡಲು ಪ್ರಯತ್ನಿಸುತ್ತಿದೆ. ಹಿಂದೂತ್ವ ಅಜೆಂಡಾವನ್ನು ವಿರೋಧಿಸುವವರನ್ನು ದೇಶ–ವಿರೋಧಿಗಳು ಎಂದು ಬ್ರಾಂಡ್ ಮಾಡಲಾಗುತ್ತಿದೆ. 2017ರಲ್ಲಿ ಮೋದಿ ಸರಕಾರದ ಸರ್ವಾಧಿಕಾರಶಾಹಿ ಮುಖ ಪೂರ್ಣವಾಗಿ ಪ್ರಕಟವಾಗಿದೆ.

ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾದ ನಂತರ, ಭಾರತವನ್ನು ಅಮೆರಿಕದ ಅಧೀನ ಮಿತ್ರನನ್ನಾಗಿ ಮಾಡುವತ್ತ ಮೋದಿ ಸರಕಾರ ತನ್ನ ಪಯಣವನ್ನು ತೀವ್ರಗೊಳಿಸಿದೆ. ಆದರೆ ಟ್ರಂಪ್ ಆಡಳಿತದಡಿ ವಿದೇಶಾಂಗ ನೀತಿಯಲ್ಲಿ ಅನಿಶ್ಚಿತ ಬದಲಾವಣೆಗಳು ಆಗುತ್ತಿರುವುದನ್ನು ನೋಡಿದರೆ ಭಾರತದ ಹಿತಗಳಿಗೆ ಧಕ್ಕೆಯಾಗುವಂಥ ಅಸಹ್ಯ ಪರಿಸ್ಥಿತಿಯನ್ನು ಭಾರತ ಎದುರಿಸಬೇಕಾಗುತ್ತದೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಜೆರುಸಲೇಮ್‌ಅನ್ನು ಇಸ್ರೇಲ್‌ನ ರಾಜಧಾನಿ ಎಂದು ಮಾನ್ಯ ಮಾಡುವ ಅಮೆರಿಕದ ನಿರ್ಧಾರವನ್ನು ಟೀಕಿಸಲು ಆರಂಬದಲ್ಲಿ ನಿರಾಕರಿಸಿದ ಭಾರತ ವಿಶ್ವಸಂಸ್ಥೆಯಲ್ಲಿ ಅಮೆರಿಕಾದ ವಿರುದ್ಧ ಮತನೀಡಬೇಕಾಗಿ ಬಂತು.

2017 ಮುಗಿಯುವ ವೇಳೆಗೆ ದೇಶದೊಳಗಿನ ಸನ್ನಿವೇಶವನ್ನು ಸಾರಾಂಶರೂಪದಲ್ಲಿ ಹೇಳುವುದಾದರೆ, ಜನರ ಜೀವನಾಧಾರದ ಹಕ್ಕು ಮತ್ತು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಸರ್ವತೋಮುಖವಾಗಿ ನಿರಂತರ ದಾಳಿ ನಡೆದಿದೆ. ಅದೇನಿದ್ದರೂ ಇದು ಚಿತ್ರದ ಒಂದು ಮುಖವಷ್ಟೇ. 2017ರ ಉತ್ತರಾರ್ಧದಲ್ಲಿ ಬಿಜೆಪಿ ರಾಜ್ಯ ಸರಕಾರಗಳ ಹಾಗೂ ಕೇಂದ್ರ ಸರಕಾರದ ನೀತಿಗಳ ವಿರುದ್ಧ ಪ್ರತಿರೋಧ ಹೆಚ್ಚುತ್ತಿರುವುದನ್ನು ಹಾಗೂ ವಿವಿಧ ಜನವಿಭಾಗಗಳ ಐಕ್ಯ ಹೋರಾಟಗಳು ಬೆಳೆದು ಬರುತ್ತಿರುವುದನ್ನು ಕಾಣುತ್ತಿದ್ದೇವೆ.

ಇವುಗಳಲ್ಲಿ, ಮಹಾರಾಷ್ಟ್ರ, ರಾಜಸ್ತಾನ ಮತ್ತು ಮಧ್ಯ ಪ್ರದೇಶದಂಥ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ರೈತರು ನಡೆಸಿದ ಸಂಯುಕ್ತ ಹೋರಾಟಗಳು ಗಮನಾರ್ಹ. ಅದರಲ್ಲೂ ಮಹಾರಾಷ್ಟ್ರ ಮತ್ತು ರಾಜಸ್ತಾನದಲ್ಲಿ ಹೋರಾಟಗಳಲ್ಲಿ ಎಲ್ಲಾ ರೈತ ವಿಭಾಗಗಳು ಭಾಗವಹಿಸಿದ್ದು ಸರಕಾರಗಳು ಅವರ ಕೆಲವಾದರೂ ಬೇಡಿಕೆಗಳನ್ನು ಈಡೇರಿಸುವ ಒತ್ತಡಕ್ಕೆ ಒಳಗಾದವು. ನವೆಂಬರ್ 20ರಂದು ಒಂದೇ ವೇದಿಕೆಯಡಿ ಬಂದ 100ಕ್ಕೂ ಹೆಚ್ಚು ರೈತ ಸಂಘಟನೆಗಳು ನವದೆಹಲಿಯಲ್ಲಿ ಕಿಸಾನ್ ಸಂಸತ್ ನಡೆಸಿದ್ದನ್ನು ಕಂಡಿದ್ದೇವೆ.

2016ರ ಸೆಪ್ಟೆಂಬರ್ 2ರಂದು ಸಾರ್ವತ್ರಿಕ ಮುಷ್ಕರ ನಡೆಸಿದ್ದ ಕಾರ್ಮಿಕ ವರ್ಗ, 2017 ನವೆಂಬರ್ 9ರಿಂದ 11ರ ವರೆಗೆ ಮಹಾಪಡಾವ್ (ಮಹಾಧರಣಿ) ನಡೆಸಿತು. ಇದೊಂದು ಸಂಯುಕ್ತ ಕಾರ್ಯಾಚರಣೆಯಾಗಿದ್ದು ಮೂರು ದಿನಗಳ ಸಾಮೂಹಿಕ ಧರಣಿಯಲ್ಲಿ ದೇಶದಾದ್ಯಂತದಿಂದ ಬಂದಿದ್ದ ಸುಮಾರು ಎರಡು ಲಕ್ಷ ಕಾರ್ಮಿಕರು ಪಾಲ್ಗೊಂಡಿದ್ದರು.

ಈ ವರ್ಷ, ಕೇಂದ್ರೀಯ ವಿಶ್ವ ವಿದ್ಯಾನಿಲಯಗಳು ಹಾಗೂ ಇತರ ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿಗಳು ಸರ್ವಾಧಿಕಾರಶಾಹಿ ದಾಳಿಗಳು ಮತ್ತು ಹಿಂದೂತ್ವ ಮೌಲ್ಯಗಳ ಹೇರಿಕೆ ವಿರುದ್ಧ ಈ ವರ್ಷ ಅನೇಕ ಹೋರಾಟಗಳನ್ನು ನಡೆಸಿರುವುದನ್ನು ಕೂಡ ಕಂಡಿದೆ. ಹಿಂದೂತ್ವ ಉಗ್ರಗಾಮಿಗಳಿಂದ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆದವು.

ಬಿಜೆಪಿ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ವಿವಿಧ ಜನವಿಭಾಗಗಳ ನಡುವೆ ಹೆಚ್ಚುತ್ತಿರುವ ಅತೃಪ್ತಿಯನ್ನು ಈ ವರ್ಷ ಕಂಡಿತು. ಇದು ಕಳೆದ ಮೂರು ವರ್ಷಗಳಲ್ಲಿ ಬಿಜೆಪಿಯ ರಾಜಕೀಯ ಮುನ್ನಡೆಯ ಅಲೆಯನ್ನು ತಡೆಯುವುದನ್ನು ಆರಂಭಿಸಿದೆ. ಗುಜರಾತ್‌ನಲ್ಲಿ ವಿಧಾನಸಭೆ ಚುನಾವಣೆಗಳಲ್ಲಿ ಅಧಿಕಾರವನ್ನು ಉಳಿಸಿಕೊಂಡರೂ, 1995ರ ನಂತರದ ಅತಿ ಕಡಿಮೆ ಸೀಟುಗಳನ್ನು ಪಡೆದಿರುವುದು ಅದರ ವಿರುದ್ಧ ಹುಟ್ಟಿರುವ ಅತೃಪ್ತಿಯ ಸೂಚಕವಾಗಿದೆ.

ಇದು 2018ಕ್ಕೆ ಯಾವ ಸೂಚನೆಯನ್ನು ನೀಡುತ್ತದೆ? ಹೆಚ್ಚು ತೀವ್ರವಾದ ಹೋರಾಟಗಳು ನಡೆಸುವುದು ಹಾಗೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿಗಳ ವಿರುದ್ಧ ಜನತೆಯ ವಿಶಾಲ ಸಂಯುಕ್ತ ಹೋರಾಟಗಳನ್ನು ಕಟ್ಟಬೇಕಾಗಿರುವುದು ಪರಿಸ್ಥಿತಿಯ ಅಗತ್ಯವಾಗಿದೆ.

ಈ ಹೋರಾಟಗಳು ಮತ್ತು ಚಳವಳಿಗಳ ಮೂಲಕ ಒಂದು ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಕ್ರಮವನ್ನು ಮುಂದಿಡಬಹುದಾಗಿದೆ. ಇಂಥ ಕಾರ್ಯಕ್ರಮ ಮಾತ್ರವೇ ಬಿಜೆಪಿ ಸರಕಾರದ ನವ–ಉದಾರವಾದಿ ನೀತಿಗಳು ಮತ್ತು ಕೋಮುವಾದಿ ಅಜೆಂಡಾಕ್ಕೆ ಒಂದು ವಿಶ್ವಾಸಾರ್ಹ ಪರ್ಯಾಯ ಆಗಬಹುದು. ಈ ನಿಟ್ಟಿನಲ್ಲಿ ಕೇರಳದ ಎಲ್‌ಡಿಎಫ್ ಸರಕಾರ ಹಾಗೂ ತ್ರಿಪುರಾದ ಎಡ ರಂಗ ಸರಕಾರದ ನೀತಿಗಳು ಹಾಗೂ ಸಾಧನೆಗಳು ಮುಖ್ಯ ಕಾಣಿಕೆ ನೀಡುತ್ತವೆ.

ಜನರ ಜೀವನೋಪಾಯದ ವಿರುದ್ಧದ ದಾಳಿಗಳ ವಿರುದ್ಧ, ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮತ್ತು ಹಿಂದೂತ್ವ ಕೋಮುವಾದದ ವಿರುದ್ಧ ಹೋರಾಟಗಳನ್ನು ಹೆಚ್ಚಿಸುವುದು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮುಂದಿರುವ ಮಹತ್ವದ ಸವಾಲಾಗಿದೆ, ಕಾರ್ಯಭಾರವಾಗಿದೆ. ಈ ವಿಷಯಗಳ ಮೇಲೆ ಜನತೆಯ ಏಕತೆಯನ್ನು ಕಟ್ಟಿ ಬೆಳೆಸುವುದರಿಂದ ಬಿಜೆಪಿಯನ್ನು ಸೋಲಿಸಲು ಅಗತ್ಯವಾದ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲ ಐಕ್ಯತೆ ಸೃಷ್ಟಿಯಾಗುತ್ತದೆ. ಇದುವೇ 2018ರ ಸಂಕಲ್ಪವಾಗಲಿ.

ಅನು: ವಿಶ್ವ







ಸಿಪಿಐ(ಎಂ) ರಾಯಚೂರು ಜಿಲ್ಲಾ 12 ನೇ ಸಮ್ಮೇಳನ

ಸತತ ವಿದ್ಯುತ್ತಿಗಾಗಿ, ಸೌಹಾರ್ದ ಕರ್ನಾಟಕಕ್ಕಾಗಿ ದಲಿತ, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ತಡೆಯಲು ಕರೆ





ಎಸ್. ದೇವೇಂದ್ರಗೌಡ

ಕಾಂ. ಫಿಡೆಲ್ ಕ್ಯಾಸ್ಟ್ರೋ ನಗರ, ಕಾಂ.ಸುಕೋಮಲ್ ಸೇನ್ ಸಭಾಂಗಣ, ಕಾಂ.ಪ್ರಸನ್ನಕುಮಾರ ವೇದಿಕೆಯಲ್ಲಿ ಸಿಪಿಐ(ಎಂ) ಪಕ್ಷದ ರಾಯಚೂರು ಜಿಲ್ಲಾ 12ನೇ ಸಮ್ಮೇಳನ 23–24 ನೇ ಡಿಸಂಬರ 2017 ರಂದು ರಾಯಚೂರಿನ ರುಕ್ಮಿಣೀ ಕಲ್ಯಾಣ ಮಂಟಪದಲ್ಲಿ ಜರುಗಿತು. ಪಕ್ಷದ ಹಿರಿಯ ಸದಸ್ಯರಾದ ಕಾಂ. ಅಯ್ಯಮ್ಮ ನವರು ಧ್ವಜಾರೋಹಣ ಮಾಡುವ ಮುಖಾಂತರ ಸಮ್ಮೇಳನಕ್ಕೆ ಚಾಲನೆ ನೀಡಿದರು.



ಕೆ.ಜಿ.ವಿರೇಶ

ಉದ್ಘಾಟನಾ ಸಮಾರಂಭ :

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದಸ್ವಾಮಿಯವರು ಉದ್ಘಾಟನೆ ಮಾಡಿ ಮಾತನಾಡುತ್ತಾ ಇವತ್ತಿನ ರೈತ,ಕಾರ್ಮಿಕ ವಿರೋಧಿ, ಜನವಿರೋಧಿ ನೀತಿಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ತರುತ್ತಿವೆ. ಒಂದು ಕಡೆ ಜನವಿರೋಧಿ ನೀತಿಗಳು ಇನ್ನೊಂದು ಕಡೆ ಕೋಮುವಾದ ತನ್ನ ಕಬಂಧ ಬಾಹುವನ್ನು ಚಾಚುತ್ತಾ ಸೌಹಾರ್ದತೆಗೆ, ಬಹುತ್ವಕ್ಕೆ ದಕ್ಕೆ ತುರುತ್ತಿದೆ. ದಲಿತರ ಮೇಲೆ ದೌರ್ಜನ್ಯ, ಮಹಿಳೆಯರ ಮೇಲೆ ದೌರ್ಜನ್ಯದ ಪ್ರಕರಣಗಳು ಹೆಚ್ಚಾಗುತ್ತಿವೆ. ಇಂತಹ ಸಂದರ್ಭದಲ್ಲಿ ಪಕ್ಷದ ಸದಸ್ಯರು ಸಮರಶೀಲ ಹೋರಾಟಗಳ ಮುಖಾಂತರ ಜನರಿಗೆ ಈ ವಿಷಯಗಳನ್ನು ತಿಳಿಸಬೇಕು. ಸಿಪಿಐ(ಎಂ) ಪಕ್ಷದಲ್ಲಿರುವ ಸದಸ್ಯರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಬಂದವರಲ್ಲ, ತ್ಯಾಗದ ಮುಖಾಂತರ ಪಕ್ಷವನ್ನು ಗಟ್ಟಿಗೊಳಿಸುವ, ವಿಸ್ತರಿಸುವ ಜವಾಬ್ದಾರಿ ಸದಸ್ಯರ ಮೇಲಿದೆ, ರಾಜ್ಯದಲ್ಲಿ ಪರ್ಯಾಯ ಪಕ್ಷ ಜನರ ಮುಂದೆ ಇಲ್ಲ. ಒಂದು ಸಲ ಕಾಂಗ್ರೆಸ್ ಇನ್ನೊಂದು ಸಲ ಬಿಜೆಪಿ ಎನ್ನುವಂತಾಗಿದೆ. ನಾವು ಇವರ ಜನವಿರೋಧಿ ನೀತಿಗಳನ್ನು ಜನರಲ್ಲಿ ತಿಳಿಸಿದರೆ ಸಾಲದು. ನಾವು ಕೂಡಾ ಚುಣಾವಣೆಯಲ್ಲಿ ಸ್ಪರ್ಧಿಸವಂತಾಗಬೇಕು. ಆ ನಿಟ್ಟಿನಲ್ಲಿ ಪಕ್ಷವನ್ನು ಮುನ್ನಡೆಸಬೇಕು. ಪ್ರತಿ ಮೂರು ವರ್ಷಕ್ಕೊಮ್ಮೆ ಸಮ್ಮೇಳನ ಸೇರಿ ವಿಮರ್ಶೆ, ಸ್ವವಿಮರ್ಶೆ ಮಾಡಿಕೊಳ್ಳುವ ಪರಿಪಾಠ ನಮ್ಮಲ್ಲಿ ಮಾತ್ರ ಇರುವುದು, ಹಿಂದಿನ ಕೆಲಸ ಕಾರ್ಯಗಳ ವಿಮರ್ಶೆ ಮಡುತ್ತಾ ಮುಂದೆ ಸಾಗಲು ಇಂತಹ ಸಮ್ಮೇಳನ ಅಗತ್ಯ. ಆ ನಿಟ್ಟಿನಲ್ಲಿ ಈ ಸಮ್ಮೇಳನ ಮುನ್ನಡೆಯಲಿ ಎಂದು ತಮ್ಮ ಉದ್ಘಾಟನಾ ನುಡಿಗಳನ್ನಾಡಿದರು,

ಸಮ್ಮೇಳನದ ಕಲಾಪ:

ಕಾಂ. ಕರಿಯಪ್ಪ ಅಚ್ಚೊಳ್ಳಿ. ಕಾಂ.ಹೆಚ್.ಪದ್ಮಾ, ಕಾಂ.ಶಕುಂತಲಾ. ಕಾಂ.ಎಸ್. ದೇವೇಂದ್ರಗೌಡ ಅವರನ್ನೊಳಗೊಂಡ ಅಧ್ಯಕ್ಷಿಯ ಮಂಡಳಿ ಸಮ್ಮೇಳನದ ಕಾರ್ಯಕಲಾಪವನ್ನು ನಡೆಸಿಕೊಟ್ಟಿತು. 86 ಜನ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ವಿವಿಧ ತಾಲೂಕಿನಂದ ಪ್ರತಿನಿಧಿಸಿದ್ದರು. ಮೂರು ವರ್ಷದ ವರದಿಯನ್ನು ಜಿಲ್ಲಾ ಕಾರ್ಯದರ್ಶಿಯಾದ ಕಾಂ. ಶೇಕ್ಷಖಾದ್ರಿ ಮಂಡಿಸಿದರು, ವರದಿಯ ಆಧಾರದ ಮೇಲೆ 16 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡು ವಿಮರ್ಶಿಸಿದರು. 16 ಜನರ (ಕೆ,ಜಿ,ವಿರೇಶ, ಶೇಕ್ಷಖಾದ್ರಿ, ಹೆಚ್. ಪದ್ಮಾ.. ಶಬ್ಬೀರ ಅಹಮದ, ಡಿ.ಎಸ್.ಶರಣಬಸವ, ಕರಿಯಪ್ಪ ಅಚ್ಚೊಳ್ಳಿ, ನರಶಿಂಹಪ್ಪ, ಯಂಕಪ್ಪ ಕೆಂಗಲ್, ತಾಯಮ್ಮ, ಶ್ರೀಧರ, ವರಲಕ್ಷ್ಮೀ, ಪಿ.ಗಿರಿಯಪ್ಪ, ಸಂಗಮೇಶ, ಹೆಚ್.ಶರೀಪುದ್ದೀನ್, ನರಸಣ್ಣನಾಯಕ. ಡಿ.ವೀರನಗೌಡ) ನೂತನ ಜಿಲ್ಲಾ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು ಕಾಂ, ಕೆ,ಜಿ.ವಿರೇಶ ನೂತನ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕರಿಯಪ್ಪ ಅಚ್ಚೊಳ್ಳಿ. ಹೆಚ್. ಪದ್ಮಾ. ಶೇಕ್ಷಖಾದ್ರಿ. ಶಬ್ಬೀರ ಅಹಮದ, ಕೆ.ಜಿ.ವಿರೇಶ. ಡಿ.ಎಸ್.ಶರಣಬಸವ ಅವರನ್ನೊಳಗೊಂಡ ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆಮಾಡಲಾಯಿತು, ಹಾಗೂ ಮೂಡಬಿದ್ರಿಯಲ್ಲಿ ಜರುಗುವ ರಾಜ್ಯ ಸಮ್ಮೇಳನಕ್ಕೆ 8 ಜನ ಪ್ರತಿನಿಧಿಗಳನ್ನು (ಹೆಚ್.ಪದ್ಮ, ರಂಗಮ್ಮ ಅನ್ವರ್.ತಾಯಮ್ಮ, ಕೆ.ಜಿ.ವಿರೇಶ, ಕರಿಯಪ್ಪ ಅಚ್ಚೊಳ್ಳಿ, ಡಿ.ಎಸ್.ಶರಣಬಸವ. ಶಬ್ಬೀರ ಅಹಮದ್. ಯಂಕಪ್ಪ **ಪುಟ 14 ಕ್ಕೆ**



ಗೈಬು ಜೈನೆಖಾನ

7ನೇ ಸಿಪಿಐ(ಎಂ) ಬೆಳಗಾವಿ ಜಿಲ್ಲಾ ಸಮ್ಮೇಳನ

ಜಿ.ಎಸ್.ಟಿ. ಹೇರಿ ಬೆಲೆ ಏರಿಸಿದ್ದು ಮೋದಿ ಘನಕಾರ್ಯ : ವರಲಕ್ಷ್ಮಿ

ಸಿಪಿಐ(ಎಂ) ಪಕ್ಷದ ಬೆಳಗಾವಿ ಜಿಲ್ಲಾ ಸಂಘಟನಾ ಸಮಿತಿಯ 7ನೇ ಜಿಲ್ಲಾ ಸಮ್ಮೇಳನ ರಾಮದುರ್ಗ ನಗರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಡಿಸೆಂಬರ–23 ಮತ್ತು 24 ರಂದು ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಭಾಗವಾಗಿ ರವಿವಾರ 24 ರಂದು ಬೃಹತ್ ಬಹಿರಂಗ ಸಭೆ ನಗರದ ಗ್ರಂಥಾಲಯ ಪಕ್ಕದ ಮೈದಾನದಲ್ಲಿ ನಡೆಯಿತು. ಬಹುಮತದೊಂದಿಗೆ ಕೇಂದ್ರದ ಚುಕ್ಕಾಣಿ ಹಿಡಿದ ನರೇಂದ್ರ ಮೋದಿಯವರ ಬಿಜೆಪಿ ಸರಕಾರ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ ಭರವಸೆಗಳನ್ನು ಮರೆತು ಜನರನ್ನು ಬೆಲೆ ಏರಿಕೆ ಕೂಪದಲ್ಲಿ ತಳ್ಳಿದೆ. ಶೇಕಡಾ 28 ರಂದು ಜಿ.ಎಸ್.ಟಿಯನ್ನು ಹೇರಿ ಬಡವರು ಮಧ್ಯಮ ವರ್ಗದವರು ಖರೀದಿ ಮಾಡುತ್ತಿರುವ ದಿನಬಳಕೆ ವಸ್ತುಗಳ ಬೆಲೆಗಳನ್ನು ಏರಿಸಿ ಬಡವರಿಗೆ ಖರೀದಿಸುವ ಶಕ್ತಿ ಇಲ್ಲದಂತೆ ಮಾಡಿ ಶ್ರೀಮಂತ ವ್ಯಾಪಾರಸ್ಥರಿಗೆ ಅನುವು ಮಾಡಿಕೊಟ್ಟಿದ್ದು, ಮೋದಿಯವರ ಘನ ಕಾರ್ಯವಾಗಿದೆ ಎಂದು ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ವರಲಕ್ಷ್ಮಿ ರವರು ಮಾತನಾಡಿ ಕೇಂದ್ರ ಸರಕಾರದ ನೀತಿಗಳನ್ನು ಖಂಡಿಸಿದರು.



ರೈತರು ಬೆಳೆದ ಬೆಳೆಗಳಿಗೆ ಸ್ವಾಮಿನಾಥನ್ ವರದಿ ಪ್ರಕಾರ ಬೆಲೆ ನೀಡಬೇಕೆಂದು, ಇಲ್ಲವಾದಲ್ಲಿ ಸಾಲ ಮನ್ನಾ ಮಾಡಬೇಕೆಂದು ರೈತರು ನಿರಂತರವಾಗಿ ಒತ್ತಾಯಿಸಿದ್ದರೂ ಸಾಲ ಮನ್ನಾ ಮಾಡಲು ಆಗುವುದಿಲ್ಲ ಎಂದು ಸುಪ್ರೀಕೋರ್ಟಿಗೆ ಅರ್ಜಿ ಹಾಕಿದ್ದು, ಸರಿಯಾದ ಕ್ರಮವಲ್ಲ ಎಂದು ವರಲಕ್ಷ್ಮಿ ರವರು ಆಕ್ರೋಶ ವ್ಯಕ್ತಪಡಿಸಿದರು.



ಜಿಲ್ಲೆಯ ಹಾಗೂ ತಾಲೂಕಿನ ಜನಪ್ರತಿನಿಧಿಗಳು ದುಡಿಯುವ ಜನರ ಪರವಾಗಿ ಧ್ವನಿ ಎತ್ತದೆ ತಮ್ಮ ಟಿಕೇಟ್‌ಗಾಗಿ ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರಾದ ನಾವು ಇಡೀ ಜಿಲ್ಲೆಯಲ್ಲಿ ಪಕ್ಷದ ವಿಸ್ತರಣೆಗಾಗಿ ಕೆಲಸ ಮಾಡಬೇಕು. ಲೂಟಿಕೋರರನ್ನು, ಭ್ರಷ್ಟಾಚಾರಿಗಳನ್ನು ತೆಗೆದು ಹಾಕಲು ಮುಂದಿನ ದಿನಗಳಲ್ಲಿ ಹೋರಾಟ ನಡೆಸಬೇಕು. ಮುಂದಿನ ವಿಧಾಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷ ಸ್ಪರ್ಧೆ ಮಾಡಿ ಪಕ್ಷದ ಶಕ್ತಿ ಏನು ಎಂಬುವುದನ್ನು ತೋರಿಸುತ್ತೇವೆ ಎಂದು ಅಧ್ಯಕ್ಷತೆ ವಹಿಸಿದ ಹಿರಿಯ ಮುಖಂಡರಾದ ವ್ಹಿ. ಪಿ. ಕುಲಕರ್ಣಿರವರು ಮಾತನಾಡಿದರು.



ಗೈಬು ಜೈನೆಖಾನ

ದಿನಾಂಕಃ 23–12–2017 ರಂದು ಸಮ್ಮೇಳನದ ಅಂಗವಾಗಿ ಹಿರಿಯರಾದ ವ್ಹಿ. ಪಿ. ಕುಲಕರ್ಣಿಯವರು ಪಕ್ಷದ ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನದ ಉದ್ಘಾಟನೆಗೆ ಚಾಲನೆ ನೀಡಿದರು.

ಸಮ್ಮೇಳನದ ಉದ್ಘಾಟನೆಯನ್ನು ಪಕ್ಷದ ರಾಜ್ಯ ಕಾರ್ಯದಶಿ ಮಂಡಳಿ ಸದಸ್ಯರಾದ ಕಾಂ॥ ಯು ಬಸವರಾಜ ಮಾಡಿ, ದೇಶದಲ್ಲಿ ನಡೆಯುತ್ತಿರುವ ಮತಾಂಧ ಶಕ್ತಿಗಳ ಹುಟ್ಟಡಗಿಸಲು ಸಂಗಾತಿಗಳು ಪಣ ತೊಡಬೇಕೆಂದು ಕರೆ ನೀಡಿದರು.

ಇವತ್ತು ಗೋ ರಕ್ಷಣೆಯ ಹೆಸರಿನಲ್ಲಿ ಮತಾಂದರು ಇಡೀ ದೇಶದಲ್ಲಿ ಕೋಮು ಗಲಭೆ ಹುಟ್ಟುಹಾಕಿ ಆ ಮೂಲಕ ಜನರ ಮನಸ್ಸನ್ನು ಚದುರಿಸಿ, ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಕೆಲಸ ನಡೆಸಿದ್ದಾರೆ. ಈ ಸಮುದಯದಲ್ಲಿ ಸಿಪಿಐ(ಎಂ)ನ ಪ್ರತಿಯೊಬ್ಬ ಸದಸ್ಯರಾದ ನಾವು ಈ ನೀತಿಯನ್ನು ವಿರೋಧಿಸಿ ನಿರಂತರ ಹೋರಾಟ ನಡೆಸುವ ಜವಾಬ್ಧಾರಿ ನಮ್ಮ ಮೇಲಿದೆ ಎಂದರು.

ನಾಲ್ಕು ವರ್ಷದಲ್ಲಿ 80 ಲಕ್ಷ ಕೋಟಿ ತೆರಿಗೆ ಕಟ್ಟಿದ ನಮಗೆ ಕನಿಷ್ಟ ವೇತನ ನೀಡಲು ಹಿಂಜರಿಯುತ್ತಿರುವ ಸರಕಾರಗಳಿಗೆ ಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕೆಂದು ಯು ಬವಸರಾಜ ಕರೆ ನೀಡಿದರು.

ಗೈಬು ಜೈನೆಖಾನ, ವ್ಹಿ. ಪಿ. ಕುಲಕರ್ಣಿ, ನಾಗಪ್ಪ ಸಂಗೊಳಿ, ದಾದಾ ಸಾಹೇಬ, ಎಲ್. ಎಸ್ ನಾಯಕ, ಎಫ್. ಎಂ. ನದಾಫ, ಜಿ. ವ್ಹಿ. ಕುಲಕರ್ಣಿ, ಸಿ. ಎ. ಕರಾಡೆ, ದಿಲೀಪ್ ವಾರ್ಕೆ, ಟಿ. ಎ. ಬಬಗೌಡ, ದೊಡ್ಡವ್ವ ಪೂಜಾರಿ – ಇವರುಗಳು ಇರುವ 11 ಜನರ ಬೆಳಗಾವಿ ಜಿಲ್ಲಾ ಸಂಘಟನಾ ಸಮಿತಿ ರಚಿಸಲಾಯಿತು. ಕಾಂ॥ ಗೈಬು ಜೈನೆಖಾನ ರವರನ್ನು ಸಿಪಿಐ(ಎಂ) ಪಕ್ಷದ ಬೆಳಗಾವಿ ಜಿಲ್ಲಾ ಸಂಘಟನಾ ಸಮಿತಿಗೆ ಕಾರ್ಯದರ್ಶಿ ಎಂದು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾಂ॥ ದೊಡ್ಡವ್ವ ಪೂಜಾರಿ, ಕಾಂ॥ ಟಿ, ಎ. ಬಬಗೌಡ, ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಹಾಗೂ ವೀರಭದ್ರ ಕಂಪ್ಲಿ ವೀಕ್ಷಕರಾಗಿ ಆಯ್ಕೆಯಾದರು. ಕೊನೆಯಲ್ಲಿ ಕಾರ್ಯದರ್ಶಿ ಗೈಬು ಜೈನೆಖಾನ ಎಲ್ಲರಿಗೂ ವಂದಿಸಿದರು.

ವೆಂಕಟೇಶ ಕೋಣಿ

ಸಿ.ಪಿ.ಐ(ಎಂ) ಉಡುಪಿ ಜಿಲ್ಲಾ 6ನೇ ಸಮ್ಮೇಳನ





ಕಮ್ಯೂನಿಸ್ಟ್ ಪಕ್ಷದಲ್ಲಿ ಮಾತ್ರವೇ ನಿಜವಾದ ಆಂತರಿಕ ಪ್ರಜಾಪ್ರಭುತ್ವ ಜೀವಂತವಾಗಿರುವುದು

ಉಡುಪಿ ಜಿಲ್ಲೆಯ ರಾಜ್ಯದ ಮುಂದುವರಿದ ಜಿಲ್ಲೆಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದ್ದು, ತಲಾ ಆದಾಯದಲ್ಲಿ 5ನೇ ಸ್ಥಾನದಲ್ಲಿದೆ. ಆರೋಗ್ಯದಲ್ಲಿ ಮೊದಲನೇ ಸ್ಥಾನ, ಸಾಕ್ಷರತೆಯಲ್ಲಿ 2ನೇ ಸ್ಥಾನ ಪಡೆದಿದೆ. ಬ್ಯಾಂಕಿಂಗ್ ಕ್ಷೇತ್ರ ವಿಫಲವಾಗಿ ಬೆಳೆದಿದ್ದು, ಪ್ರಮುಖ ಎರಡು ರಾಷ್ಟ್ರೀಕೃತ ಬ್ಯಾಂಕುಗಳಾದ ಕಾರ್ಪೊರೇಷನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಈ ಜಿಲ್ಲೆಯಲ್ಲಿ ಜನ್ಮ ತಾಳಿದೆ. ಆದರೆ ಒಟ್ಟು ಸ್ಥಳೀಯ ಉತ್ಪಾದನೆಗಳ (ಜಿ.ಡಿ.ಪಿ) ಪೈಕಿ ರಾಜ್ಯದ 30 ಜಿಲ್ಲೆಗಳಲ್ಲಿ ಉಡುಪಿ 10ನೇ ಸ್ಥಾನದಲ್ಲಿದೆ.

ಭೂಸುಧಾರಣೆ ಕಾಯಿದೆ ಜ್ಯಾರಿ ಮಾಡುವಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆದ ಸಮರಶೀಲ ಹೋರಾಟಗಳ ಫಲವಾಗಿ ಸಹಸ್ರಾರು ಕುಟುಂಬಗಳು ಗೇಣಿ ಭೂಮಿಯ ಹಕ್ಕು ಪತ್ರ ಪಡೆಯಲಾಗಿದ್ದರೂ ಶೇಕಡಾ 12.35% ರಷ್ಟು ಕೃಷಿ ಕಾರ್ಮಿಕರು ಜಿಲ್ಲೆಯಲ್ಲಿದ್ದಾರೆ. ಕುಂದಾಪುರ ತಾಲೂಕಿನಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ಶೇಕಡಾ 18.72%. ರಾಜ್ಯದ ಸರಾಸರಿ ಶೇಕಡಾ 25.67% ಆಗಿದೆ. ಈಗಲೂ ಸುಮಾರು 450 ಕುಟುಂಬಗಳು ತಲಾ 25 ಎಕ್ರೆಗಿಂತಲೂ ಹೆಚ್ಚು ಜಮೀನು ಅಂದರೆ 21,112 ಎಕ್ರೆ ಹೊಂದಿದ್ದಾರೆ.

ಉಡುಪಿ ಜಿಲ್ಲೆ 98 ಕಿ.ಮೀ ಉದ್ದದ ಕಡಲ ತಡಿಯನ್ನು ಹೊಂದಿದ್ದು, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಮೀನುಗಾರಿಕೆ ಮುಖ್ಯ ಕಸುಬು ನಡೆಯುತ್ತಿದೆ. ಸುಮಾರು 64 ಮೀನುಗಾರಿಕಾ ಗ್ರಾಮಗಳ ಹಾಗೂ 31,364 ಕುಟುಂಬಗಳು ಮೀನುಗಾರಿಕೆ ವೃತ್ತಿಯನ್ನು ಅವಲಂಭಿಸಿಕೊಂಡಿದೆ.



ವಿದ್ಯಾವಂತ, ಬುದ್ಧಿವಂತರ ಜಿಲ್ಲೆ ಎಂದೆನಿಸಿಕೊಂಡಿದೆ. ಈ ಹಿನ್ನೆಲೆಯಿರುವ ಉಡುಪಿ ಜಿಲ್ಲೆಯಲ್ಲಿ, ಸಿಪಿಐ(ಎಂ) ಜಿಲ್ಲಾ 6ನೇ ಸಮ್ಮೇಳನವು ದಿನಾಂಕ 24, 25 ಮತ್ತು 26 ಡಿಸೆಂಬರ್, 2017ರಂದು 3 ದಿನಗಳ ಕಾಲ ಕುಂದಾಪುರ ತಾಲೂಕಿನ ಬೈಂದೂರು ನಗರದಲ್ಲಿ ಯಶಸ್ವಿಯಾಗಿ ಜರಗಿತು. "ಸೌಹಾರ್ದ ಸಹಬಾಳ್ವೆ... ಸರ್ವಾಂಗೀಣ ಅಭಿವೃದ್ಧಿ"ಯ ಘೋಷಣೆಯಡಿಯಲ್ಲಿ ಸಂಗಾತಿ ಸಿ.ನಾರಾಯಣ ನಗರದಲ್ಲಿ ಕಾಮ್ರೇಡ್ ಅಬ್ರಾಹಂ ಕರ್ಕಡ ಸಭಾಂಗಣದ ಸಂಗಾತಿ ಪ್ರಸನ್ನ ಕುಮಾರ ವೇದಿಕೆಯಲ್ಲಿ ಜರಗಿದ ಸಮ್ಮೇಳನವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀ ರಾಮರೆಡ್ಡಿ ಉದ್ಘಾಟಿಸಿದರು. ಅವರು ಮಾತನಾಡುತ್ತಾ, ದೇಶದಲ್ಲಿ ಮೋದಿ ಸರಕಾರ ಆಡಳಿತಕ್ಕೆ ಬಂದ ನಂತರ ದೊಡ್ಡ ವ್ಯಾಪಾರವನ್ನು ನಿರ್ಬಂದ ಮುಕ್ತ ವ್ಯಾಪಾರಕ್ಕೆ ಅವಕಾಶ ಕಲ್ಪಿಸುವಲ್ಲಿ ಮುಂಚೂಣಿಯಲ್ಲಿದೆ. ಹಸಿವಿನ ಸೂಚ್ಯಂಕ ತಳಮುಟ್ಟಿದೆ. ಪೆಟ್ರೋಲ್, ಡೀಸಿಲ್, ದರಗಳನ್ನು ನಿರಂತರವಾಗಿ ಹೆಚ್ಚಿಸಲಾಗುತ್ತಿದೆ. ಕಚ್ಛಾ ತೈಲ ಬೆಲೆಗಳು ಇಳಿಕೆ ಇದ್ದರೂ ಸಹ ಜನ ಸಾಮಾನ್ಯರ ಉರುವಲು ಅಡಿಗೆ ಅನಿಲ ದರ, ಸಹಾಯಧನ ಕಡಿತ ಮಾಡಲಾಗಿದೆ. ಈ ಕ್ರಮಗಳಿಂದ ಎಲ್ಲಾ ಅಗತ್ಯ ಸಾಮಗ್ರಿಗಳ ಬೆಲೆಗಳು ಗಗನ ಮುಟ್ಟಿವೆ. ನೋಟು ಅನಾಣ್ಯೀಕರಣ ಹಾಗೂ ಜಿ.ಎಸ್.ಟಿ. ತಂದಿರುವ ಸರಕಾರದ ಕ್ರಮಗಳು ಬೆಲೆ ಏರಿಕೆಗೆ ಪೂರಕವಾಗಿದೆ. ಬೆಲೆಗಳು ತನ್ನಿಂದ ತಾನೆ ಏರಿಕೆಯಾಗುತ್ತಿಲ್ಲ. ಅದು ಸರಕಾರದ ನೀತಿಗಳಿಂದಾಗಿ ಮಧ್ಯವರ್ತಿಗಳು, ದೊಡ್ಡ ವ್ಯಾಪಾರಿಗಳು, ಕಾಳಸಂತೆಕೋರರು ವ್ಯಾಪಾರಗಾರರಿಗೆ ಲಾಭ ಹೆಚ್ಚಿಸಲು ಬೇಕಾಗಿ ಬೆಲೆಗಳನ್ನು ಏರಿಸಲಾಗುತ್ತಿದೆ. ಆ ಮೂಲಕ ಜನಸಾಮಾನ್ಯರನ್ನು ದೋಚಲಾಗುತ್ತದೆ ಎಂದು ಹೇಳಿದರು.



ಬಾಲಕೃಷ್ಣ ಶೆಟ್ಟಿ

ಪುಟ 10 ಕ್ಕೆ



4ನೇ ದಾವಣಗೆರೆ–ಚಿತ್ರದುರ್ಗ ಜಿಲ್ಲಾ ಸಮ್ಮೇಳನ

"ದುಡಿಯುವ ಜನ ಚಳವಳಿ ಕಟ್ಟುವ ಮೂಲಕ ಸಿಪಿಎಂ ನೆಲೆ ವಿಸ್ತರಣೆಗೆ ಪಣ"

ಮಹಾಂತೇಶ ಕೆ.

ಡಿಸೆಂಬರ್ 24 ಹಾಗೂ 25 ರಂದು ದಾವಣಗೆರೆ–ಚಿತ್ರದುರ್ಗ ಜಿಲ್ಲೆಯ 4ನೇ ಸಿಪಿಐ(ಎಂ) ಸಮ್ಮೆಳನದ ಅಂಗವಾಗಿ 24 ರಂದು ದಾವಣಗೆರೆಯಲ್ಲಿ ದುಡಿಯುವ ಜನರ ಬೃಹತ್ ಹಾಗೂ ಆಕರ್ಷಕ ಕೆಂಪು ಸಮವಸ್ತ್ರಧಾರಿಗಳ ಮೆರವಣಿಗೆ ಹಾಗೂ ಬಹಿರಂಗ ಸಭೆಯು ನಡೆಯಿತು.

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿ ಹಿಂದುತ್ವವಾದಿ ಶಕ್ತಿಗಳು ಕರ್ನಾಟಕವನ್ನು ತಮ್ಮ ಕೋಮು ಗಲಭೆಯ ಪ್ರಯೋಗಾಲಯವನ್ನಾಗಿ ಮಾಡಿಕೊಂಡು ನಿರಂತರ ಗಲಭೆಗಳನ್ನು ಸೃಷ್ಟಿಸುತ್ತಿದ್ದಾರೆ. ಇದಕ್ಕೆ ಹಿಂದುಳಿದ ಜಾತಿಯ ಯುವಜನರು ಬಲಿಪಶುಗಳಾಗುತ್ತಿದ್ದಾರೆ. ದುಡಿಯುವ ಜನರ ಚಳವಳಿಗೆ ಇದು ಅತ್ಯಂತ ಅಪಾಯಕಾರಿ ಆದ್ದರಿಂದ ನಮ್ಮ ಮಕ್ಕಳು ಇಂತಹ ಮತಾಂಧರ ಕೈಗೆ ಸಿಗದಂತೆ ಎಚ್ಚರಿಕೆ ವಹಿಸಬೇಕೆಂದು ಕರೆ ನೀಡಿದರು.



ಟಿ.ವಿ.ರೇಣುಕಮ್ಮ

ಪ್ರಾಧ್ಯಾಪಕರು ಹಾಗೂ ಸಿದ್ದತಾ ಸಮಿತಿ ಉಪಾಧ್ಯಕ್ಷರು ಆದ ಡಾ. ಎ.ಬಿ.ರಾಮಚಂದ್ರಪ್ಪ ಮಾತನಾಡಿ ಪ್ರಗತಿ ಪರ– ಎಡ ಚಳುವಳಿಗಳು ಐಕ್ಯತೆಯು ಇವತ್ತಿನ ತುರ್ತ ಅಗತ್ಯವೆಂದರು. ಪಕ್ಷದ ರಾಜ್ಯ ಸಮಿತಿ ಸದಸ್ಯರುಗಳಾದ ಕೆ.ಮಹಾಂತೇಶ, ಸೈಯದ್ ಮುಜೀಬ್, ಜಿಲ್ಲಾ ಕಾರ್ಯದರ್ಶಿ ಕೆ.ಎಲ್.ಭಟ್ ಹಾಗೂ ಟಿ.ವಿ.ರೇಣುಕಮ್ಮ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಾಹಿತಿಗಳಾದ. ಖತೀಬ್ ಅವರು ಸೌಹಾರ್ದತೆ ಹಾಗೂ ಗೌರಿ ಲಂಕೇಶ್ ಅವರ ಸಾವು ವಿರೋಧಿಸಿ ಕವನ ವಾಚನ ಮಾಡಿದರು. ಇದೇ ಸಂದರ್ಭದಲ್ಲಿ ವಿಜಯಪುರದಲ್ಲಿ ಅತ್ಯಾಚಾರಕ್ಕೀಡಾಗಿ ಕೊಲೆಯಾದ ಕುಮಾರಿ ದಾನಮ್ಮ ಕೊಲೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿ ನಿರ್ಣಯ ಮಂಡಿಸಿ ಒಂದು ನಿಮಿಷ ಮೌನ ಸಲ್ಲಿಸಲಾಯಿತು. ವಿಶೇಷ ಆಮಂತ್ರಿತರಾಗಿ ಆನಂದರಾಜ್ (CITU ಜಿಲ್ಲಾ ಪ್ರಧಾನ ಕಾರ್ಯದರ್ಶಿ)ಕೈದಾಳ ಉಮೇಶ (ಅಧ್ಯಕ್ಷರು ಕ.ರಾ.ಗ್ರಾ.ಪ. ನೌ ಸಂಘ)ಕೆ.ಎಚ್. ಓಲೇಕರ್(HPF-CITU ಮುಖಂಡರು) ಈರಣ್ಣ (BSNLEU ಜಿಲ್ಲಾ ಕಾರ್ಯದರ್ಶಿ) ಓಬೇದುಲ್ಲಾ (ಹರಿಹರ ಬೀಡಿ ಕಾ.ಸಂಘ) ಭಾಗವಹಿಸಿದ್ದರು.



ಡಿಎಂ ಮಲಿಯಪ್ಪ

ಹಿರಿಯ ಸಂಗಾತಿಗಳಿಗೆ ಹೃದಯಸ್ಪರ್ಶಿ ಗೌರವ

ವಿವಿಧ ರಂಗಗಳಾದ ದೇವದಾಸಿ, ಗ್ರಾಮಪಂಚಾಯ್ತಿ, ಹಮಾಲಿ, ಬೀಡಿ, ಮೈಸೂರು ಕಿರ್ಲೋಸ್ಕರ್, ಗ್ರಾಸಿಂ, ಮತ್ತಿತರೆ ಕಾರ್ಮಿಕ ಸಂಘಗಳಲ್ಲಿ ಹಾಗೂ ಕಮ್ಯೂನಿಸ್ಟ್ ಚಳವಳಿ ಬೆಳೆಸಲು ದುಡಿದ ಜಯಾನಂದ್, ಬಾನಳ್ಳಿ ಬಸವರಾಜ್, ಜಯಣ್ಣ ಜಾಧವ್, ನಾಗರಾಜ್ ರಾವ್, ಮಮ್ತಾಜ್ ಭೀ, ಹಿರಿಯಮ್ಮ, ನರಸಿಂಹಪ್ಪ, ವೀರಭದ್ರಪ್ಪ, ನಿಂಗಣ್ಣ ಮೊದಲಾದ 10 ಹಿರಿಯರನ್ನು ನೂರಾರು ಜನ ಸಮ್ಮುಖದಲ್ಲಿ ಬಹಿರಂಗ ಅಧಿವೇಶನದಲ್ಲಿ ಗೌರವಿಸಲಾಯಿತು.

ಇದಲ್ಲದೆ ದಾವಣಗೆರೆ–ಚಿತ್ರದುರ್ಗ ಅವಿಭಜಿತ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯಾಗಿ ಹಲವು ವರ್ಷ ಗಳಿಂದ ಕೆಲಸ ಮಾಡಿದ ಸಂಗಾತಿ ಕೆ.ಎಲ್.ಭಟ್ ಅವರನ್ನು4 ನೇ ಸಮ್ಮೇಳನದಲ್ಲಿ ಆತ್ಮಿಯವಾಗಿ ಗೌರವಿಸಿ ಬಿಡುಗಡೆಗೊಳಿಸಲಾಯಿತು. ಹಾಗೇ ವಕೀಲರಾದ ಆರ್.ಓಬಳೇಶ ಅವರನ್ನು ಕೂಡ ಗೌರವಿಸಲಾಯಿತು.

ಪ್ರತಿನಿಧಿ ಅಧಿವೇಶನ :

ಡಿಸೆಂಬರ್ 24 ರ ಸಂಜೆ ಹಿರಿಯ ಸಂಗಾತಿ ನಾಗರಾಜ್ ರಾವ್ ಅವರ ಧ್ವಜಾರೋಹಣದೊಂದಿಗೆ ಪ್ರತಿನಿಧಿ ಅಧಿವೇಶನ ಆರಂಭಗೊಂಡಿತು. ಹುತಾತ್ಮರಿಗೆ ಗೌರವ ಸಲ್ಲಿಸಿದ ಬಳಿಕ ಮಲಿಯಪ್ಪ, ರೇಣುಕಮ್ಮ ಹಾಗೂ ಓಬಳೇಶ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿ ಮತ್ತು ಪರಿಚಯ ಪತ್ರ ಹಾಗೂ ದಾಖಲಾತಿ ಸಮಿತಿಗಳು ಆಯ್ಕೆ ಮಾಡಲಾಯಿತು. ನಂತರ ಪ್ರತಿನಿಧಿ ಅಧಿವೇಶನವನ್ನು ರಾಜ್ಯ

ಪುಟ 10 ಕ್ಕೆ





ಸಿ.ಪಿ.ಐ(ಎಂ) ಉಡುಪಿ ಜಿಲ್ಲಾ 6ನೇ ಸಮ್ಮೇಳನ.... ಪುಟ 9 ರಿಂದ

ಸಮ್ಮೇಳನದ ಪ್ರತಿನಿಧಿ ಅಧಿವೇಶನದ ಅಧ್ಯಕ್ಷ ಮಂಡಳಿಗೆ ಯು. ದಾಸಭಂಡಾರಿ, ಎಚ್. ವಿಠಲ ಪೂಜಾರಿ ಹಾಗೂ ರಾಜೀವ ಪಡುಕೋಣೆಯವರನ್ನು ಸಮ್ಮೇಳನವು ಆಯ್ಕೆ ಮಾಡಿತು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ– ಕಳೆದ 3 ವರ್ಷಗಳ ಅವಧಿಯಲ್ಲಿ ಪಕ್ಷದ ನೇತೃತ್ವದಲ್ಲಿ ಜರಗಿದ ಹೋರಾಟ ಚಳವಳಿಗಳ ಕುರಿತು ಲಿಖಿತ ವರದಿಯನ್ನು ಮಂಡಿಸಿದರು. ವರದಿಯ ಕುರಿತು ತಾಲೂಕುವಾರು ಗುಂಪು ಚರ್ಚೆಯ ಬಳಿಕ ಒಟ್ಟು 15 ಮಂದಿ ಪ್ರತಿನಿಧಿಗಳು ಚರ್ಚೆ ಸ್ವಯಂ ವಿಮರ್ಶೆ ನಡೆಸಿದ ಬಳಿಕ ಕೆಲವು ತಿದ್ದುಪಡಿಯೊಂದಿಗೆ ಕರಡು ವರದಿಯನ್ನು ಸಮ್ಮೇಳನವು ಅಂಗೀಕರಿಸಿತು.

ಸಮ್ಮೇಳನ ಸ್ವೀಕರಿಸಿದ ನಿರ್ಣಯಗಳು :

2018 ರ ಜನವರಿ 30 ರ 'ಸೌಹಾರ್ದತೆಗಾಗಿ ಕರ್ನಾಟಕ' ಮಾನವ ಸರಪಳಿ ಯಶಸ್ವಿಗೊಳಿಸಬೇಕು. ರೇಷನ್ ವಿತರಣೆಯಲ್ಲಿ ಬಯೋಮೆಟ್ರಿಕ್ ಪದ್ಧತಿ ಕೈಬಿಡಬೇಕು. ಮನೆ ನಿವೇಶನ ಹೋರಾಟ ತೀವ್ರಗೊಳಿಸಬೇಕು. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವೇಗ ಹೆಚ್ಚಿಸಬೇಕು. ಕಾರವಾರ–ಬೆಂಗಳೂರು ರಾತ್ರಿ ರೈಲಿನ ಪ್ರಯಾಣ ಅವಧಿ ಕಡಿತಗೊಳಿಸಬೇಕು. ಇನ್ನೊಂದು ರಾತ್ರಿ ರೈಲು ಓಡಿಸಬೇಕು. ಕೇಂದ್ರ, ರಾಜ್ಯ ಸರಕಾರಗಳ ಜನವಿರೋಧಿ ನೀತಿ ವಿರುದ್ಧದ ಹೋರಾಟ ತೀವ್ರಗೊಳಿಸಬೇಕು. ವಾರಾಹಿ ನೀರಾವರಿ ಯೋಜನೆ ಪೂರ್ಣಗೊಳಿಸಬೇಕು. ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಪುನಶ್ಚೇತನಕ್ಕೆ ಒತ್ತಾಯ, ಜಿ.ಎಸ್.ಟಿ. ನೋಟು ರದ್ಧತಿ ತೊಂದರೆ ನಿವಾರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದ ನಿರ್ಣಯವನ್ನು ಕೈಗೊಳ್ಳಲಾಯಿತು.

ನೂತನ ಜಿಲ್ಲಾ ಸಮಿತಿಗೆ ಆಯ್ಕೆ :

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಗೆ ನೂತನ ಕಾರ್ಯದರ್ಶಿಯಾಗಿ ಬಾಲಕೃಷ್ಣ ಶೆಟ್ಟಿ ಪುನರಾಯ್ಕೆಗೊಂಡರು. ಕೆ. ಶಂಕರ, ಮಹಾಬಲ ವಡೇರ ಹೋಬಳಿ, ಎಚ್. ನರಸಿಂಹ, ಸುರೇಶ ಕಲ್ಲಾಗರ, ವೆಂಕಟೇಶ ಕೋಣಿ, (ಕಾರ್ಯದರ್ಶಿ ಮಂಡಳಿ ಸದಸ್ಯರು) ಯು. ದಾಸಭಂಡಾರಿ, ರಾಜೀವ ಪಡುಕೋಣೆ, ಉಮೇಶ ಕುಂದರ್, ವಿಠಲ ಪೂಜಾರಿ, ರಾಜೇಶ ವಿ. ಶಶಿಧರ, ನಾಗರತ್ನ ನಾಡ, ಬಲ್ಕೀಸ್, ಜಿ.ಡಿ. ಪಂಜು ಒಳಗೊಂಡಂತೆ 15 ಮಂದಿ ಜಿಲ್ಲಾ ಸಮಿತಿಗೆ ಆಯ್ಕೆ ಮಾಡಲಾಯಿತು. ರಾಜ್ಯ ಸಮ್ಮೇಳನಕ್ಕೆ ಒಟ್ಟು 11 ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ವರ್ಣ ರಂಜಿತ ಮೆರವಣಿಗೆ–ಸಾರ್ವಜನಿಕ ಸಭೆ : ಸಮ್ಮೇಳನದ 3ನೇ ದಿನ ದಿನಾಂಕ : 26 ಡಿಸೆಂಬರ್ 2017 ರಂದು ರೈತ ಕೃಷಿಕೂಲಿ ಕಾರ್ಮಿಕರ ಸುಮಾರು 3500 ಕ್ಕೂ ಹೆಚ್ಚು ಸಂಖ್ಯೆಯಲ್ಲಿ ವರ್ಣರಂಜಿತ ಮೆರವಣಿಗೆಯು ಬೈಂದೂರು ನಗರದ ಪ್ರಮುಖ ಬೀದಿಯಲ್ಲಿ ಘೋಷಣೆ ಕೂಗುತ್ತಾ ಸಾರ್ವಜನಿಕ ಸಭೆಯ ಸ್ಥಳಕ್ಕೆ ತಲುಪಿತು. ಬೈಂದೂರಿನ ಇತಿಹಾಸದಲ್ಲೇ ಪ್ರಥಮ ಬಾರಿಗೆ ಸಮವಸ್ತ್ರದಾರಿಗಳ ಕೆಂಬಾವುಟದ ಬೃಹತ್ ಮೆರವಣಿಗೆಯು ಬೈಂದೂರಿನ ನಾಗರಿಕರಿಗೆ ಆಕರ್ಷಣೆಯಾಗಿತ್ತು. ಕೆಂಪು, ಬಾವುಟ, ತೋರಣಗಳಿಂದ ಸಿಂಗರಿಸಿದ್ದ ಬೈಂದೂರು ಪೇಟೆ ಕೆಂಪೇರಿತ್ತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಮ್ಯೂನಿಸ್ಟ್ ಪಕ್ಷದಲ್ಲಿ ಮಾತ್ರವೇ ನಿಜವಾದ ಆಂತರಿಕ ಪ್ರಜಾಪ್ರಭುತ್ವ ಜೀವಂತವಾಗಿರುವುದರಿಂದಲೇ ಪಕ್ಷವು ನವ ಉದಾರವಾದಿ ಆರ್ಥಿಕ ನೀತಿ ಹಾಗೂ ಕೋಮು ದ್ವೇಷದ ವಿರುದ್ಧ ಸಮರ ಶೀಲ ಹೋರಾಟ ಮಾಡುವುದಾಗಿದೆ. ಇತ್ತೀಚಿನ ದಿನಗಳಲ್ಲಿ ಆತಂಕಕಾರಿ ಬೆಳವಣಿಗೆಯಾದ ದಲಿತ ಅಲ್ಪ ಸಂಖ್ಯಾತರ ಮೇಲಿನ ಹೆಚ್ಚುತ್ತಿರುವ ದೌರ್ಜನ್ಯ ಸಂಘ ಪರಿವಾರ ಗೋರಕ್ಷಣೆ, ಕೋಮು ದ್ವೇಷ, ಮೂಲಭೂತವಾದದ ಗಂಭೀರ ಪರಿಸ್ಥಿತಿ ಉತ್ತರ ಪ್ರದೇಶದಲ್ಲಿ ದನದ ಮಾಂಸ ಇದೆ ಎಂದು ಮಹಮ್ಮದ್ ಅಖ್ಲಾಕ್‌ನನ್ನು ಬಡಿದು ಸಾಯಿಸಿದ್ದರು. ಜಾರ್ಖಂಡ್ ದನದ ವ್ಯಾಪಾರಿ ಮೇಲೆ ದೌರ್ಜನ್ಯ, ಗುಜರಾತ್‌ನ ಊನಾದಲ್ಲಿ ಸತ್ತ ದನದ ಚರ್ಮ ಸುಲಿದ ದಲಿತರಿಗೆ ಅವಮಾನ ಮಾಡಿ ಹಲ್ಲೆ ನಡೆಸಿದರು. ಉಡುಪಿಯ ಬ್ರಹ್ಮಾವರ ಸಮೀಪ ಪ್ರವೀಣ ಪೂಜಾರಿ ದನದ ವ್ಯಾಪಾರಿಗೆ ಬಿ.ಜೆ.ಪಿ.ಯವರೇ ಹೊಡೆದು ಕೊಲೆ ಮಾಡಿದರು. ಕೊಡಗು– ಮುಸ್ಲಿಂ ರೈತ ಕೃಷಿಗಾಗಿ ದನ ಸಾಕಿರುವುದನ್ನು ಗುಂಡಿಕ್ಕಿ ಕೊಂದಿರುವುದು. ಈ ಎಲ್ಲಾ ಪ್ರಕರಣಗಳು ಧಾರ್ಮಿಕ ಅಹಿಷ್ಣುತೆ, ಆಹಾರ ಹಕ್ಕಿನ ಮೇಲಿನ ದಾಳಿ, ಗಲಭೆ ಮಾಡಲು ಹವಣಿಸುತ್ತಿರುವುದು ಎಂದು ಶ್ರೀ ರಾಮ ರೆಡ್ಡಿ ಆತಂಕ ವ್ಯಕ್ತಪಡಿಸಿದರು.

ಸಿಪಿಐ(ಎಂ) ಪಕ್ಷದ ಮೇಲೆ ದೊಡ್ಡ ಜವಾಬ್ದಾರಿ ಇದೆ. ದಲಿತರು ಅಲ್ಪ ಸಂಖ್ಯಾತರ ಪರವಾಗಿ ನಿಲ್ಲಬೇಕು. ನಮ್ಮ ಹೋರಾಟಕ್ಕೆ ಹಿಂದೇಟು ಹಾಕಬಾರದು ಎಂದು ಶ್ರೀ ರಾಮ ರೆಡ್ಡಿ ಅಭಿಪ್ರಾಯಪಟ್ಟರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ. ಶಂಕರ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಕಾರ್ಯದರ್ಶಿ ಮಂಡಳಿ ಸದಸ್ಯರೂ ಸ್ವಾಗತ ಸಮಿತಿ ಅಧ್ಯಕ್ಷ ವೆಂಕಟೇಶ ಕೋಣಿ ಸ್ವಾಗತ ಭಾಷಣ ಮಾಡಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಹಾಗೂ ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯ ಸುರೇಶ ಕಲ್ಲಾಗರ ವಂದಿಸಿದರು.

ಸಾರ್ವಜನಿಕ ಸಭೆಯು ಮುನ್ನ ಗಣೇಶ ಗಂಗೊಳ್ಳಿ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೆಂಪಾದವೂ ಎಲ್ಲಾ ಕೆಂಪಾದವೂ ಹಾಡಿನ ಮೂಲಕ ಸಾರ್ವಜನಿಕ ಸಭೆ ಆರಂಭಗೊಂಡಿತು.

ಈ ಸಂದರ್ಭದಲ್ಲಿ ಬಡ ಕೃಷಿ ಕಾರ್ಮಿಕ ಬಂದುಗಳೊಬ್ಬರ ಚಿಕ್ಕ ಪ್ರಾಯದ ಮಗುವಿಗೆ ರಕ್ತ ಕ್ಯಾನ್ಸರ್ ಖಾಯಿಲೆ ಪೀಡಿತರಾಗಿದ್ದು–ವೈದ್ಯಕೀಯ ಚಿಕಿತ್ಸೆಗಾಗಿ ಸಾರ್ವಜನಿಕರಿಂದ ಸಂಗ್ರಹಿಸಿ ಹಣ ರೂ. 23,500/– ನ್ನು ಸಹಾಯಧನವಾಗಿ ಕಾಂ॥ ಶ್ರೀರಾಮ ರೆಡ್ಡಿಯವರು ಅನಾರೋಗ್ಯ ಪೀಡಿತ ಮಗುವಿನ ಕುಟುಂಬದವರಿಗೆ ಹಸ್ತಾಂತರಿಸಿದರು.

ದಾವಣಗೆರೆ –ಚಿತ್ರದುರ್ಗ ಸಿ.ಪಿ.ಐ(ಎಂ) ಜಿಲ್ಲಾ 4ನೇ ಸಮ್ಮೇಳನ.... ಪುಟ 9 ರಿಂದ

ಸಮಿತಿ ಸದಸ್ಯ ಸೈಯದ್ ಮುಜೀಬ್ ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ವರದಿ ಮಂಡಿಸಿದರು. ಮತ್ತೊಬ್ಬ ರಾಜ್ಯ ಸಮಿತಿ ಸದಸ್ಯ ಕೆ. ಮಹಾಂತೇಶ ಪ್ರತಿನಿಧಿಗಳು ಹೇಗೆ ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನುವ ಮಾರ್ಗದರ್ಶನ ನೀಡಿದರು. ಮಾರನೇ ದಿನ 13 ಸಂಗಾತಿಗಳು ವರದಿ ಮೇಲೆ ಚರ್ಚೆ ನಡೆಸಿದರು. ನಂತರ ಕಾರ್ಯದರ್ಶಿ ಸಂಘಟನಾ ಸಮಿತಿ ಪರವಾಗಿ ಉತ್ತರ ನೀಡಿದರು. ಅದಾದ ಬಳಿಕ ಸಮ್ಮೇಳನ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

ನೂತನ_ನಾಯಕತ್ವ

ಎರಡು ದಿನಗಳ ಸಿಪಿಐ(ಎಂ)ಪಕ್ಷದ 4 ನೇ ದಾವಣಗೆರೆ ಚಿತ್ರದುರ್ಗ ಸಮ್ಮೇಳನವು ಎರಡು ಜಿಲ್ಲೆಗಳಲ್ಲಿ ಮುಂಬರುವ ದಿನಗಳಲ್ಲಿ ಬಲಿಷ್ಟ ರೈತ ಹಾಗೂ ಕಾರ್ಮಿಕ ಚಳವಳಿ ಸೇರಿದಂತೆ ಎಲ್ಲಾ ಜನಚಳವಳಿಯನ್ನು ಬಲಪಡಿಸುವ ತೀರ್ಮಾನ ಕೈಗೊಂಡಿತು. ಅಲ್ಲದೆ ಮುಂದಿನ ಮೂರು ವರ್ಷಗಳ ಅವಧಿಗೆ ನೂತನ ಎರಡು ಜಲ್ಲಾ ಪ್ರತ್ಯೇಕ ಸಂಘಟನಾ ಸಮಿತಿಗಳನ್ನು ಆಯ್ಕೆ ಮಾಡಿತು.

ದಾವಣಗೆರೆ ಸಮಿತಿ:

ದಾವಣಗೆರೆ ಜಿಲ್ಲಾ ಸಮಿತಿ ಕಾರ್ಯದರ್ಶಿಯನ್ನಾಗಿ ಸಮಾಜದಲ್ಲಿ ಅತ್ಯಂತ ತುಳಿತಕ್ಕೊಳಗಾದ ದೇವದಾಸಿ ಮಹಿಳೆಯರನ್ನು ಅವರ ಮಕ್ಕಳನ್ನು ಸಂಘಟಿಸಿ ಅವರ ನಾಯಕಿಯಾಗಿ ಬೆಳೆದ ಶ್ರೀಮತಿ ಟಿ.ವಿ.ರೇಣುಕಮ್ಮ ಅವರನ್ನು ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಮಿತಿಯ ಇತರೆ ಸದಸ್ಯರೆಂದರೆ ಕೆ.ಎಲ್.ಭಟ್, ಈ ಶ್ರೀನಿವಾಸ್, ಶ್ರೀನಿವಾಸಮೂರ್ತಿ, ರಹಮತ್, ಆನಂದರಾಜ್, ಪ್ರಜ್ಞಾ ಪಾಟೀಲ್, ಖಾಯಂ ಆಹ್ವಾನಿತರಾಗಿ ಆಶ್ಫಕ್ ಅಹ್ಮದ್ ಹಾಗೂ ಮಹಾಲಿಂಗಪ್ಪ ಆಯ್ಕೆಯಾದರು.

ಚಿತ್ರದುರ್ಗ ಸಮಿತಿ:

ಚಿತ್ರದುರ್ಗ ಸಂಘಟನಾ ಸಮಿತಿ ಜಿಲ್ಲಾ ಕಾರ್ಯದರ್ಶಿಯನ್ನಾಗಿ ಹಿಂದುಳಿದ ಮೊಳಕಾಲ್ಮೂರು ತಾಲೂಕಿನ ರಾಂಪುರದಿಂದ ವಿದ್ಯಾರ್ಥಿ ಚಳವಳಿ ಮೂಲಕ ಪಕ್ಷಕ್ಕೆ ಬಂದು ಹಲವು ಚಳುವಳಿಗಳನ್ನು ಮುನ್ನಡೆಸುತ್ತಿರುವ ತೀರ ಹಿಂದುಳಿದ ಮತ್ತು ನಿರ್ಲಕ್ಷ್ಯಕ್ಕೊಳಗಾದ ಸಮುದಾಯದ ಡಿಎಂ ಮಲಿಯಪ್ಪ ಆಯ್ಕೆಯಾದರು. ಅಲ್ಲಿನ ಸಮಿತಿಗೆ ಸದಸ್ಯರಾಗಿ ಟಿ. ತಿಪ್ಪೇಸ್ವಾಮಿ, ನಿಂಗಣ್ಣ, ಗೌಸಪೀರ್, ನಿಂಗಮ್ಮ ಹಾಗೂ ನಾಗರಾಜ್ ಆಯ್ಕೆಯಾದರು.

ಅವಿಭಜಿತ ಜಿಲ್ಲೆಯಲ್ಲಿ ಸಿಪಿಐ(ಎಂ) ಬೆಳವಣಿಗೆ ನೋಟ

ದಾವಣಗೆರೆ ಚಿತ್ರದುರ್ಗ ಜಿಲ್ಲೆಗಳಲ್ಲಿ ಸಿಪಿಐ(ಎಂ) ಪಕ್ಷದ ಮಾರ್ಗದರ್ಶನದಲ್ಲಿ ದಶಕಗಳಿಂದ ಹರಿಹರವನ್ನು ಕೇಂದ್ರವಾಗಿಟ್ಟುಕೊಂಡು ಕೀರ್ಲೋಸ್ಕರ್, ಪಾಲಿಫೈಬರ್ಸ್ ಹಾಗೂ ಗ್ರಾಸಿಂ ಇಂಡಸ್ಟ್ರೀ, ಹಾಗೂ ಬಡ ಬೀಡಿಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಸಿಐಟಿಯು ನೇತೃತ್ವದಲ್ಲಿ ಚಾರಿತ್ರಿಕ ಚಳವಳಿ ನಡೆಸಿದ ಇತಿಹಾಸವಿದೆ. ತೊಂಬತ್ತರ ದಶಕದ ಬಳಿಕ ಸರಕಾರದ ನೀತಿಗಳ ಕಾರಣದಿಂದಾಗಿ ಹರಿಹರ ಕಿರ್ಲೋಸ್ಕರ್ ಕಾರ್ಖಾನೆ ಮುಚ್ಚಿ ಕಾರ್ಮಿಕ ಚಳವಳಿಯಲ್ಲಿ ಸ್ಥಗಿತತೆ ಕಂಡಿತು. ಆದರೂ ಇತರೆ ಕಾರ್ಮಿಕ ವಿಭಾಗವನ್ನು ಸಂಘಟಿಸುವ ಮೂಲಕ ಇಡೀ ಅವಿಭಜಿತ ಜಿಲ್ಲೆಯಲ್ಲಿ ವಿಸ್ತರಿಸಲ್ಪಟ್ಟಿತು.

ಮುಖ್ಯವಾಗಿ ಗ್ರಾಮೀಣ ಮಟ್ಟದಲ್ಲಿ ಶೋಷಣೆಗೊಳಗಾಗಿದ್ದ ಗ್ರಾಮ ಪಂಚಾಯ್ತಿಯ ವಿವಿಧ ನೌಕರರನ್ನು ಸಂಘಟಿಸಿ ಅವರ ಬದುಕಿಗೊಂದು ಆಸರೆಯಾಗಿ ಕಾರ್ಮಿಕ ಚಳವಳಿ ಬೆಳೆಯಲು ಸಿಪಿಐ(ಎಂ) ಸಹಾಯ ಮಾಡಿತು. ಹಾಗೆ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಮುಖ್ಯವಾಗಿ ಹಮಾಲಿ ಕಾರ್ಮಿಕರು, ಆಟೋಚಾಲಕರು ವಿವಿಧಗುತ್ತಿಗೆಕಾರ್ಮಿಕರನ್ನು ಸಂಘಟಿಸಿ ಅವರದೇ ಬೇಡಿಕೆಗಳಿಗಾಗಿ ಹೋರಾಟ ನಡೆಸಿತು. ಜಿಲ್ಲೆಯಲ್ಲಿರುವ ಸಾವಿರಾರು ಬಗರಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರಕ್ಕಾಗಿ ಹಲವು ಚಳವಳಿಗಳನ್ನು ನಡೆಸಿತು. ಮಾತ್ರವಲ್ಲ ಅತ್ಯಂತ ಅಮಾನವೀಯ ದೇವದಾಸಿ ಪದ್ದತಿ ವಿರುದ್ದ ಮತ್ತು ಅದರ ಹೆಸರಿನಲ್ಲಿ ನಡೆಯುತ್ತಿದ್ದ ದಲಿತ ಮಹಿಳೆಯರ ಶೋಷಣೆ ವಿರುದ್ದ ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘದ ಮೂಲಕ ಧೀರೋದಾತ್ತ ಹೋರಾಟಗಳನ್ನು ನಡೆಸಿದ ಹೆಗ್ಗಳಿಕೆ ಸಿಪಿಐ(ಎಂ) ಪಕ್ಷದ್ದು. ಅಷ್ಟಕ್ಕೆ ಆ ಚಳವಳಿಯನ್ನು ಸೀಮಿತಗೊಳಿಸದೆ ದೇವದಾಸಿ ಮಹಿಳೆಯರಿಗೆ ಭೂಮಿ, ನಿವೇಶನ, ಮಾಸಾಶನಕ್ಕಾಗಿ ಹಾಗೂ ಅವರ ಮಕ್ಕಳ ಶಿಕ್ಷಣ, ಉದ್ಯೋಗ ಮೊದಲಾದ ಪ್ರಶ್ನೆಗಳನ್ನು ಮುನ್ನೆಲೆಗೆ ತಂದು ಸರಕಾದ ಗಮನ ಸೆಳೆಯುವ ಹೋರಾಟವನ್ನು ಸಿಪಿಐ(ಎಂ) ಪಕ್ಷದ ಮಾರ್ಗದರ್ಶನದಲ್ಲಿ ನಡೆಸಲಾಗಿದೆ.

ಸಿಪಿಐ(ಎಂ) ಪಕ್ಷ ಈ ಎರಡು ಜಿಲ್ಲೆಯಲ್ಲಿ ಒಂದು ಸಣ್ಣ ಶಕ್ತಿಯಾಗಿದ್ದರೂ ನಮ್ಮಕಾರ್ಮಿಕ ಚಳವಳಿ ಮೂಲಕ ನಡೆಸುತ್ತಿರುವ ಚಳವಳಿಗೆ ಆಕರ್ಷಿತರಾಗಿಇತ್ತೀಚಿನ ದಿನಗಳಲ್ಲಿ ಅಂಗನವಾಡಿ, ಬಿಸಿಯೂಟ, ಕಟ್ಟಡ ಮತ್ತಿತರೆಕಾರ್ಮಿಕರು ಬಂದು ಸೇರುತ್ತಿದ್ದಾರೆ. ಜಿಲ್ಲೆಯಲ್ಲಿ ಕೋಮುವಾದದ ವಿರುದ್ದ ಮತ್ತು ಸಾಮರಸ್ಯದ ಬದುಕಿಗಾಗಿ ಜನತೆಯ ವಿಶಾಲ ಐಕ್ಯ ಚಳವಳಿಯನ್ನು ಕಟ್ಟಲು ಸಿಪಿಐ(ಎಂ) ಹಲವು ರೀತಿಯಲ್ಲಿ ಶ್ರಮಿಸಿದೆ. ಈ ಎಲ್ಲಾ ಬೆಳವಣಿಗೆಗಳು ಮುಂದಿನ ದಿನಗಳಲ್ಲಿ ಎರಡು ಜಿಲ್ಲೆಗಳಲ್ಲಿ ಸಿಪಿಎಂ ಪಕ್ಷದ ಬೆಳವಣಿಗೆಗೆ ಖಂಡಿತಾ ಸಹಾಯವಾಗಲಿವೆ. ಈ ಎರಡು ದಿನಗಳ ಸಮ್ಮೇಳನದ ಮೂಲಕ ಜಿಲ್ಲೆಯಲ್ಲಿ ಸಿಪಿಐ(ಎಂ) ಒಂದು ನೆಲೆಯನ್ನು ಗುರುತಿಸಿಕೊಳ್ಳುವುದು ಸಾಧ್ಯವಾಗಿದೆ. ಮಾತ್ರವಲ್ಲ ಒಂದು ಹೊಸ ಉತ್ಸಾಹ ಹಾಗೂ ಸ್ಫೂರ್ತಿ ಒದಗಿಸಿದೆ.

ಸಂವಿಧಾನ_ರಕ್ಷಿಸಿ ದಿನ ಕೇಂದ್ರ ಸಚಿವರ ಹೇಳಿಕೆ ವಿರುದ್ಧ ಪ್ರತಿಭಟನೆ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ಮನುಸ್ಮೃತಿಯನ್ನು ದಹನ ಮಾಡಿದ ದಿನ ಡಿಸೆಂಬರ್. 25 ರಂದು ದಾವಣಗೆರೆ ಜಿಲ್ಲೆಯ ಪ್ರಗತಿ ಪರ ಸಂಘಟನೆಗಳಿಂದ ಪ್ರಜಾಪ್ರಭುತ್ವ ಉಳಿಸಿ ಸಂವಿಧಾನ ರಚಿಸಿ ಎನ್ನುವ ಘೋಷಣೆಯೊಂದಿಗೆ ಇಂದು ಸಿಪಿಎಂ, **ಖಜು**, ದಲಿತ ಹಕ್ಕುಗಳ ಸಮಿತಿ, ರೈತಸಂಘ ಹಾಗೂ ಮಾನವ ಬಂಧುತ್ವ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕಾರ್ಯಕ್ರಮದಲ್ಲಿ ಬಿ.ಜೆ.ಪಿ ಯ ಕೆಂದ್ರ ಸಚಿವರಾದ ಅನಂತ ಕುಮಾರ್ ಹೆಗಡೆ ರವರು ಇಂದು ನಮ್ಮ ದೇಶವನ್ನು ಅಂಬೇಡ್ಕರ್ ಸ್ಮೃತಿ ಆಳುತ್ತಿದೆ ಆದರೆ ಸಂಘಪರಿವಾರ ಇದೀಗ ಮನುಸ್ಮೃತಿಯನ್ನು ನಮ್ಮ ದೇಶದ ಜನರ ಮೇಲೆ ಹೇರುವ ಹುನ್ನಾರ ನಡೆಸಿದೆ. ಅದರ ಭಾಗವಾಗಿಯೇ ಕೇಂದ್ರ ಸಚಿವ ಅನಂತ ಹೆಗೆಡೆ ನಮ್ಮ ದೇಶದ ಸಂವಿಧಾನವನ್ನು ಬಾಯಿಗೆ ಬಂದಂತೆ ತೆಗಳುತ್ತಿದ್ದಾರೆ ಇದು ಖಂಡನಾರ್ಹ ಎಂದು ಪ್ರತಿಭಟನಾ ಕಾರರು ಖಂಡಿಸಿದರು. ಹೋರಾಟದಲ್ಲಿ ಸಿಪಿಎಂ ರಾಜ್ಯ ಸಮಿತಿಯ ಸದಸ್ಯ ಮಹಾಂತೇಶ, ಸೈಯದ್ ಮುಜೀಬ್ ಜಿಲ್ಲಾ ಮುಖಂಡರಾದ ಕೆ ಎಲ್ ಭಟ್, ನೂತನ ಜಿಲ್ಲಾ ಕಾರ್ಯದರ್ಶಿ ರೇಣುಕಮ್ಮ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದರಾಜ್, ಖಜಾಂಚಿ ಕೈದಾಳ ಉಮೇಶ, ಎಸ್.ಎಫ್.ಐ. ಜಿಲ್ಲಾ ಘಟಕದ ಅಧ್ಯಕ್ಷ ಮಹಾಲಿಂಗಪ್ಪ, ಶ್ರೀನಿವಾಸ ದೇವದಾಸಿ ಸಂಘದ ಹಿರಿಯಮ್ಮ ಪ್ರಜ್ಞಾ ಪಾಟೀಲ್, ದಲಿತ ಹಕ್ಕುಗಳ ಸಮಿತಿಯ ಭರಮಪ್ಪ, ಅಣ್ಣಪ್ಪ ಹಿರಿಯೂರಿನ ನಿಂಗಮ್ಮ ವಕೀಲರಾದ ಆರ್ ಒಬಳೇಶ್ ಚಳ್ಳಕೆರೆ, citu ತಿಪ್ಪೇಸ್ವಾಮಿ **sfi** ತಿಪ್ಪೇಸ್ವಾಮಿ ಅನಂತರಾಜ, ಮಾನವ ಬಂದುತ್ವ ವೇದಿಕೆಯ ವಿಭಾಗೀಯ ಸಂಚಾಲಕಾರದ ರಘು ದೋಡ್ಡಮನಿ, ರೈತ ಮುಖಂಡ ಬಲ್ಲೂರು ರವಿಕುಮಾರ ಮೊದಲಾದವರು ಹೋರಾಟದಲ್ಲಿ ಭಾಗವಹಿಸಿದ್ದರು.

ಇಂದಿನ ಮಾಧ್ಯಮದ ಪರಿಸ್ಥಿತಿ

ವಸಂತರಾಜ ಎನ್.ಕೆ.

ಸಿಪಿಐ(ಎಂ) ಮತ್ತು ಎಡ ಪಕ್ಷಗಳು ದೇಶದಲ್ಲೂ ನಮ್ಮ ರಾಜ್ಯದಲ್ಲೂ ರಾಜಕೀಯವಾಗಿ ತೀವ್ರ ಮುನ್ನಡೆ ಸಾಧಿಸಲು ಬದಲಿ ಮಾಧ್ಯಮ ಕಟ್ಟುವ ಕೆಲಸದ ಬಗ್ಗೆ ಮುತುವರ್ಜಿ ವಹಿಸುವುದು ತುರ್ತು ಅಗತ್ಯ. ಈ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಾಧ್ಯಮಗಳಲ್ಲಿ ಪ್ರಮುಖ ಬೆಳವಣಿಗೆಗಳನ್ನು ಗಮನಿಸುವುದು ಅಗತ್ಯವಿದೆ.

ಮಾಧ್ಯಮ ಇಂದು ಭಾರೀ ಏಕಸ್ವಾಮ್ಯದ ಉದ್ಯಮ ಆಗಿರುವುದು ಮಾತ್ರವಲ್ಲ, ಅದರ ಬಾಹುಳ್ಯ, ವೈವಿಧ್ಯ, ವೇಗ, ತಲುಪುವಿಕೆ, ಪ್ರಭಾವ ನೂರ್ಪಟ್ಟು ಹೆಚ್ಚಾಗಿದೆ. ಅದು ಮನುಷ್ಯನ ಎಲ್ಲಾ ಇಂದ್ರಿಯಗಳನ್ನು ಹಿಡಿದಿಟ್ಟುಕೊಂಡು ಮನಸ್ಸನ್ನು ಪೂರ್ತಿಯಾಗಿ ವಶಪಡಿಸಿಕೊಳ್ಳಬಲ್ಲುದು.

ಇಂದು ಜಗತ್ತಿನ ಎಲ್ಲಾ ಜನ ಯಾವುದೇ ಸ್ಥಳದಲ್ಲಿ, ಯಾವುದೇ ಸಮಯದಲ್ಲಿ ಒಂದಲ್ಲ ಒಂದು ಮಾಧ್ಯಮದ ಹಿಡಿತದಲ್ಲಿ ಇರುತ್ತಾರೆ. ಅಂದರೆ ಈ ಮಾಧ್ಯಮಗಳ ಒಡೆಯರಾದ ದೈತ್ಯ ಮಾಧ್ಯಮ ಕಾರ್ಪೊರೇಟ್‌ಗಳ ಹಿಡಿತದಲ್ಲಿ ಇರುತ್ತಾರೆ. ಆಳುವ ವರ್ಗಗಳ ಪರವಾಗಿ 'ಸಾಮೂಹಿಕ ಸಹಮತ ಉತ್ಪಾದನೆ' ಮಾಡುವ ಅವುಗಳ ಸಾಮರ್ಥ್ಯದ ಬಗ್ಗೆ ನೋಮ್ ಚೋಮ್ಸ್ಕಿ ವಿವರವಾಗಿ ಮಾರ್ಮಿಕವಾಗಿ ಬರೆದಿದ್ದಾರೆ. ಆಳುವ ವರ್ಗಗಳ ಪರವಾದ ರಾಜಕೀಯ ಅಭಿಪ್ರಾಯ ಮತ್ತು ಸಹಮತವನ್ನು ಜನತೆಯಲ್ಲಿ ರೂಪಿಸುವಲ್ಲಿ ಅವುಗಳ ಪಾತ್ರದ ಹಿನ್ನೆಲೆಯಲ್ಲಿ ಅದಕ್ಕೆ ಪ್ರತಿಯಾಗಿ ನಿಲ್ಲಬಲ್ಲ ಬದಲಿ ಮಾಧ್ಯಮ ಇಲ್ಲದೆ, ಗಂಭೀರ ರಾಜಕೀಯ ಚಟುವಟಿಕೆ ಮುನ್ನಡೆ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ಇದೆ.

ಮಾಧ್ಯಮದ ಬಿಜೆಪಿ–ಕರಣ ಕೋಮುವಾದೀಕರಣ

2014ರ ಚುನಾವಣೆಯಲ್ಲಿ ಮತ್ತು ಕಳೆದ ಮೂರು ವರ್ಷಗಳ ಮೋದಿ ಸರಕಾರದ ಮತ್ತು ಬಿಜೆಪಿಯ ಪ್ರಜಾಪ್ರಭುತ್ವ–ವಿರೋಧಿ, ಜನ–ವಿರೋಧಿ ನಡೆಗಳನ್ನು ಕಾರ್ಪೊರೆಟ್ ಮಾಧ್ಯಮಗಳ ಬಗ್ಗೆ ಹಿಂದಿನಂತೆ ಜಾಣಮೌನ ವಹಿಸದೆ ಅದರ ಪ್ರಬಲ ಬೆಂಬಲಿಗರಾಗಿರುವುದು ಹೊಸ ಬೆಳವಣಿಗೆ. ನೋಟು ನಿಷೇಧ, ಜೆ.ಎನ್.ಯು. ಮತ್ತಿತರ ವಿ.ವಿ.ಗಳ ಮೇಲೆ ದಾಳಿ, ಗೋ–ಕೊಲೆಗಳ ಅಲೆ, ವಿರೋಧ ಪಕ್ಷಗಳ ರಾಜ್ಯ ಸರಕಾರಗಳ ಮೇಲೆ ನಗ್ನ ದಾಳಿ, ಜಿ.ಎಸ್.ಟಿ. ಅವಾಂತರಗಳು, ಆರ್ಥಿಕ ರಂಗದ ವೈಫಲ್ಯಗಳು – ಇವೆಲ್ಲವನ್ನೂ ಕಾರ್ಪೊರೆಟ್ ಮಾಧ್ಯಮಗಳು ಹಿಂದಿನ ಸರ್ಕಾರಿ ಮಾಧ್ಯಮಗಳನ್ನೂ ನಾಚಿಸುವ ರೀತಿಯಲ್ಲಿ ಬೆಂಬಲಿಸಿವೆ. ಹಿಂದೆ ಇಂಗ್ಲಿಷ್ 'ರಾಷ್ಟ್ರೀಯ' ಮಾಧ್ಯಮ 'ವಿರೋಧ ಪಕ್ಷವಾಗಿ' 'ವಸ್ತುನಿಷ್ಠವಾಗಿ' ಕೆಲಸ ಮಾಡಿದ್ದು, ಈ ಅವಧಿಯಲ್ಲಿ ತಿರುವು ಮುರುವಾಗಿದೆ. ಪ್ರಾದೇಶಿಕ ಮಾಧ್ಯಮಗಳಿಗಿಂತ 'ರಾಷ್ಟ್ರೀಯ' ಮಾಧ್ಯಮಗಳೇ ಹೆಚ್ಚು 'ಹಿಸ್ ಮಾಸ್ಟರ್ಸ್ ವಾಯ್ಸ್' ಆಗಿವೆ. ಬಿಜೆಪಿ–ಪರವಲ್ಲದ ಮಾಧ್ಯಮಗಳು ಬೆರಳೆಣಿಕೆಯಷ್ಟು ಇವೆ. ರಾಜಕೀಯ ಚಟುವಟಿಕೆಗಳಿಗೆ ಬದಲಿ ಮಾಧ್ಯಮದ ಅಗತ್ಯವನ್ನು ಈ ಬೆಳವಣಿಗೆಗಳು ಇನ್ನಷ್ಟು ಢಾಳಾಗಿ ಮುಂದೆ ತಂದಿದೆ. ಸಾಮಾಜಿಕ ಮಾಧ್ಯಮಗಳು ಬದಲಿ ಮಾಧ್ಯಮದ ಅಗತ್ಯವನ್ನು ಸ್ವಲ್ಪ ಮಟ್ಟಿಗೆ ಪೂರೈಸುತ್ತಿದ್ದರೂ, ಕಾರ್ಪೊರೆಟ್ ಮಾಧ್ಯಮಕ್ಕೆ ಸವಾಲು ಹಾಕಬಲ್ಲ 'ಮುಖ್ಯವಾಹಿನಿ' ಮಾಧ್ಯಮಗಳ ಅಗತ್ಯವೂ ಇದೆ.

ಸಿಪಿಐ(ಎಂ) ಮತ್ತು ಎಡ ಪಕ್ಷಗಳು ದೇಶದಲ್ಲೂ ನಮ್ಮ ರಾಜ್ಯದಲ್ಲೂ ರಾಜಕೀಯವಾಗಿ ತೀವ್ರ ಮುನ್ನಡೆ ಸಾಧಿಸಲು ಬದಲಿ ಮಾಧ್ಯಮ ಕಟ್ಟುವ ಕೆಲಸದ ಬಗ್ಗೆ ಮುತುವರ್ಜಿ ವಹಿಸುವುದು ತುರ್ತು ಅಗತ್ಯ. ಈ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಾಧ್ಯಮಗಳಲ್ಲಿ ಪ್ರಮುಖ ಬೆಳವಣಿಗೆಗಳನ್ನು ಗಮನಿಸುವುದು ಅಗತ್ಯವಿದೆ.

ಈಗಾಗಲೇ 2014 ಲೋಕಸಭಾ ಚುನಾವಣೆಗಳಲ್ಲಿ (ಅದರಲ್ಲೂ ಟಿವಿ ಚಾನೆಲುಗಳು) ಮಾಧ್ಯಮಗಳು ಇನ್ನೂ ಆಳುವ ಪಕ್ಷ ಆಗಿರದ ಬಿಜೆಪಿಯ ತುತ್ತೂರಿಯಾಗಿ ಬಿಟ್ಟಿದ್ದವು. ಅಂಬಾನಿ ನೆಟ್ ವರ್ಕ್ 18 ಮಾಧ್ಯಮ ಕಂಪನಿಯ ಒಡೆತನವನ್ನು ಹೆಚ್ಚು ಕಡಿಮೆ ಕಾನೂನುಬಾಹಿರ ರೀತಿಯಲ್ಲಿ ಕಸಿದುಕೊಳ್ಳುವ ಮೂಲಕ, ದೇಶದ ಹಲವು ಚಾನೆಲುಗಳನ್ನು ಪಡೆದು ಹಲವು ಪ್ರದೇಶಗಳಲ್ಲಿ ಹಲವು ಭಾಷೆಗಳಲ್ಲಿ ಹಲವು ಪ್ರಕಾರಗಳಲ್ಲಿ (ಸುದ್ದಿ, ಮನೋರಂಜನೆ, ಸಂಗೀತ, ಕ್ರೀಡೆ ಇತ್ಯಾದಿ) ಹೆಚ್ಚು ಕಡಿಮೆ ಏಕಸ್ವಾಮ್ಯ ಪಡೆಯಿತು. ಆದರೆ ಹೆಚ್ಚಿನ ಚಾನೆಲುಗಳು ಅಂಬಾನಿ ಒಡೆತನಕ್ಕೆ ಬಂದ ನಂತರ ತಮ್ಮ ಕ್ಷೇತ್ರದಲ್ಲಿ ತಮ್ಮ ಮಾರುಕಟ್ಟೆ ಪಾಲನ್ನು ಕಳೆದುಕೊಂಡಿವೆ. ಅಂಬಾನಿ ಮಾತ್ರವಲ್ಲ, ಟೈಮ್ಸ್, ಸನ್, ಝಿ, ಏಶ್ಯಾನೆಟ್, ಮುಂತಾದ ದೈತ್ಯ ಕಾರ್ಪೊರೇಟುಗಳು ಇಂಗ್ಲಿಷ್, ಹಿಂದಿ ಮಾತ್ರವಲ್ಲ ಎಲ್ಲಾ ಭಾಷೆಗಳ ಪ್ರದೇಶಗಳ ಪ್ರಕಾರಗಳ ಮಾಧ್ಯಮಗಳಲ್ಲಿ ಹಿಡಿತ ಸಾಧಿಸಿವೆ.

ಕ್ರಮೇಣ ಅಂಬಾನಿ ಒಡೆತನದ ಮಾತ್ರವಲ್ಲ, ಹೆಚ್ಚುಕಡಿಮೆ ಎಲ್ಲಾ ಮಾಧ್ಯಮಗಳು ಆಳುವ ಪಕ್ಷಕ್ಕೆ ಮಾತ್ರವಲ್ಲ, ಸಂಘ ಪರಿವಾರಕ್ಕೆ ಬೋ ಪರಾಕು ಹೇಳುವುದರಲ್ಲಿ ಸ್ಪರ್ಧಿಸುವ, ವಿರೋಧ ಪಕ್ಷಗಳ ಮೇಲೆ ಹರಿಹಾಯುವ ತುತ್ತೂರಿಗಳಾಗಿ ಬಿಟ್ಟಿವೆ. ನೋಟು ರದ್ದತಿ, ಜಿ.ಎಸ್.ಟಿ., ಸಂಘ ಪರಿವಾರದ ಎಲ್ಲಾ ಅಪಾಯಕಾರಿ ಹಿಂಸಾಚಾರಗಳು (ಗೋ–ಭಯೋತ್ಪಾದನೆ, ಲವ್ ಜಿಹಾದ್, ನೈತಿಕ ಪೋಲಿಸ್ ಗಿರಿ) ಮುಂತಾದ ಎಲ್ಲಾ ಜನ–ವಿರೋಧಿ ನೀತಿಗಳನ್ನು ಕುರುಡಾಗಿ ಬೆಂಬಲಿಸುತ್ತಿವೆ. ಟಿವಿ ಮಾಧ್ಯಮದಷ್ಟು ಪತ್ರಿಕೆಗಳು ಮಾರಿಕೊಳ್ಳದಿದ್ದರೂ ಸರಕಾರದ ಕ್ರಮಗಳ ನೀತಿಗಳನ್ನು ವಸ್ತುನಿಷ್ಠವಾಗಿ ವಿಮರ್ಶಾತ್ಮಕವಾಗಿ ನೋಡುವುದಕ್ಕೆ ಬರೆಯುವುದಕ್ಕೆ ಹೆದರುತ್ತಿವೆ. ತುರ್ತು ಪರಿಸ್ಥಿತಿ ಅವಧಿ ಸೇರಿದಂತೆ ಹಿಂದೆಂದೂ ಮಾಧ್ಯಮಗಳು ಇಷ್ಟು ಕೆಳಮಟ್ಟಕ್ಕೆ ಹೋಗಿರಲಿಲ್ಲ. ಹಿಂದೆ ಬರಿಯ ಆಳುವ ವರ್ಗದ ತುತ್ತೂರಿಗಳಾಗಿದ್ದರೆ, ಈಗ ಆಳುವ ಪಕ್ಷದ ತೊತ್ತುಗಳಾಗಿವೆ. ಈ ಚಾನೆಲುಗಳ ಭಟ್ಟಂಗಿತನ ಕ್ಷುಲ್ಲಕ ರೋಚಕತನದ ಭರಾಟೆ ಎಷ್ಟು ಕೀಳು ಮಟ್ಟಕ್ಕೆ ಹೋಗಿದೆಯೆಂದರೆ, ದೂರದರ್ಶನ ಚಾನೆಲು ಬಹಳ 'ಸ್ವತಂತ್ರ' ಚಾನೆಲುಗಳಂತೆ ಕಾಣುತ್ತಿವೆ!

ಕರ್ನಾಟಕದಲ್ಲೂ ಬಿಜೆಪಿ–ಕರಣ

ಕರ್ನಾಟಕದಲ್ಲೂ ಅಂಬಾನಿ, ಸನ್, ಝಿ, ಏಶ್ಯಾನೆಟ್ ಟಿವಿ ಮಾಧ್ಯಮದ ಬಹುಭಾಗದ ಮೇಲೆ ಹಿಡಿತ ಸಾಧಿಸಿವೆ. ಇಲ್ಲೂ ಬಿಜೆಪಿ ಸಂಘ ಪರಿವಾರಗಳ ತುತ್ತೂರಿಯಾಗಿವೆ. ಇತ್ತೀಚಿನ ಉಪಚುನಾವಣೆಗಳಲ್ಲಿ ಬಿಜೆಪಿ ಸೋಲಿನ ನಂತರ ಮಾತ್ರವೇ ಸ್ವಲ್ಪ ತಣ್ಣಗಾಗಿವೆ. ಆದರೂ ಒಂದೆರಡು ವಾಹಿನಿಗಳನ್ನು ಬಿಟ್ಟರೆ ಹೆಚ್ಚು ಕಡಿಮೆ ಎಲ್ಲಾ ಚಾನೆಲುಗಳು ಬಿಜೆಪಿಯ ತುತ್ತೂರಿಗಳೇ ಆಗಿವೆ. ಇತರ ಚಾನೆಲುಗಳಲ್ಲೂ ಎಡ–ಪ್ರಜಾಸತ್ತಾತ್ಮಕ ನಿಲುವುಗಳಿಗೆ ಸ್ಥಳ ಕಿರಿದಾಗುತ್ತಾ ಇಲ್ಲವೇ ಇಲ್ಲ ಎನ್ನುವ ಪರಿಸ್ಥಿತಿಗೆ ಬಂದಿದೆ.

ಕರ್ನಾಟಕದಲ್ಲಿ ಈಗ ಒಟ್ಟು ರಾಜ್ಯ ಮಟ್ಟದ 34 ಟಿವಿ ಚಾನೆಲುಗಳು ಮತ್ತು ದೊಡ್ಡ ಸಂಖ್ಯೆಯ (ಜಿಲ್ಲೆಗೆ ಸರಾಸರಿ 5–6 ರಂತೆ) ಸ್ಥಳೀಯ ಚಾನೆಲುಗಳು ಇವೆ. 4 ಎಚ್.ಡಿ. ಚಾನೆಲುಗಳು 2 ಸುದ್ದಿ ಚಾನೆಲು 12 ಹೊಸ ಚಾನೆಲುಗಳು ಕಳೆದ ಮೂರು ವರ್ಷಗಳಲ್ಲಿ ಸೇರಿವೆ. ಈಗ ಒಟ್ಟು 12 ಸುದ್ದಿ ಚಾನೆಲುಗಳು ಇವೆ. ಸುದ್ದಿ ಚಾನೆಲುಗಳು ದೈತ್ಯ ರಾಷ್ಟ್ರೀಯ ಜಾಲಗಳ ಅಥವಾ ಪ್ರಬಲ ರಾಜಕಾರಣಿಗಳ ಒಡೆತನದಲ್ಲಿ ಇದೆ. ಸುದ್ದಿ, ವಿಶ್ಲೇಷಣೆಗಳ ಮಟ್ಟ ದಿನೇ ಕೆಳಕ್ಕೆ ಹೋಗುತ್ತಿದ್ದು ಚರ್ಚೆಯ ಹೆಸರಲ್ಲಿ ಅರಚಾಟವೇ ಪ್ರಧಾನವಾಗಿಬಿಟ್ಟಿದೆ. "ಮನೋರಂಜನೆ" ಚಾನೆಲುಗಳ ಸಾಂಸ್ಕೃತಿಕ ಮಟ್ಟವೂ ಕುಸಿಯುತ್ತಿದ್ದು ರಿಯಾಲಿಟಿ ಶೋ, ಮೂಢನಂಬಿಕೆ ಪ್ರಧಾನ, ಜನಜೀವನಕ್ಕೆ ದೂರವಾದ ಅಸಹಜ ಕೃತ್ರಿಮ ಸಾಮಾಜಿಕ ಧಾರಾವಾಹಿಗಳ ಭರಾಟೆ ಇನ್ನಷ್ಟು ಹೆಚ್ಚಾಗಿದೆ. ಕರ್ನಾಟಕದ ಮೂರರಲ್ಲಿ ಎರಡು ಮನೆಗಳಲ್ಲಿ ಟಿವಿ ಇದ್ದು ಇದು ಇನ್ನೂ ಪ್ರಬಲ ಮಾಧ್ಯಮವಾಗಿದೆ. ಟಿವಿ ಸುದ್ದಿಗಳ ವಿಶ್ವಾಸಾರ್ಹತೆ ಕಡಿಮೆಯಾಗುತ್ತಿದ್ದರೂ



ಇನ್ನೂ ರಾಜಕೀಯ ಪ್ರಚಾರದ ಪ್ರಧಾನ ಮುಖ್ಯ ಸಾಧನವಾಗಿ ಮುಂದುವರೆದಿದೆ.

ದೈನಿಕ ಏರುತ್ತಿದೆ, ವಾರಪತ್ರಿಕೆ ಇಳಿಯುತ್ತಿದೆ

ಎಬಿಸಿ (ಆಡಿಟ್ ಬ್ಯೂರೊ ಆಫ್ ಸರ್ಕುಲೇಶನ್) ಜೂನ್–ಡಿಸೆಂಬರ್ 2016 ಸಮೀಕ್ಷೆ ಪ್ರಕಾರ ಈಗ ಕನ್ನಡ ದೈನಿಕ ಪತ್ರಿಕೆಗಳ ಒಟ್ಟು 46 ಆವೃತ್ತಿಗಳಿದ್ದು ಒಟ್ಟು ಪ್ರಸಾರ 30.26 ಲಕ್ಷ ಇದೆ. ರಾಜ್ಯ ಭಾರತದ ಭಾಷೆಗಳಲ್ಲಿ 7 ನೇ ಸ್ಥಾನದಲ್ಲಿದ್ದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಕೊನೆಯ ಸ್ಥಾನದಲ್ಲಿದೆ. ಕಳೆದ 10 ವರ್ಷಗಳಲ್ಲಿ ಪ್ರಸಾರದ ಹೆಚ್ಚಳದ ದರ ವಾರ್ಷಿಕ ಸರಾಸರಿ ಶೇ..6.4 ಇದ್ದು, ಹೆಚ್ಚಳದ ದರದಲ್ಲಿ 3 ನೇ (ಹಿಂದಿ 1ನೇ, ತೆಲುಗು 2ನೇ) ಸ್ಥಾನದಲ್ಲಿದೆ. ಇನ್ನೂ ಪ್ರಸಾರದ ಹೆಚ್ಚಳಕ್ಕೆ ಸಾಕಷ್ಟು ಅವಕಾಶಗಳಿವೆ ಎಂದು ಇದರರ್ಥ. ವಿಜಯವಾಣಿ, ವಿಜಯಕರ್ನಾಟಕ, ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಅತಿ ಹೆಚ್ಚು ಪ್ರಸಾರ ಇರುವ 6 ಪತ್ರಿಕೆಗಳು. ದೊಡ್ಡ ಜಾಹೀರಾತಿಗೂ, ಸುದ್ದಿಯ ಪ್ರಧಾನ ವಿಶ್ವಾಸಾರ್ಹ ಮೂಲವಾಗಿ ಉಳಿಯಲು, ಜನಮನವನ್ನು ಪ್ರಭಾವಿಸುವ ಅವಕಾಶಕ್ಕೆ – ಟಿವಿ ಜತೆ ಪೈಪೋಟಿ ಮಾಡಬೇಕಾದ ಪತ್ರಿಕೆಗಳು ಪ್ರಧಾನ ಮಾಧ್ಯಮದ ಸ್ಥಾನ ಕಳೆದುಕೊಂಡಿವೆ. ಟಿವಿ ಜತೆ ಪೈಪೋಟಿಗಿಳಿದು ಅಭಿಪ್ರಾಯಗಳಲ್ಲಿ ಬಹುತ್ವದ ಬದಲು ಆಳುವವರಿಗೆ ಪ್ರಿಯವಾಗುವ ಏಕಾಭಿಪ್ರಾಯಕ್ಕೆ, ಜನ–ಮರುಳು ರೋಚಕತೆಗೆ, ಉದ್ರೇಕಕ್ಕೆ ಪ್ರಾಮುಖ್ಯತೆ ಕೊಡುತ್ತಿವೆ. ಆದರೂ ಮೊದಲಿಗಿಂತ ದುರ್ಬಲವಾಗುತ್ತಿದ್ದರೂ, ಸ್ವಲ್ಪ ಮಟ್ಟಿಗಾದರೂ – ಸುದ್ದಿ–ವಿಶ್ಲೇಷಣೆಗಳಲ್ಲಿ ವಿಶ್ವಾಸಾರ್ಹತೆ ಉಳಿಸಿಕೊಂಡಿವೆ, ಜನರನ್ನು ತಟ್ಟುವ ವಿಷಯಗಳ ಬಗ್ಗೆ ಸ್ಪಂದಿಸುತ್ತಿವೆ, ಸೆಕ್ಯುಲರ್ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಅವಕಾಶ ಕೊಡುತ್ತಿವೆ.

ವರ್ಷದಲ್ಲಿ ಒಟ್ಟು ಜಾಹೀರಾತುಗಳಲ್ಲಿ ಮಾಧ್ಯಮದ ಪಾಲು					
ವರ್ಷ	ಟಿವಿ	ಪತ್ರಿಕೆಗಳು	ರೇಡಿಯೊ	ಡಿಜಿಟಲ್	ಹೊರಾಂಗಣ
2011	38.7 %	46.7 %	3.8 %	5.1 %	6.0 %
2013	37.5 %	45.0 %	4.3 %	8.2 %	5.2 %
2016	38.0 %	38.0 %	4.3 %	14.6 %	4.9 %
ಅವಧಿಯಲ್ಲಿ ಜಾಹೀರಾತು ಹೆಚ್ಚಳದ ಸರಾಸರಿ ವಾರ್ಷಿಕ ದರ					
2011–2016	11.6 %	7.6 %	14.6 %	37.94 %	8 %

ಎಬಿಸಿ (ಆಡಿಟ್ ಬ್ಯುರೊ ಆಫ್ ಸರ್ಕುಲೇಶನ್) ಜೂನ್–ಡಿಸೆಂಬರ್ 2016 ಸಮೀಕ್ಷೆ ಪ್ರಕಾರ ಈಗ ಕನ್ನಡ ಮ್ಯಾಗಜೀನ್ (ವಾರಪತ್ರಿಕೆ, ಮಾಸಿಕ ಇತ್ಯಾದಿ) ಗಳ ಒಟ್ಟು ಪ್ರಸಾರ 2.81 ಲಕ್ಷ ಇದೆ. ಇದರಲ್ಲೂ ಕನ್ನಡ ಭಾರತದ ಭಾಷೆಗಳಲ್ಲಿ 7 ನೇ ಸ್ಥಾನದಲ್ಲಿದ್ದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಕೊನೆಯ ಸ್ಥಾನದಲ್ಲಿದೆ. ಒಟ್ಟು ಪತ್ರಿಕೆಗಳ ಆದಾಯದಲ್ಲಿ ಶೇ. 5 ಮಾತ್ರ ಮ್ಯಾಗಜೀನ್ ಗಳದ್ದು. ಒಟ್ಟು ಪತ್ರಿಕೆಗಳ 5 ವರ್ಷಗಳ ಆದಾಯ ಹೆಚ್ಚಳದ ಸರಾಸರಿ ದರ ವಾರ್ಷಿಕ ಶೇ. 7.8 (ಈ ವರ್ಷ ಶೇ. 7.0), ದೈನಿಕಗಳ ದರ ಶೇ. 8.1 (ಈ ವರ್ಷ ಶೇ. 7.8), ಮ್ಯಾಗಜೀನ್ ಗಳ ದರ ಶೇ. 2.1(ಈ ವರ್ಷ ಶೇ. 6.9 ಇಳಿಕೆ). ಮೊದಲ ಬಾರಿಗೆ 2016ರಲ್ಲಿ ಮ್ಯಾಗಜೀನ್ ಗಳ ಆದಾಯ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದೆ. ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಪ್ರಕಾರ ವಾರಪತ್ರಿಕೆ ಮತ್ತು ಮಾಸಿಕಗಳ ಪ್ರಸಾರ (ಈ ಸಂಖ್ಯೆ ಪತ್ರಿಕೆಗಳೇ ಕೊಡುವ ಪ್ರಸಾರ ಸಂಖ್ಯೆ ಮೇಲೆ ಆಧಾರಿತವಾಗಿದ್ದು) 2012ರಿಂದಲೇ ಕಡಿಮೆಯಾಗುತ್ತಾ ಬಂದಿವೆ. ಮ್ಯಾಗಜೀನ್ ಗಳು ದೊಡ್ಡ ಪತ್ರಿಕಾ ಸಮೂಹದ (ದೈನಿಕದ ಕ್ರಾಸ್ ಸಬ್ಸಿಡಿಯಿಲ್ಲದೆ) ಭಾಗವಲ್ಲದೆ ನಡೆಯಲಾರವು ಎಂಬ ಪರಿಸ್ಥಿತಿ ಇದೆ. ಪ್ರಸಾರದ ಜತೆಗೆ ಮ್ಯಾಗಜೀನ್ ಗಳ ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ಪ್ರಭಾವವೂ ಕುಗ್ಗಿದೆ.

ಕನ್ನಡದ ಮ್ಯಾಗಜಿನ್ ಗಳು, ಅದರಲ್ಲೂ ವಾರಪತ್ರಿಕೆಗಳು ಎದುರಿಸುತ್ತಿರುವ ಬಿಕ್ಕಟ್ಟು ನಮ್ಮ ಕಣ್ಣ ಮುಂದಿದೆ. ಗೌರಿ ಲಂಕೇಶ್ ಪತ್ರಿಕೆ ನಿಂತಿದೆ. ಗೌರಿ ಹೆಸರಿನಲ್ಲಿ ಟ್ರಸ್ಟ್ ಕಟ್ಟಿ ಪತ್ರಿಕೆ ಪುನರಾರಂಭಿಸುವ ಪ್ರಯತ್ನ ನಡೆಯುತ್ತಿದೆ. ಅಗ್ನಿ ಸಹ ಪ್ರಿಂಟ್ ಆವೃತ್ತಿ ನಿಲ್ಲಿಸಿ ಬರಿಯ ಆನ್ ಲೈನ್ ಆವೃತ್ತಿ ಆಗಲಿದೆ ಎಂಬ ಸುದ್ದಿ ಬಂದಿದೆ. ರಾಜ್ಯ ಮಟ್ಟದ ವಾರಪತ್ರಿಕೆಗಳು ಹೀಗೆ ಬಿಕ್ಕಟ್ಟು ಎದುರಿಸುತ್ತಿದ್ದರೂ, ಜಿಲ್ಲಾ/ತಾಲೂಕು ಮಟ್ಟದ ಸ್ಥಳೀಯ ಪತ್ರಿಕೆಗಳು ಸಂಖ್ಯೆಯಲ್ಲೂ ಪ್ರಸಾರದಲ್ಲೂ ಹೆಚ್ಚುತ್ತಿರುವಂತೆ ಕಾಣುತ್ತದೆ. ಆದರೆ ಈ ಬಗ್ಗೆ ನಿಖರವಾದ ಮಾಹಿತಿ ಇಲ್ಲ. ಎಡಪಂಥೀಯ ಪತ್ರಿಕೆಗಳಾದ ಜನಶಕ್ತಿ, ಕೆಂಬಾವುಟ, ಹೊಸತುಗಳೇ ಎಲ್ಲ ಕಷ್ಟಗಳನ್ನು ಎದುರಿಸುತ್ತಿದ್ದರೂ ಪ್ರಕಟಣೆ ಮುಂದುವರೆಸಿವೆ.

ವೆಬ್/ಡಿಜಿಟಲ್ ಮಾಧ್ಯಮ ಬೆಳವಣಿಗೆ

ಕಳೆದ 3 ವರ್ಷಗಳಲ್ಲಿ ವೆಬ್, (ಇಂಟರ್) ನೆಟ್ ಅಥವಾ ಡಿಜಿಟಲ್ ಹೊಸ ಮಾಧ್ಯಮವಾಗಿ ಹೊಮ್ಮಿದ್ದು ಹಿಂದಿನ ಎಲ್ಲಾ ಮಾಧ್ಯಮಗಳ ಲೆಕ್ಕಾಚಾರವನ್ನು ಬುಡಮೇಲು ಮಾಡಿ, ಅವುಗಳ ಪಾತ್ರವನ್ನು ಪುನರ್ವಿಮರ್ಶೆಗೆ ಒಡ್ಡುವಂತೆ ಮಾಡಿದೆ. ಸ್ಮಾರ್ಟ್ ಫೋನ್ ಅಗ್ಗ ಮತ್ತು ವ್ಯಾಪಕವಾಗಿರುವುದು, ಡಾಟಾ ಕನೆಕ್ಷನ್ ಬೆಲೆ ಕಡಿಮೆಯಾಗಿರುವುದು ಮತ್ತು ವ್ಯಾಪಕ ಲಭ್ಯತೆ ಗಣನೀಯವಾಗಿ ಹೆಚ್ಚಿರುವುದು ಹಾಗೂ ವಾಟ್ಸಪ್/ಫೇಸ್ ಬುಕ್, ಯೂ ಟ್ಯೂಬ್ ಮುಂತಾದ ಸಾಮಾಜಿಕ ಮಾಧ್ಯಮ ಆಪ್ ಗಳು ಜನಪ್ರಿಯವಾಗಿರುವುದು – ಇವೆಲ್ಲಾ ಕಾರಣಗಳಿಂದ ವೆಬ್ ಸಂಪರ್ಕ ಹೊಂದಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಕರ್ನಾಟಕದಲ್ಲಿ ಜೂನ್ 2017 ಕೊನೆ ಹೊತ್ತಿಗೆ 2.80 ಕೋಟಿ ವೆಬ್ ಸಂಪರ್ಕ ಹೊಂದಿರುವವರು ಇದ್ದಾರೆ ಎಂದು ಟ್ರಾಯ್ (TRAI) ವರದಿ ಹೇಳುತ್ತದೆ. ರಾಜ್ಯದ ವಯಸ್ಕರಲ್ಲಿ ಸುಮಾರು


ಪುಟ 14 ಕ್ಕೆ

2017- ಎರಡು 'ಮಿಂಚಿನ' ಕ್ರಮಗಳು ತಂದ ಆರ್ಥಿಕ ಭಂಗದ ವರ್ಷ



ಭಾರತದ ಆರ್ಥಿಕ ಬೆಳವಣಿಗೆ ಮಂದಗೊಂಡಿದೆ ಎಂದು ಹಣಕಾಸು ಮಂತ್ರಿಗಳೂ ಈಗ ಒಪ್ಪಿಕೊಂಡಿದ್ದಾರೆ. ಡಿಸೆಂಬರ್ 29ರಂದು ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಇದನ್ನು ಹೇಳಿರುವುದಾಗಿ ವರದಿಯಾಗಿದೆ. ಕೈಗಾರಿಕೆ ಮತ್ತು ಸೇವಾ ಕ್ಷೇತ್ರ ಕಳಪೆ ಬೆಳವಣಿಗೆ ದಾಖಲಿಸಿದವು. ಅದಕ್ಕೆ ಕಾರಣಗಳು ಹಲವು ಎಂದ ಅವರು ಈ ಕಾರಣಗಳಲ್ಲಿ ನೋಟು ರದ್ಧತಿ ಮತ್ತು ಜಿಎಸ್‌ಟಿಯ ಪ್ರಸ್ತಾಪ ಮಾಡಲಿಲ್ಲವಂತೆ. ಆದರೂ 2016 ರಲ್ಲಿ ಭಾರತ ಪ್ರಮುಖ ದೇಶಗಳಲ್ಲಿ ಅತ್ಯಂತ ವೇಗದ ಬೆಳವಣಿಗೆ ದಾಖಲಿಸಿದ ದೇಶವಾದರೆ, 2017ರಲ್ಲಿ ಎರಡನೇ ಸ್ಥಾನ ಪಡೆಯಿತಷ್ಟೇ ಎಂದು ಅವರು ಹೇಳಿದ್ದಾರೆ.

ಆದರೆ **2017ರಲ್ಲಿ ಮುಕ್ಕಾಲು ಪಾಲು ದೇಶಗಳ ಜಿಡಿಪಿ ಬೆಳವಣಿಗೆ ದರ ಏರಿತು, ರಫ್ತು ಪ್ರಮಾಣ ಏರಿತು, ನಿರುದ್ಯೋಗ ಪ್ರಮಾಣ ಇಳಿಯಿತು, ಭಾರತ ಆ ಪಟ್ಟಿಯಲ್ಲಿ ಇಲ್ಲ, ಉಳಿದ 25% ದೇಶಗಳ ಪಟ್ಟಿಯಲ್ಲಿದೆ** ಎನ್ನಲಾಗಿದೆ(ದಿವೈರ್.ಕಾಂ, ಡಿಸೆಂಬರ್28). ಬ್ರಿಕ್ಸ್ ಕೂಟದಲ್ಲಿರುವ ಬ್ರೆಝಿಲ್, ಚೀನಾ, ರಷ್ಯಾ ಕೂಡ 75% ಪಟ್ಟಿಯಲ್ಲಿವೆ. 2014ರ ಅಂತ್ಯದಲ್ಲಿ 'ನೋಡಿ, ಈ ಕೂಟದಲ್ಲಿ ಭಾರತ ಮಾತ್ರ ಬೆಳವಣಿಗೆ ದಾಖಲಿಸುತ್ತಿದೆ'



ಎಂದಿದ್ದರು ಇದೇ ಹಣಕಾಸನು ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳು. ಆದರೆ ಈಗ ಪರಿಸ್ಥಿತಿ ತದ್ವಿರುದ್ಧವಾಗಿದೆ.

ಇದಕ್ಕೆ ಕಾರಣ 'ಅಚ್ಛೇ ದಿನ್'ಗಳ ಎರಡು 'ಆರ್ಥಿಕ ಮಿಂಚಿನ ಪ್ರಹಾರಗಳು'– ನೋಟುರದ್ಧತಿ ಮತ್ತು ಜಿಎಸ್‌ಟಿ – ಎಂಬುದರಲ್ಲಿ ಬಹಳಷ್ಟು ವಿಶ್ಲೇಷಕರಿಗೆ ಈಗ ಸಂದೇಹ ಉಳಿದಿಲ್ಲ.

ಇದನ್ನು ಇನ್ನಷ್ಟು ಪುಷ್ಟೀಕರಿಸುವ ಇನ್ನೆರಡು ಸುದ್ದಿಗಳು ಬಂದಿವೆ. **ಜಿಎಸ್‌ಟಿ ಸಂಗ್ರಹದ ಪ್ರಮಾಣ ನವಂಬರ್‌ನಲ್ಲಿ ಕಳೆದ 5ತಿಂಗಳಲ್ಲೇ ಅತೀ ಕೆಳ ಮಟ್ಟಕ್ಕೆ ಇಳಿದಿದೆ.** ಜುಲೈ 2017ರಲ್ಲಿ 92,283 ಕೋಟಿ ರೂ.ಗಳ ಸಂಗ್ರಹವಾಗಿದ್ದವು, ಆಗಸ್ಟ್‌ನಲ್ಲಿ ತುಸು ಇಳಿದು 90,669 ಕೋಟಿರೂ. ಅಯಿತು, ಸಪ್ಟಮಬರ್‌ನಲ್ಲಿ ತುಸು ಏರಿ 92,150 ಕೋಟಿ ರೂ.ಗೆ ಬಂತು, ನಂತರ ಅಕ್ಟೋಬರ್‌ನಲ್ಲಿ ತೀವ್ರವಾಗಿ 83,346 ಕೋಟಿ ರೂ.ಗಿಳಿಯಿತು, ನವಂಬರ್‌ನಲ್ಲಿ ಮತ್ತಷ್ಟು 80,808 ಕೋಟಿ ರೂ ಗೆ ಇಳಿದಿದೆ.

ಇನ್ನೊಂದು ಸುದ್ದಿಯೆಂದರೆ **ಸರಕಾರಕ್ಕೆ ನಿರೀಕ್ಷಿತ ಆದಾಯ ಬರುತ್ತಿಲ್ಲವಾದ್ದರಿಂದ 50,000 ಕೋಟಿ ರೂ. ಸಾಲ ತರುತ್ತಿದೆ** ಎಂಬುದು.

'ಅಚ್ಛೇದಿನ್' ಸರಕಾರದ ಎರಡು ಮಿಂಚಿನ ಕ್ರಮಗಳು ತೆರಿಗೆದಾರರ ಮೇಲೆ ಪ್ರಾಮಾಣಿಕತೆಯನ್ನು ಹೇರುತ್ತವೆ, ತೆರಿಗೆನೆಲೆಯನ್ನು ವಿಸ್ತರಿಸುತ್ತವೆ (ಅಂದರೆ ತೆರಿಗೆದಾರರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತದೆ) ಎಂದು ಸರಕಾರದ ಮುಖಂಡರು ಸಮರ್ಥಿಸಿಕೊಂಡರು. ಆದರೆ ಕಳೆದ ಆಗಸ್ಟ್‌ನಲ್ಲಿ, ರದ್ದಾದ ಎಲ್ಲ ನೋಟುಗಳೂ ತನ್ನಲ್ಲಿ ಮರಳಿ ಬಂದಿವೆ ಎಂದು ರಿಝರ್ವ್ ಬ್ಯಾಂಕ್ ಪ್ರಕಟಿಸಿದಾಗ ತುಸು ಪೆಚ್ಚಾದರೂ, ಸರಕಾರಕ್ಕೆ ರೆವಿನ್ಯೂ ಹರಿದು ಬರುವಾಗ ಇವೆರಡು ಎಷ್ಟು ಯಶಸ್ವಿ ಕ್ರಮಗಳು ಎಂದು ತಿಳಿಯುತ್ತದೆ ಎಂದರು. ಆದರೆ ಹೀಗೆ ತೆರಿಗೆ ನೆಲೆ ವಿಸ್ತಾರಗೊಳ್ಳಲು ಮತ್ತು ಹೆಚ್ಚಿನ ಆದಾಯ ಹರಿದು ಬರಲು ಭಾರತೀಯರು ಇನ್ನೂ ಬಹಳ ಕಾಲ ಕಾಯಬೇಕೇನೋ ಎನ್ನುತ್ತಾರೆ ಆರ್ಥಿಕ ವಿಶ್ಲೇಷಕರು(ರೋಹನ್ ವೆಂಕಟರಾಮಕೃಷ್ಣನ್, ಸ್ಕ್ರಾಲ್, ಡಿಸೆಂಬರ್28).

ಈ ನಡುವೆ ಸಣ್ಣ ಉಳಿತಾಯಗಳಿಗೆ ಬಡ್ಡಿದರಗಳನ್ನು ಇಳಿಸಲಾಗಿದೆ.

ಪಾಕಿಸ್ತಾನ ಗಡಿಯಲ್ಲಿನ 'ಮಿಂಚಿನ ಪ್ರಹಾರ'ವೂ ಭಾರತೀಯ ಸೈನಿಕರ ಸಾವಿನ ಪ್ರಮಾಣವನ್ನು ಇಳಿಸಿಲ್ಲ

ಹೀಗೆಂದು ಈ ವಾರ ಒಂದು ಸುದ್ದಿ ಪ್ರಕಟವಾಗಿದೆ. ಡಿಸೆಂಬರ್ 23 ರಂದು ಇನ್ನೂ ನಾಲ್ಕು ಸೈನಿಕರು ಕಾಶ್ಮೀರ ಗಡಿ ಪ್ರದೇಶದಲ್ಲಿ ಪಾಕಿಸ್ತಾನೀ ದಾಳಿಗೆ ಬಲಿಯಾದರು. ಸಪ್ಟಂಬರ್ 2016ರಲ್ಲಿ 'ನಿಯಂತ್ರಣ ರೇಖೆ'ಯ ಬಳಿ ನಡೆಸಿದ 'ಮಿಂಚಿನ ಪ್ರಹಾರ'ದಿಂದ ಪಾಕಿಸ್ತಾನಿಗಳು ತತ್ತರಿಸಿ ಹೋಗಿದ್ದಾರೆ, ಜತೆಗೆ ನೋಟುರದ್ಧತಿ ಅವರ ಹಣಕಾಸು ಮೂಲದ ಬೆನ್ನು ಮುರಿಯುತ್ತದೆ, ಭಯೋತ್ಪಾದನೆಯ ಹುಟ್ಟಡಗಿಸಿ ಬಿಡುತ್ತದೆ ಎಂದು ಸರಕಾರ ಮತ್ತು ಅದರ ವಿಧೇಯ 'ಭಕ್ತ' ಜನ ಭಾರೀ ಸದ್ದು ಮಾಡಿದರು. ಇದರಿಂದ ಕಾಶ್ಮೀರ ಗಡಿಯಲ್ಲಿ ಮತ್ತು ಜಮ್ಮು–ಕಾಶ್ಮೀರ ರಾಜ್ಯದಲ್ಲಿ ಗಡಿಯಲ್ಲಿ ಯುದ್ಧ ನಡೆಯದೇ ಪ್ರಾಣ ಕಳಕೊಳ್ಳುವ ಸೈನಿಕರ, ಪೋಲೀಸ್ ಮತ್ತಿತರ ಭದ್ರತಾ ಸಿಬ್ಬಂದಿಯ ಸಂಖ್ಯೆ ತೀವ್ರವಾಗಿ ಇಳಿಯಬೇಕಾಗಿತ್ತು. ಆದರೆ ಹಾಗಾಗಿಲ್ಲ. ಬದಲಿಗೆ 'ಮಿಂಚಿನ ಪ್ರಹಾರ'ದ ಹಿಂದಿನ 2015ಕ್ಕೆ ಹೋಲಿಸಿದರೆ ದ್ವಿಗುಣಗೊಂಡಿದೆ. ಕೆಳಗಿನ ಕೋಷ್ಟಕ ನೋಡಿ:

	2015	2016	2017
ಕದನವಿರಾಮ ಉಲ್ಲಂಘನೆ	152	228	820
ಒಳನುಸುಳುವ ಪ್ರಯತ್ನ	130	270	310
ಸಾಯಿಸಲ್ಪಟ್ಟ ನುಸುಳುವ ಉಗ್ರಗಾಮಿಗಳು	30	37	59
ವಿಫಲಗೊಳಿಸಿದ ನುಸುಳಿಕೆಗಳು	18	27	33
ಜ–ಕಾ.ದಲ್ಲಿ ಬಲಿಯಾದ ಸೈನಿಕರು	33	63	61

(ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್, ಡಿ.29–2017ರ ಸಂಖ್ಯೆ ಡಿ.26 ರ ವರೆಗಿನದ್ದು)

ಒಟ್ಟಾರೆಯಾಗಿ ಈ ಮೂರು ವರ್ಷಗಳಲ್ಲಿ ಕಾಶ್ಮೀರ ಗಡಿಯಲ್ಲಿ ನಮ್ಮ ಭದ್ರತಾ ಪಡೆಗಳಲ್ಲಿ ಸಾವಿನ ಪ್ರಮಾಣ ಯುಪಿಎ ಸರಕಾರದ ಕೊನೆಯ ಮೂರುವ ರ್ಷಗಳಿಗೆ ಹೋಲಿಸಿದರೆ 72% ಹೆಚ್ಚಳವಾಗಿದೆ ಎನ್ನಲಾಗಿದೆ. ಈ ವರ್ಷ 200 ಕಾಶ್ಮೀರಿ ಉಗ್ರಗಾಮಿಗಳನ್ನು ಸಾಯಿಸಲಾಗಿದೆ, ಇದು ಕಳೆದ ಏಳು ವರ್ಷಗಳಲ್ಲೇ ಅತಿ ಹೆಚ್ಚು ಎಂದು ಸರಕಾರ ಬೆನ್ನುತಟ್ಟಿಕೊಳ್ಳುತ್ತಿದೆ. ಆದರೆ ಇದಕ್ಕೆ ನಮ್ಮ ಎಷ್ಟು ಭದ್ರತಾ ಸಿಬ್ಬಂದಿ ಬಲಿಯಾಗಿದ್ದಾರೆ.

ಪ್ರಧಾನಿಗಳೂ,ಅವರ ಮಂತ್ರಿಗಳೂ–ಸಾಲುಗಳ ನಡುವೆಯಲ್ಲ, ಸುಳ್ಳುಗಳ ನಡುವೆ ಅರ್ಥ ಹುಡುಕಬೇಕು


ಗುಜರಾತ್ ಚುನಾವಣಾ ಪ್ರಚಾರದ ವೇಳೆಯಲ್ಲಿ ಹಾಲಿ ಪ್ರಧಾನಿಗಳು ತಮ್ಮ ಹಿಂದಿನ ಪ್ರಧಾನಿಗಳು, ಉಪರಾಷ್ಟ್ರಪತಿಗಳು ಮತ್ತು ಸೇನಾಧಿಪತಿಗಳು ಮಣಿಶಂಕರ್ ಅಯ್ಯರ್ ನಿವಾಸದಲ್ಲಿ ಪಾಕಿಸ್ತಾನದ ಹಾಲಿ ಮತ್ತು ಮಾಜೀ ಹೈಕಮಿಶನರುಗಳೊಂದಿಗೆ ಗುಜರಾತ್ ಚುನಾವಣೆಯನ್ನು ಚರ್ಚಿಸಿದರು ಎಂದು ಆಪಾದಿಸಿದ್ದು, ಅದೊಂದು ದೊಡ್ಡ ಸುಳ್ಳು ಎಂದು ಮಾಜಿ ಪ್ರಧಾನಿಗಳು ಬಲವಾಗಿ ಪ್ರತಿಕ್ರಿಯಿಸಿದ್ದು ತುಸು ಹಳೆಯದಾಗಿರುವ ಸುದ್ದಿ.

ಪ್ರಧಾನಿಗಳು ಈ ಸುಳ್ಳು ಆಪಾದನೆಯ ಬಗ್ಗೆ ಕ್ಷಮೆ ಕೋರಬೇಕು ಎಂಬ ಆಗ್ರಹದಿಂದಾಗಿ ಸಂಸತ್ತಿನ ಕಲಾಪಗಳಿಗೆ ಅಡ್ಡಿಯಾಗಿತ್ತು. ಸಂಸತ್ತಿಗೆ ಬಹಳ ಗೌರವ ಕೊಡುವ ಪ್ರಧಾನಿಗಳ ಎಂದಿನ ಮೌನವ್ರತದ ನಡುವೆ ಹಣಕಾಸು ಮಂತ್ರಿಗಳು ಅವರ ಪರವಾಗಿ ಪರಿಸ್ಥಿತಿಯನ್ನು ತಿಳಿಯಾಗಿಸಲು ರಾಜ್ಯಸಭೆಯಲ್ಲಿ ಪ್ರಧಾನ ಮಂತ್ರಿಗಳ ಮಾತಿನ (ಆಪಾದನೆಯ) ಅರ್ಥ ಅದಲ್ಲ, ಅವರು ದೇಶಕ್ಕೆ ಮಾಜಿ ಪ್ರಧಾನಿಗಳ ಅಥವ ಮಾಜಿ ಉಪರಾಷ್ಟ್ರಪತಿಗಳ ಬದ್ಧತೆಯನ್ನು ಪ್ರಶ್ನಿಸಿಲ್ಲ ಎಂದು ಸಮಜಾಯಿಷಿ ನೀಡಿದರು.

ಪ್ರಧಾನಿಗಳ ಆಪಾದನೆಯ ಬೆನ್ನಹಿಂದೆಯೇ ದೇಶದಲ್ಲೆಲಾ ಆಕ್ರೋಶ ಎಬ್ಬಿಸಿದ ಕೇಂದ್ರ ಕೌಶಲ್ಯಾಭಿವೃದ್ಧಿ ಮಂತ್ರಿಗಳ ಜಾತ್ಯತೀತರ ಕುರಿತಾದ ಕೀಳು ಮಾತುಗಳೂ ಸಂಸತ್ತಿನಲ್ಲಿ ಕೋಲಾಹಲ ಎಬ್ಬಿಸಿದವು. ಇದನ್ನು ಸಂಸತ್ತಿನ ಹೊರಗೆ ಅವರ ಬಾಸ್ ಆದ ಪ್ರಧಾನಿಗಳೂ ಸೇರಿದಂತೆ ಯಾವ ಹಿರಿಯ ಬಿಜೆಪಿ ಮುಖಂಡರೂ ಖಂಡಿಸಿರಲಿಲ್ಲ. ಆದರೆ ಲೋಕಸಭೆಯಲ್ಲಿ ಹಣಕಾಸು ಮಂತ್ರಿಗಳಂತೆ ಸಮಜಾಯಿಷಿ ಕೊಡಲೂ ಯಾರೂ ಮುಂದೆ ಬರಲಿಲ್ಲ. ಮಂತ್ರಿಗಳು ಈಗ ಸಾಮಾನ್ಯವಾಗಿ ಬಿಟ್ಟಿರುವ ತನ್ನ ಮಾತುಗಳನ್ನು ಅಪಾರ್ಥ ಬರುವಂತೆ ವರದಿ ಮಾಡಲಾಗಿದೆ ಎಂಬ ಸವಕಲು ಮಾತುಗಳನ್ನಾಡುತ್ತ, 'ಇದರಿಂದ ನೋವಾಗಿರುವವರ' ಕ್ಷಮೆ ಕೋರಿದರು.

TOI ವ್ಯಂಗ್ಯಚಿತ್ರ: ಸಂದೀಪ್‌ಅಧ್ವರ್ಯು, ಟೈಂಸ್ ಆಫ್ ಇಂಡಿಯ

ನಾವು ಇಲ್ಲಿರುವುದು ಸಂವಿಧಾನ ಬದಲಿಸಲಿಕ್ಕೇ, ಎನ್ನುತ್ತಾರೆ ಕೇಂದ್ರ ಮಂತ್ರಿಗಳು



ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಹೇಳಿರುವಂತೆ, ಪ್ರಧಾನಿಗಳ ಮಾತುಗಳಿಗೂ ಸತ್ಯಸಂಗತಿಗೂ ಏನೇನೂ ಸಂಬಂಧವಿರುವುದಿಲ್ಲ. ಪ್ರಧಾನಿಗಳು ಹೇಳುವುದೇ ಬೇರೆ, ಅದರ ಅರ್ಥವೇ ಬೇರೆ, ಅವರ ಈ ಮಂತ್ರಿ ಹೇಳಿದ್ದೇ ಬೇರೆ, ಅರ್ಥವೇ ಬೇರೆ. ಬಿಜೆಪಿ–ಆರೆಸ್ಸೆಸ್ ವಿಷಯಕ್ಕೆ ಬಂದಾಗ, ಸಾಲುಗಳ ನಡುವೆ ಅರ್ಥ ಹುಡುಕುವುದಲ್ಲ, ಸುಳ್ಳುಗಳ ನಡುವೆ ಅರ್ಥ ಹುಡುಕಬೇಕಾಗುತ್ತದೆ ಎಂದು ಯೆಚುರಿಯವರು ಗೇಲಿ ಮಾಡಿದ್ದಾರೆ.

ಮಹಿಳಾ ಮೀಸಲಾತಿಗೆ ದಿವ್ಯ ಮೌನ–ನಿಷೇಧಿತ ತ್ರಿವಳಿ ತಲಾಖಿನ ಅಪರಾಧೀಕರಣಕ್ಕೆ ತರಾತುರಿ

ಡಿಸೆಂಬರ್ 29ರಂದು ಮುಸ್ಲಿಂ ಮಹಿಳೆಯರಿಗೆ ಅಚ್ಛೇದಿನ್ ತರುವ ಹೆಸರಿನಲ್ಲಿ ಇತ್ತೀಚೆಗಷ್ಟೇ ಎಲ್ಲರ ಬೆಂಬಲದೊಂದಿಗೆ ನಿಷೇಧಿಸಿದ್ದ ತ್ರಿವಳಿ ತಲಾಖನ್ನು ಒಂದು ಕ್ರಿಮಿನಲ್ ಕೃತ್ಯವಾಗಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ ಪಾಸು ಮಾಡಿಸಿ ಕೊಳ್ಳಲಾಗಿದೆ. ಇದನ್ನು ಮಂಡಿಸುವಾಗ ಮುಸ್ಲಿಂ ಮಹಿಳೆಯರ ಬಗ್ಗೆ ಕಂಬನಿ ಸುರಿಸಿದ ಕಾನೂನು ಮಂತ್ರಿಗಳು ಈ ವಿಷಯದಲ್ಲಿ ಸಂಬಂಧಪಟ್ಟ ಯಾರೊಡನೆಯೂ, ಮಹಿಳಾ ಸಂಘಟನೆಗಳೊಂದಿಗಾಗಲೀ, ಮುಸ್ಲಿಂ ಮಹಿಳೆಯರ ನಡುವೆ ಕೆಲಸ ಮಾಡುವ ಸಂಘಟನೆಗಳೊಂದಿಗಾಗಲೀ ಸಮಾಲೋಚನೆ ನಡೆಸಿಲ್ಲ ಎಂದು ಒಪ್ಪಿಕೊಂಡರು. ಇದರಲ್ಲಿ ಹಲವು ಆಯಾಮಗಳಿವೆ, ಮೂರು ವರ್ಷಗಳ ಕಾಲ ಜಾಮೀನಿಲ್ಲದೆ ಜೈಲು ಸೇರಬೇಕಾದ ಮುಸ್ಲಿಮ್ ಗಂಡಸಿನ ಅತಂತ್ರರಾಗುವ ಹೆಂಡತಿ–ಮಕ್ಕಳಿಗೆ ಕಾನೂನುಮಂತ್ರಿಗಳ ಕಂಬನಿಯಷ್ಟೇ ಸಾಕೇ, ಜೀವನೋಪಾಯವೇನು ಎಂಬಿತ್ಯಾದಿ ಜೀವನ್ಮರಣ ಪ್ರಶ್ನೆಗಳಿವೆ, ಇವುಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಬೇಕಾಗಿದೆ, ಆದ್ದರಿಂದ ಇದನ್ನು ಸ್ಥಾಯೀ ಸಮಿತಿಗೆ ಒಪ್ಪಿಸಬೇಕು ಎಂಬ ಪ್ರತಿಪಕ್ಷಗಳ ಅಗ್ರಹಕ್ಕೆ ಕಿವಿಗೊಡದೆ ಸಂಖ್ಯಾಬಲವನ್ನು ಬಳಸಿ ಲೋಕಸಭೆಯಲ್ಲಿ ಪಾಸು ಮಾಡಿಕೊಳ್ಳಲಾಗಿದೆ.


ಈ ಮಸೂದೆಯೇ ಆಕ್ಷೇಪಾರ್ಹ, ಅದನ್ನು ಚರ್ಚೆ–ಸಮಾಲೋಚನೆಗಳಿಲ್ಲದೆ ಪಾಸು ಮಾಡಿಸಿಕೊಳ್ಳುವ ಬಿಜೆಪಿ ಪ್ರಯತ್ನಗಳು ಇನ್ನಷ್ಟು ಆಕ್ಷೇಪಾರ್ಹ ಎಂದು ಸಿಪಿಐ(ಎಂ) ಮತ್ತು ಮಹಿಳಾ ಆಂದೋಲನದ ಹಿರಿಯ ಮುಖಂಡರಾದ ಬೃಂದಾ ಕಾರಟ್ ಟೀಕಿಸಿದ್ದಾರೆ. ನಮ್ಮ ದೇಶದ ಕಾನೂನುಗಳಲ್ಲಿ ವಿವಾಹ ವಿಚ್ಛೇದನೆ ಒಂದು ಅಪರಾಧವಲ್ಲ, ಅದನ್ನೀಗ ಕ್ರಿಮಿನಲ್ ಕಾಯ್ದೆಗೆ ಒಳಪಡಿಸುವುದರಿಂದ ಬಹಳಷ್ಟು ಪರಿಣಾಮಗಳಾಗುತ್ತವೆ, ಆ ಬಗ್ಗೆ ಚರ್ಚೆ ಅಗತ್ಯವಾಗಿದೆ ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಈ ಪ್ರಶ್ನೆಗಳನ್ನು ಇನೂ ತೀಕ್ಷ್ಣವಾಗಿ ಎತ್ತಿದ ಅಸ್ಸಾಂನ ಸದಸ್ಯೆಯೊಬ್ಬರು ಆರು ಪ್ರಶ್ನೆಗಳನ್ನು ಕಾನೂನು ಮಂತ್ರಿಗಳ ಮಂದಿಟ್ಟರು. ಅದರಲ್ಲಿ ನೇರವಾಗಿ ತಲಾಖ್‌ಗೆ ಒಳಪಟ್ಟ ಮಹಿಳೆಯ ಪರಿಸ್ಥಿತಿ ಕುರಿತಂತೆ ಈ ಮಸೂದೆಯ ಮೌನದ ಬಗ್ಗೆ ಮಾತ್ರವಲ್ಲ, ವೈವಾಹಿಕ ಅತ್ಯಾಚಾರ ಮತ್ತು ಮಹಿಳಾ ಮಿಸಲಾತಿಯ ಪ್ರಶ್ನೆಗಳೂ ಇದ್ದವು. ವೈವಾಹಿಕ ಅತ್ಯಾಚಾರದ ವಿರುದ್ಧ ಕಾನೂನು ತಂದರೆ ಅದು ಹತ್ತಾರು ಸಾಮಾಜಿಕ ಸಮಸ್ಯೆಗಳನ್ನು ಉಂಟು ಮಾಡುತ್ತದೆ ಎಂದು ಅದನ್ನು ತಳ್ಳಿ ಹಾಕಿರುವ ಸರಕಾರ ಅಂತಹುದೇ ಹಲವಾರು ಸಮಸ್ಯೆಗಳನ್ನು ಉಂಟುಮಾಡುವ, ಅದರ ಬಗ್ಗೆ ಮೌನವಾಗಿರುವ ಈ ಮಸೂದೆಯನ್ನು ಪಾಸು ಮಾಡಿಕೊಳ್ಳಲು ತರಾತುರಿಯೇಕೆ ಎಂಬುದು ಒಂದು ಪ್ರಶ್ನೆಯಾದರೆ, ಸಾಮಾಜಿಕ ಸುಧಾರಣೆ ಮಹಿಳೆಯರ ಹಕ್ಕು, ಆದರೂ ಈ ಸರಕಾರ ಈ ಹಕ್ಕಿನ ರಕ್ಷಣೆಗೆ, ಮಹಿಳಾ ಸಬಲೀಕರಣಕ್ಕೆ ಸಂಸತ್ತಿನಲ್ಲಿ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ಮಸೂದೆಯನ್ನೇಕೆ ಪಾಸು ಮಾಡಿಸಿಕೊಳ್ಳುವುದಿಲ್ಲ?


ಮುಸ್ಲಿಂ ಮಹಿಳೆಯ ಪರಿಸ್ಥಿತಿಯ ಬಗ್ಗೆ ಕಂಬನಿ ಸುರಿಸಿದ ಕಾನೂನು ಮಂತ್ರಿಗಳು ಇವು ಯಾವುದಕ್ಕೂ ಉತ್ತರಿಸಲಿಲ್ಲ. ಅದು ಸಹಜವೇ, ಹುಸಿ ಕಂಬನಿಯ ಕೆಲಸ ಅಷ್ಟೇ, ಎಂಬುದು ಹಲವರ ವಿಶ್ಲೇಷಣೆ.

ಉತ್ತರಪ್ರದೇಶದ ಸರಕಾರ ರಾಜಕಾರಣಿಗಳ ಮೇಲಿನ ಸುಮಾರು ಇಪ್ಪತ್ತು ಸಾವಿರ ಕೇಸುಗಳನ್ನು ಹಿಂತೆಗೆದುಕೊಂಡಿದೆ. ಅದರಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿಗಳ ಮೇಲಿನ ಎಂಟು ಕೇಸುಗಳೂ ಸೇರಿವೆ.–ಸುದ್ಧಿ

ಮುಖ್ಯಮಂತ್ರಿ, ನ್ಯಾಯಾಧೀಶ, ಕೋರ್ಟ್ ಗುಮಾಸ್ತ, ಆಪಾದಿತ ಮತ್ತು ಪೋಲೀಸ್ – ಬಹುಪಾತ್ರಧಾರಿಯ ಕತೆಯ ಕೋರ್ಟ್ ಸೀನ್



ಸಾಮಾಜಿಕ ಸುರಕ್ಷತೆ – ಅರ್ಥಶಾಸ್ತ್ರಜ್ಞರ ಎರಡು ಪತ್ರಗಳು



ಒಂದು, ಸಾಮಾಜಿಕ ಸುರಕ್ಷೆಯ ವಿಷಯದಲ್ಲಿ ಪರಿಣತಿ ಇರದ ಐಎಂಎಫ್ ಅಧ್ಯಕ್ಷರಿಗೆ, ಇನ್ನೊಂದು ಅಂತಹವರ ಸಲಹೆ–ಸೂಚನೆಗಳನ್ನು ಶಿರಸಾವಹಿಸುವ ಭಾರತದ ಹಣಕಾಸು ಮಂತ್ರಿಗಳಿಗೆ. ಸಂಗ್ರಹಾನುವಾದ: ಟಿಎಸ್.ವೇಣುಗೋಪಾಲ್

ಸಾಮಾಜಿಕ ಸುರಕ್ಷತೆ ಅನ್ನುವುದು ಕೇವಲ ಹಣಕಾಸಿನ ವಿಷಯವಲ್ಲ

ಸಾಮಾಜಿಕ ಸುರಕ್ಷೆ ಹಾಗೂ ಕಾರ್ಮಿಕ ಸುಧಾರಣೆಯನ್ನು ಕುರಿತಂತೆ ಐಎಂಎಫ್ ತೆಗೆದುಕೊಳ್ಳುತ್ತಿರುವ ನಿಲುವಿನಿಂದ ಆತಂಕಗೊಂಡಿರುವ ಜಗತ್ತಿನ 50 ಪ್ರಖ್ಯಾತ ಅರ್ಥಶಾಸ್ತ್ರಜ್ಞರು ನವಂಬರ್ 20ರಂದು ಐಎಂಎಫ್ ಅಧ್ಯಕ್ಷರಿಗೆ ಬರೆದ ಪತ್ರದ ಕುರಿತು

ಅಂತರರಾಷ್ಟ್ರೀಯ ಹಣಕಾಸು ನಿಧಿಯನ್ನು(ಐಎಂಎಫ್) 1945ರಲ್ಲಿ ಸ್ಥಾಪಿಸಲಾಯಿತು. ಅದರ ಉದ್ದೇಶ ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಒಂದು ಸ್ಥಿರತೆಯನ್ನು ತರುವುದು. ಜಾಗತಿಕ ಸ್ಥಿರತೆಯ ಹೆಸರಿನಲ್ಲಿ ಒಂದೊಂದೇ ಕ್ಷೇತ್ರವನ್ನು ಸೇರಿಸಿಕೊಳ್ಳುತ್ತಾ ಐಎಂಎಫ್ ತನ್ನ ವ್ಯಾಪ್ತಿಯನ್ನು ಕ್ರಮೇಣ ಹಿಗ್ಗಿಸಿಕೊಳ್ಳುತ್ತಾ ಹೋಯಿತು. ಎಲ್ಲಾ ಬೃಹತ್ ಆರ್ಥಿಕ ಹಾಗೂ ಹಣಕಾಸು ಕ್ಷೇತ್ರಗಳನ್ನು ನಿರ್ದೇಶಿಸುವ ಅಧಿಕಾರವನ್ನು ಐಎಂಎಫ್‌ಗೆ 2012ರಲ್ಲಿ ನೀಡಲಾಯಿತು. ಅದು ಮುಂದುವರೆದು ಇತ್ತೀಚೆಗೆ 2017ರ ಪ್ರಸ್ತಾವನೆಯಲ್ಲಿ ಸಾಮಾಜಿಕ ಸುರಕ್ಷೆಯನ್ನು ಕುರಿತಂತೆಯೂ ಸಲಹೆಗಳನ್ನು ನೀಡಲು ಮುಂದಾಗಿದೆ. ಸಾಮಾಜಿಕ ಸುರಕ್ಷತೆ, ಜನತೆಯ ಕಲ್ಯಾಣ ಹಾಗೂ ಕಾರ್ಮಿಕ ವ್ಯವಸ್ಥೆಗಳಲ್ಲೂ ಐಎಂಎಫ್ ತನ್ನ ಸುಧಾರಣಾ ನೀತಿಯನ್ನು ವಿಸ್ತರಿಸುತ್ತಿದೆ. ಎಲ್ಲವನ್ನೂ ವಿತ್ತೀಯ ಶಿಸ್ತಿನ ಹಿನ್ನೆಲೆಯಲ್ಲಿ ನೋಡುವ ತನ್ನ ಪ್ರವೃತ್ತಿಯನ್ನು ಇಲ್ಲಿಗೂ ವಿಸ್ತರಿಸಿದೆ. ಕಠಿಣ ವಿತ್ತೀಯ ನಿಯಮಗಳು ಅಥವಾ ವಿತ್ತೀಯ ಕ್ರೋಢೀಕರಣದಂತಹ ಕಾರ್ಯಕ್ರಮಗಳಿಂದ ಜನರಿಗೆ ತೊಂದರೆಗಳಾಗುತ್ತವೆ. ಹಾಗಾಗಿಯೇ ಐಎಂಎಫ್ ಬೆಂಬಲಿಸುತ್ತಿರುವ ವಿತ್ತೀಯ ಕಡಿತವನ್ನು ಕಾನೂನು ವಿರೋಧಿ ಹಾಗೂ ಸಂವಿಧಾನವಿರೋಧಿ ಎಂದು ಹಲವು ಐರೋಪ್ಯ ದೇಶಗಳ ರಾಷ್ಟ್ರೀಯ ಸಂವಿಧಾನಾತ್ಮಕ ನ್ಯಾಯಾಲಯಗಳು ಬಣ್ಣಿಸಿವೆ (ಉದಾಹರಣೆಗೆ ರೊಮೇನಿಯ, ಪೋರ್ಚುಗಲ್ ಇತ್ಯಾದಿ ರಾಷ್ಟ್ರಗಳು).

ಸಾಮಾಜಿಕ ಕ್ಷೇತ್ರಗಳಲ್ಲಿ ಸಲಹೆ ನೀಡುವುದಕ್ಕೆ ಬೇಕಾದ ಪರಿಣತಿ ಐಎಂಎಫ್‌ಗೆ ಇಲ್ಲ. ಸಾಮಾಜಿಕ ಸುರಕ್ಷೆಗೆ ಸಂಬಂಧಿಸಿದ ಖರ್ಚನ್ನು ಅದು ಕೇವಲ ಹಣಕಾಸಿನ ದೃಷ್ಟಿಯಿಂದ ನೋಡುತ್ತಿದೆ. ವಿತ್ತೀಯ ಕೊರತೆಯನ್ನು ನಿಯಂತ್ರಿಸುವುದಕ್ಕೆ ಇದೊಂದು ಕಡಿತ ಮಾಡಬಹುದಾದ ಖರ್ಚು ಎಂದಷ್ಟೇ ಅವರಿಗೆ ಕಾಣುವುದು. ಆದರೆ ಹೀಗೆ ಸಾಮಾಜಿಕ ಸುರಕ್ಷೆಗೆ ಮೀಸಲಿರುವ ಹಣದಲ್ಲಿ ಕಡಿತಮಾಡುವುದರಿಂದ ಉಂಟಾಗಬಹುದಾದ ಸಾಮಾಜಿಕ ದುಷ್ಪರಿಣಾಮಗಳನ್ನು ಅವರು ಗಮನಿಸುವುದಿಲ್ಲ. ಅದು ಅವರಿಗೆ ಮುಖ್ಯವೂ ಆಗಿಲ್ಲ. ಐಎಂಎಫ್‌ನ ಇಂತಹ ನಿಲುವನ್ನು ಹಲವಾರು ಪ್ರಖ್ಯಾತ ಅರ್ಥಶಾಸ್ತ್ರಜ್ಞರು ವಿರೋಧಿಸುತ್ತಲೇ ಬಂದಿದ್ದಾರೆ. ಇಂತಹ ಬೆಳವಣಿಗೆಯಿಂದ ಸಹಜವಾಗಿಯೇ ಆತಂಕಗೊಂಡ ಜಗತ್ತಿನ 50 ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಇದನ್ನು ಖಂಡಿಸಿ, ಐಎಂಎಫ್‌ನ ಅಧ್ಯಕ್ಷರಿಗೆ ನವೆಂಬರ್ 20ರಂದು ಒಂದು ಪತ್ರ ಬರೆದಿದ್ದಾರೆ. ಅವರೆಲ್ಲಾ ಆರ್ಥಿಕ ಅಭಿವೃದ್ಧಿಯಲ್ಲಿ ಪರಿಣತಿಯಿರುವವರು. ಸಾಮಾಜಿಕ ಸುರಕ್ಷತೆಗೂ ಆರ್ಥಿಕ ಬೆಳವಣಿಗೆಗೂ ಇರುವ ಸಂಬಂಧವನ್ನು ಅರಿತವರು. ಹಾಗಾಗಿಯೇ ಸಾಮಾಜಿಕ ಸುರಕ್ಷೆ ಹಾಗೂ ಕಾರ್ಮಿಕ ಸುಧಾರಣೆಯನ್ನು ಕುರಿತಂತೆ ಐಎಂಎಫ್ ತೆಗೆದುಕೊಳ್ಳುತ್ತಿರುವ ನಿಲುವು ಅವರಲ್ಲಿ ಆತಂಕ ಮೂಡಿಸಿದೆ. ಆ ಆತಂಕವೇ ಈ ಪತ್ರಕ್ಕೆ ಕಾರಣ.

ಐಎಂಎಫ್ ಹಾಗೂ ಸಾಮಾಜಿಕ ಸುರಕ್ಷತೆಯನ್ನು ಕುರಿತಂತೆ ಐಎಂಎಫ್‌ನ 'ಸ್ವತಂತ್ರ' ಪರಿಶೀಲನ ಕಛೇರಿ, ಪರಿಶೀಲನೆ ನಡೆಸಿ ಒಂದು ವರದಿಯನ್ನು ಸಲ್ಲಿಸಿದೆ. ಅದನ್ನು ಐಎಂಎಫ್ ಸಮಿತಿ ಜುಲೈ 20177ರಂದು ಅಂಗೀಕರಿಸಿದೆ. ಅದನ್ನಾಧರಿಸಿ ಐಎಂಫ್ ಹಲವು ಪ್ರಸ್ತಾಪಗಳನ್ನು ಮುಂದಿಟ್ಟಿದೆ. ಆ ಪ್ರಸ್ತಾಪಗಳ ಹಿಂದೆ ವಿತ್ತೀಯ ಕೊರತೆಯನ್ನು ಸರಿತೂಗಿಸುವ ಉದ್ದೇಶ ಸ್ಪಷ್ಟವಾಗಿ ಕಾಣಿಸುತ್ತದೆ. ಇದನ್ನು ಕುರಿತ ಕಳವಳವನ್ನು ಅರ್ಥಶಾಸ್ತ್ರಜ್ಞರು ತಮ್ಮ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ.

"ವಿತ್ತೀಯ ಉದ್ದೇಶಗಳನ್ನೇ ಪ್ರಧಾನವಾಗಿಟ್ಟುಕೊಂಡು ಐಎಂಎಫ್ ಮುಂದಿಟ್ಟಿರುವ ಪ್ರಸ್ತಾಪಗಳಿಂದ ನಮಗೆ ಆತಂಕವಾಗಿದೆ. ತಮ್ಮ ಸುಧಾರಣಾ ಕಕ್ಷೆಗೆ ಕಾರ್ಮಿಕ ಸುಧಾರಣೆಯನ್ನು ಸೇರಿಸಿಕೊಂಡಿದೆ. ಅದು ಮುಂದಿಟ್ಟಿರುವ ಸಲಹೆಗಳಿಂದ ಕೂಲಿ ಕಡೆಮೆಯಾಗುತ್ತದೆ ಹಾಗೂ ಸಾಮುದಾಯಿಕ ಒಪ್ಪಂದದ ವ್ಯವಸ್ಥೆಯೇ ಬಲಹೀನವಾಗುತ್ತದೆ. ಜನ ತೀವ್ರ ಅನಾನುಕೂಲಕ್ಕೆ ಒಳಗಾಗುತ್ತಾರೆ. ಬಡತನ ಹಾಗೂ ಅಸಮಾನತೆ ತೀವ್ರವಾಗುತ್ತದೆ.

"ಈ ಸುಧಾರಣೆಗಳನ್ನು ಜಾರಿಗೊಳಿಸುವುದರಿಂದ ಹಾಗೂ ತೀರಾ ಕಠಿಣವಾದ ವಿತ್ತೀಯ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಕೌಟಂಬಿಕ ವರಮಾನ ಕಡಿಮೆಯಾಗುತ್ತದೆ. ಅದರಿಂದ ಸ್ಥಳೀಯ ಬೇಡಿಕೆಗೂ ಪೆಟ್ಟುಬೀಳುತ್ತದೆ. ಆರ್ಥಿಕ ಚೇತರಿಕೆಯ ವೇಗವೂ ನಿಧಾನವಾಗುತ್ತದೆ.

"ಹಲವಾರು ಸಾಮಾಜಿಕ ಸುರಕ್ಷಾ ಕಾರ್ಯಕ್ರಮಗಳಿಗೆ ಹಣಕಾಸು ಕಡಿತಗೊಳಿಸುವುದರಿಂದ ಸಾಮಾಜಿಕ ಸುರಕ್ಷೆಯ ವ್ಯಾಪ್ತಿ ಕುಗ್ಗುತ್ತದೆ. ಸೌಲಭ್ಯಗಳೂ ಕ್ಷೀಣಿಸುತ್ತಾ ಹೋಗುತ್ತವೆ. ಪಿಂಚಣಿಯಲ್ಲಿ ಯಾವ ಸುಧಾರಣೆಯೂ ಆಗುತ್ತಿಲ್ಲ. ಅದರಿಂದ ಹಲವಾರು ದೇಶಗಳಲ್ಲಿ ವಯಸ್ಸಾದವರಲ್ಲಿ ಬಡತನದ ಪ್ರಮಾಣ ಏರುತ್ತಿದೆ.

ಉದ್ಯೋಗಿಯ ಸಾಮಾಜಿಕ ಸುರಕ್ಷೆಗೆ ಸಂಬಂಧಿಸಿದಂತೆ ಕಂಪೆನಿಯ ಮಾಲಿಕರು ಕೊಡುತ್ತಿದ್ದ ದೇಣಿಗೆಯಲ್ಲಿ ಕಡಿತಕ್ಕೆ ಸಲಹೆ ಮಾಡಲಾಗಿದೆ. ಇದು ನಿಜಕ್ಕೂ ಆತಂಕಕಾರಿ. ಇದರಿಂದ ಒಂದು ಸಾರ್ವಜನಿಕ ಸಾಮಾಜಿಕ ಸುರಕ್ಷಾ ವ್ಯವಸ್ಥೆಯೇ ನಾಶವಾಗುತ್ತದೆ ಹಾಗೂ ಅಸಮಾನತೆ ಹೆಚ್ಚುತ್ತದೆ. ಇಂತಹ ಸುಧಾರಣೆಗಳಿಂದ ಪ್ರತಿಕೂಲವಾದ ಸಾಮಾಜಿಕ ಪರಿಣಾಮಗಳಾಗುತ್ತವೆ. ರಾಜಕೀಯವಾಗಿಯೂ ಸರ್ಕಾರಗಳಿಗೆ ತೊಂದರೆಯಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಸರ್ಕಾರಗಳು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDGs) ಒಪ್ಪಿಕೊಂಡಿವೆ. ಆ ಒಪ್ಪಂದದ ಪ್ರಕಾರ ಎಲ್ಲರಿಗೂ ಸಾಮಾಜಿಕ ಸುರಕ್ಷೆಯನ್ನು ಒದಗಿಸುವುದಕ್ಕೆ ಸರ್ಕಾರಗಳು ಬದ್ಧವಾಗಿವೆ. ಐಎಂಎಫ್ ಕೂಡ ಜಾಗತಿಕ ಒಪ್ಪಂದಗಳಿಗೆ ಬದ್ಧವಾಗಿರಬೇಕಾಗುತ್ತದೆ. ಖರ್ಚನ್ನು ಕಡಿತಗೊಳಿಸುವ ಸಂಕುಚಿತ ಉದ್ದೇಶಗಳಿಂದ ಅದು ಹೊರಬರಬೇಕಾಗಿದೆ.

ಸಾರ್ವತ್ರಿಕ ಸಾಮಾಜಿಕ ಸುರಕ್ಷೆ ಸಾಧ್ಯವಾಗಬೇಕಾದರೆ ಸರ್ಕಾರದ ಸಾಮಾಜಿಕ ವಿಮೆ ಹಾಗೂ ಸಾಮಾಜಿಕ ನೆರವು ಎರಡೂ ಬೇಕಾಗುತ್ತದೆ. ಇಂತಹ ಕ್ರಮಗಳಿಂದ ದೇಶದ ಬೆಳವಣಿಗೆಗೆ ಅನುಕೂಲವಾಗುತ್ತದೆ. ಆದುದರಿಂದ ಇವನ್ನು ಜಗತ್ತಿನ ಎಲ್ಲಾ ಪ್ರಮುಖ ಅಭಿವೃದ್ಧಿ ಸಂಘಟನೆಗಳೆಲ್ಲಾ ಬೆಂಬಲಿಸಿವೆ. ಮಕ್ಕಳಿಗೆ ನೀಡುವ ಸೌಲಭ್ಯ ಹಾಗೂ ಮಹಿಳೆಯರಿಗೆ ನೀಡುವ ಹೆರಿಗೆ ಸೌಲಭ್ಯಗಳಿಂದ ಒಟ್ಟಾರೆ ಉತ್ಪಾದನೆಯೂ ಹೆಚ್ಚಾಗುತ್ತದೆ. ಇದರಿಂದ ಮಹಿಳೆಯರು ದುಡಿಮೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ದುರ್ಬಲರಿಗೆ ಹಾಗೂ ವೃದ್ಧರಿಗೆ ಪಿಂಚಣಿ ಸೌಲಭ್ಯ ಕಲ್ಪಿಸುವುದರಿಂದ ಕುಟುಂಬದ ವರಮಾನ ಹೆಚ್ಚುತ್ತದೆ. ನಿರುದ್ಯೋಗ ಬೆಂಬಲದಿಂದ ನಿರುದ್ಯೋಗಿಗಳಿಗೆ ನೆರವಾಗುತ್ತದೆ. ಅಷ್ಟೇ ಅಲ್ಲ ಆರ್ಥಿಕ ಕುಸಿತವನ್ನು ತಡೆಯುವ ನಿಟ್ಟಿನಲ್ಲೂ ಇದರಿಂದ ಅನುಕೂಲವಾಗುತ್ತದೆ. ಅಗತ್ಯವಾದ ಸಾಮಾಜಿಕ ಸುರಕ್ಷೆಯನ್ನು ಒದಗಿಸುವುದರಿಂದ ಬಡತನ ಹಾಗೂ ಅಸಮಾನತೆಯ ಮಟ್ಟ ಕಡಿಮೆಯಾಗುತ್ತದೆ. ಮಾನವನ ಅಭಿವೃದ್ಧಿ, ಸಾಮಾಜಿಕ ಐಕ್ಯತೆ ಹಾಗೂ ರಾಜಕೀಯ ಸ್ಥಿರತೆ ಸಾಧ್ಯವಾಗುತ್ತದೆ.

ಸಾಮಾಜಿಕ ಸುರಕ್ಷೆಯನ್ನು ಕುರಿತಂತೆ ಸಲಹೆ ನೀಡುವುದಕ್ಕೆ ಬೇಕಾದ ಪರಿಣತಿ ಐಎಂಎಫ್‌ನಲ್ಲಿ ಇಲ್ಲ. ಅದು ಅವರ ಪರಿಣತಿಯ ಕ್ಷೇತ್ರವಲ್ಲ. ಸಾಮಾಜಿಕ ಸುರಕ್ಷೆಯಲ್ಲಿ ತರಬೇಕಾದ ಸುಧಾರಣೆಯನ್ನು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಗೆ ಬಿಡಬೇಕು. ಅದಕ್ಕೆ ಸಾಮಾಜಿಕ ರಕ್ಷಣೆ ಹಾಗೂ ಕಾರ್ಮಿಕರನ್ನು ಕುರಿತಂತೆ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರ ಇದೆ. ಅದೊಂದು ಸಂಯುಕ್ತ ರಾಷ್ಟ್ರಗಳ ಏಜೆನ್ಸಿ. ಸಂಯುಕ್ತ ರಾಷ್ಟ್ರಗಳ ಉಳಿದ ಸಂಘಟನೆಗಳು ಅದಕ್ಕೆ ನೆರವಾಗಬಹುದು. ಈ ವಿಷಯದಲ್ಲಿ ಕಾರ್ಮಿಕ ಸಂಘಟನೆಗಳೊಂದಿಗೆ ಸಮಾಲೋಚಿಸಬೇಕು. ಅಂತಹ ಸಂಘಟನೆಗಳನ್ನು ಬಲಪಡಿಸುವುದು ನಮ್ಮ ಉದ್ದೇಶವಾಗಬೇಕೇ ಹೊರತು ದುರ್ಬಲಗೊಳಿಸುವುದಲ್ಲ. ಯಾವಾಗಲೂ ಸಾಮುದಾಯಿಕವಾಗಿ ಒಪ್ಪಂದಕ್ಕೆ ಬರುವ ಪ್ರಕ್ರಿಯೆಯನ್ನು ಅನುಸರಿಸಬೇಕು. ಇದರಿಂದ ಅಂತಿಮವಾಗಿ ದೇಶಗಳ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಅಸಮಾನತೆ ಕಡಿಮೆಯಾಗುತ್ತದೆ.

ಸಾಮಾಜಿಕ ಸುರಕ್ಷತೆಯತ್ತ ಗಮನ ಹರಿಸಲಿ ಬಜೆಟ್

ಅಸಮಾನತೆ, ಹಸಿವು, ನಿರುದ್ಯೋಗ ಇವೆಲ್ಲಾ ದಿನದಿನಕ್ಕೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಭಾರತದ 60 ಪ್ರಮುಖ ಅಭಿವೃದ್ಧಿ ಅರ್ಥಶಾಸ್ತ್ರಜ್ಞರು ಡಿಸೆಂಬರ್ 20ರಂದು ವಿತ್ತಮಂತ್ರಿಗಳಿಗೆ ಬರೆದ ಪತ್ರದ ಕುರಿತು

ಇತ್ತೀಚಿನ ದಿನಗಳಲ್ಲಿ ವಿತ್ತೀಯ ಕೊರತೆ, ಜಿಡಿಪಿ ಮುಂತಾದವು ನಮ್ಮ ಚರ್ಚೆಗಳನ್ನೆಲ್ಲಾ ಆಕ್ರಮಿಸಿಕೊಂಡು, ಜನರ ಒಳಿತು, ಕ್ಷೇಮ, ಅಸಮಾನತೆ ಮುಂತಾದ ವಿಚಾರಗಳು ಹಿನ್ನೆಲೆಗೆ ಸರಿಯುತ್ತಿವೆ. ಸಬ್ಸಿಡಿಯನ್ನು ಮಹಾಪಾಪ ಅನ್ನುವಂತೆ ನೋಡಲಾಗುತ್ತಿದೆ. ಜನರ ಆರೋಗ್ಯ, ಶಿಕ್ಷಣ, ಉದ್ಯೋಗ ಇವೆಲ್ಲ ತಮ್ಮ ಕೆಲಸಗಳೇ ಅಲ್ಲ ಅಂತ ಸರ್ಕಾರಗಳು ಭಾವಿಸತೊಡಗಿವೆ. ಕ್ರಮೇಣ ಬಜೆಟ್ಟಿನಲ್ಲಿ ಅವುಗಳಿಗೆ ಪ್ರಾಮುಖ್ಯವೂ ಕಡಿಮೆಯಾಗುತ್ತಾ ಬರುತ್ತಿದೆ. ಆದರೆ ಅದೇ ಹೊತ್ತಿಗೆ ಕಾರ್ಪೋರೇಟ್ ಮಂದಿಗಳ ಹಿಂತಿರುಗಿಸದ ಸಾಲಗಳನ್ನು ವಜಾಮಾಡಲು ಸರ್ಕಾರಗಳು ನಿರ್ಲಜ್ಜೆಯಿಂದ ದಾರಿ ಹುಡುಕುತ್ತಿರುತ್ತೇವೆ. ಹಾಗಾಗಿಯೇ ಅಸಮಾನತೆ, ಹಸಿವು, ನಿರುದ್ಯೋಗ ಇವೆಲ್ಲಾ ದಿನದಿನಕ್ಕೆ ಹೆಚ್ಚುತ್ತಿವೆ. ಇಂತಹ ಸಂದರ್ಭದಲ್ಲಿ ಭಾರತದ 60 ಪ್ರಮುಖ ಅಭಿವೃದ್ಧಿ ಅರ್ಥಶಾಸ್ತ್ರಜ್ಞರು ಡಿಸೆಂಬರ್ 20ರಂದು ವಿತ್ತಮಂತ್ರಿಗಳಿಗೆ ಸಾಮಾಜಿಕ ಸುರಕ್ಷತೆ ಹಾಗೂ ಹೆರಿಗೆ ಸೌಲಭ್ಯಕ್ಕಾಗಿ ಬಜೆಟ್ಟಿನಲ್ಲಿ ಹೆಚ್ಚಿನ ಪಾಲನ್ನು ಮೀಸಲಿಡಬೇಕೆಂದು ಕೋರಿ ಪತ್ರ ಬರೆದಿದ್ದಾರೆ.

ಸಾಮಾಜಿಕ ಸುರಕ್ಷಾ ಪಿಂಚಣಿ:

2006ರಲ್ಲಿ ವೃದ್ಧರ ರಾಷ್ಟ್ರೀಯ ಪಿಂಚಣಿ ಯೋಜನೆ (NOAPS) ಪ್ರಾರಂಭವಾಯಿತು. ಇದೊಂದು ಒಳ್ಳೆಯ ಯೋಜನೆ. ಅದರಲ್ಲಿ ಸೋರಿಕೆ ಇಲ್ಲವೇ ಇಲ್ಲ ಅನ್ನುವಷ್ಟು ಕಡಿಮೆ. ಆಡಳಿತಾತ್ಮಕ ಖರ್ಚೂ ಕಡಿಮೆ. ಅಷ್ಟೇ ಅಲ್ಲ ಅದು ಭಾರತದ ಅತಿಬಡವರನ್ನು ತಲುಪುತ್ತಿದೆ. ಅದರಡಿಯಲ್ಲಿ ವೃದ್ಧರಿಗೆ ಕೊಡುತ್ತಿರುವ ಪಿಂಚಣಿ ತುಂಬಾ ಕಡಿಮೆ. ಅಂದಿನಿಂದ ಅದು ಕೇವಲ 200 ರೂಪಾಯಿಗಳಷ್ಟೇ ಇದೆ. ಕೇಂದ್ರ ಸರ್ಕಾರ ಅದನ್ನು ಕನಿಷ್ಠ 500 ರೂಪಾಯಿಗಳಿಗೆ ಏರಿಸಬೇಕು ಎಂದು ಈ ಅರ್ಥಶಾಸ್ತ್ರಜ್ಞರು ತಮ್ಮ ಪತ್ರದಲ್ಲಿ ಒತ್ತಾಯಿಸಿದ್ದಾರೆ. ಒಟ್ಟಾರೆ 2.4 ಕೋಟಿ ಪಿಂಚಣಿದಾರರಿದ್ದಾರೆ. ಇವರಿಗಾಗಿ ಸರ್ಕಾರಕ್ಕೆ 8,640 ಕೋಟಿ ಹೆಚ್ಚುವರಿ ಹಣಬೇಕಾಗುತ್ತದೆ. ಹಾಗೆಯೇ ವಿಧವೆಯರ ಪಿಂಚಣಿಯನ್ನು 300 ರೂಗಳಿಂದ 500 ರೂಗಳಿಗೆ ಏರಿಸಬೇಕು. ಅದರಿಂದ ಸರ್ಕಾರಕ್ಕೆ ಇನ್ನೂ 1680 ಕೋಟಿಯಷ್ಟು ಖರ್ಚಾಗುತ್ತದೆ.

ಹೆರಿಗೆ ಸೌಲಭ್ಯಗಳು:

2013ರ ರಾಷ್ಟ್ರೀಯ ಆಹಾರ ಸುರಕ್ಷಾ ಕಾಯ್ದೆಯಡಿ ಭಾರತದ ಪ್ರತಿಯೊಬ್ಬ ಮಹಿಳೆಯೂ ಪ್ರತಿ ಮಗುವಿಗೆ 6000 ರೂಪಾಯಿಗಳ ಸೌಲಭ್ಯಕ್ಕೆ ಅರ್ಹಳು (ಈ ಸೌಲಭ್ಯಗಳನ್ನು ಬೇರೆ ಮೂಲಗಳಿಂದ ಪಡೆದುಕೊಳ್ಳುತ್ತಿರುವ ಮಹಿಳೆಯರಿಗೆ ಇದು ಅನ್ವಯವಾಗುವುದಿಲ್ಲ). ಆದರೆ ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಮಹಿಳೆಯರಿಗೆ ಹೆರಿಗೆ ಸೌಲಭ್ಯವನ್ನು ಶೀಘ್ರದಲ್ಲೇ ಒದಗಿಸುತ್ತದೆ ಎಂದು ಡಿಸೆಂಬರ್ 31, 2016ರಂದು ಪ್ರಧಾನ ಮಂತ್ರಿಯವರು ಭರವಸೆ ನೀಡಿದರು. ಒಂದು ವರ್ಷದ ನಂತರ ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ ರೂಪುಗೊಂಡಿತು. ಅದಿನ್ನೂ ಆಚರಣೆಗೇ ಬಂದಿಲ್ಲ. 2017–18ರ ಬಜೆಟ್ಟಿನಲ್ಲಿ ಅದಕ್ಕಾಗಿ 2,700 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಅದು ಒಟ್ಟಾರೆ ಅವಶ್ಯಕತೆಯ ಮೂರನೇ ಒಂದರಷ್ಟಕ್ಕೂ ಸಾಲುವುದಿಲ್ಲ. ಜೊತೆಗೆ ಅದು ಕಾಯ್ದೆಯನ್ನು ಉಲ್ಲಂಘಿಸಿ ಕೇವಲ ಪ್ರತಿ ಮಹಿಳೆಗೆ ಒಂದು ಮಗುವಿಗೆ 5000 ರೂಪಾಯಿಗಳನ್ನು ಕೊಡುವುದಕ್ಕೆ ಸೀಮಿತಗೊಳಿಸಿಕೊಂಡಿದೆ.

2018–19ರ ಕೇಂದ್ರ ಬಜೆಟ್ಟಿನಲ್ಲಿ ಹೆರಿಗೆ ಸೌಲಭ್ಯವನ್ನು ಪೂರ್ಣಪ್ರಮಾಣದಲ್ಲಿ ಒದಗಿಸುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳಬೇಕು. ಹಾಗೂ ರಾಷ್ಟ್ರೀಯ ಆಹಾರ ಸುರಕ್ಷಾ ಕಾಯ್ದೆಯನ್ವಯ ಅದನ್ನು ಜಾರಿಗೆ ತರಬೇಕು ಎಂದು ಈ ಅರ್ಥಶಾಸ್ತ್ರಜ್ಞರು ಒತ್ತಾಯಿಸಿದ್ದಾರೆ. ಇದಕ್ಕಾಗಿ ಕನಿಷ್ಟ 8000 ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಅದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 60:40 ಪ್ರಮಾಣದಲ್ಲಿ ಭರಿಸಬೇಕು. ಸಂಬಂಧಪಟ್ಟವರಿಗೆ ಅನುಕೂಲಗಳು ಸಕಾಲದಲ್ಲಿ, ವ್ಯವಸ್ಥಿತವಾಗಿ ಸಂದಾಯವಾಗುವ ನಿಟ್ಟಿನಲ್ಲಿ ಸರ್ಕಾರ ಕಾರ್ಯತತ್ಪರವಾಗಬೇಕು.

ದೇಶದ ಆರ್ಥಿಕ ಬೆಳವಣಿಗೆ ಎಂದರೆ ಅದರ ಲಾಭ ಎಲ್ಲರಿಗೂ ತಲುಪಿ, ಸಮಾಜದ ಕೆಳಸ್ತರದಲ್ಲಿರುವವರ ಏಳ್ಗೆ ಸಾಧ್ಯವಾಗಬೇಕು. ಆ ಮೂಲಕ ಅಸಮಾನತೆ ಕಡಿಮೆಯಾಗುತ್ತಾ ಹೋಗಬೇಕು. ಈಗ ಗುಣಮಟ್ಟದ ಆರೋಗ್ಯ, ಶಿಕ್ಷಣ ಎಲ್ಲವೂ ಕ್ರಮೇಣ ದುಬಾರಿಯಾಗುತ್ತಾ ಅವಕಾಶವಂಚಿತರಿಗೆ ಮರೀಚಿಕೆಯಾಗುತ್ತಾ ಬರುತ್ತಿರುವ ಸಂದರ್ಭದಲ್ಲಿ ಈ ದಿಕ್ಕಿನಲ್ಲಿ ಚಿಂತನೆಗಳು, ಚರ್ಚೆಗಳು, ಒತ್ತಾಯಗಳು, ಅರಿವು ಹೆಚ್ಚುತ್ತಾ ಹೋಗಬೇಕು.

ಇಂದಿನ ಮಾಧ್ಯಮದ ಪರಿಸ್ಥಿತಿ...... ಪುಟ 11 ರಿಂದ

ಶೇ. 52 ರಷ್ಟು ವೆಬ್ ಸಂಪರ್ಕ ಹೊಂದಿದ್ದಾರೆ ಎನ್ನಬಹುದು. ಇವರಲ್ಲಿ ಶೇ. 76.5 ನಗರವಾಸಿಗಳು. 2.15 ಕೋಟಿ ಅಂದರೆ ಸುಮಾರು ಶೇ. 77 ಜನ ಬ್ರಾಡ್ ಬ್ಯಾಂಡ್ (ಅಂದರೆ 512 kbps ಗಿಂತ ಹೆಚ್ಚಿನ) ವೇಗದ ಸಂಪರ್ಕ ಹೊಂದಿದ್ದಾರೆ. ಶೇ. 95ರಷ್ಟು ಜನ ವೆಬ್ ಸಂಪರ್ಕವನ್ನು ಮೊಬೈಲ್ ಮೂಲಕವೇ ಹೊಂದಿದ್ದಾರೆ. ಇದೊಂದು ಈ ಅವಧಿಯ ಗಮನಾರ್ಹ ಬೆಳವಣಿಗೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಬಳಸಬಹುದಾದ, ಬಹು ಮಾಧ್ಯಮಗಳನ್ನು (ಪಠ್ಯ, ಚಿತ್ರ, ಆಡಿಯೊ, ವಿಡಿಯೊ) ತಲುಪಿಸಬಲ್ಲ, ಪರಸ್ಪರ ಸ್ಪಂದನೆ ಇರುವ, ವೇಗದ, ವೈಯಕ್ತಿಕ ಮಾಧ್ಯಮವಾಗಿ ವೆಬ್ (ಅಥವಾ ಡಿಜಿಟಲ್) ಬೆಳೆದಿದೆ. ವೆಬ್ – ಪತ್ರಿಕೆ ಟಿವಿ ಮತ್ತು ರೇಡಿಯೋ ಮೂರರ ಸ್ಥಾನ ಆಕ್ರಮಿಸಬಲ್ಲ, ಅವುಗಳ ಪಾತ್ರಕ್ಕೆ ಸವಾಲು ಹಾಕಬಲ್ಲ, ಅವುಗಳಿಗೆ ಇನ್ನೂ ಉತ್ತಮವಾದ ಬದಲಿಯಾಗಬಲ್ಲ – ಮಾಧ್ಯಮವಾಗಿ ಬೆಳೆದಿದೆ. ಇದು ಬಹಳ ಮಟ್ಟಿಗೆ ಈಗಾಗಲೇ ಇಂಗ್ಲಿಷ್ ಮಾಧ್ಯಮದಲ್ಲಿ ಪರಿಣಾಮ ಬೀರಲು ಆರಂಭಿಸಿದೆ. 2016ರಲ್ಲಿ ಮೊದಲ ಬಾರಿಗೆ ಇಂಗ್ಲಿಷ್ ದೈನಿಕಗಳ ಪ್ರಸಾರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಇಳಿದಿದೆ. ಇಂಗ್ಲಿಷ್‌ನಲ್ಲಿ ಸುದ್ದಿಗೆ ಹಲವು ವೆಬ್ ಮೂಲಗಳು ಇರುವುದು ಕಾರಣ ಎಂದು ಇದಕ್ಕೆ ಒಂದು ಕಾರಣ ಎಂದು ಹೇಳಲಾಗಿದೆ. ಪ್ರಮುಖ ಪತ್ರಿಕೆಗಳ ವೆಬ್ ಆವೃತ್ತಿಗಳು, ವಿವಿಧ ಮೂಲಗಳಿಂದ ಸುದ್ದಿಯನ್ನು ಸಂಗ್ರಹಿಸಿ ಪ್ರಕಟಿಸುವ ವೆಬ್ ತಾಣಗಳು (Inshorts, Firstpost, sify/samachar, Yahoo, Google ಇತ್ಯಾದಿ) ಮತ್ತು ಹೊಸ ವೆಬ್ ನಲ್ಲಿ ಮಾತ್ರ ಇರುವ ಸುದ್ದಿತಾಣಗಳು (Scroll, Wire, Quint, Citizen, Newsclick ಇತ್ಯಾದಿ)

ಈ ವೆಬ್ ಪತ್ರಿಕೆಗಳ ಪ್ರಸಾರ ಸಣ್ಣದಿದ್ದರೂ ಅವುಗಳ ಪ್ರಭಾವ ಮುಖ್ಯವಾಹಿನಿ ಮಾಧ್ಯಮಗಳ ಮೇಲೂ ಜನತೆಯ ಮೇಲೂ ದೊಡ್ಡ ಪ್ರಮಾಣದಲ್ಲಿದೆ ಎಂದು ಅಮೆರಿಕದ ವಿ.ವಿ. ಒಂದು ನಡೆಸಿದ ಅಧ್ಯಯನ ಹೊರಗೆಡಹಿದೆ. ಅವು ರಾಷ್ಟ್ರೀಯ ಸಂವಾದ, ಸಂಕಥನಗಳ ಮೇಲೆ ದೊಡ್ಡ ಪರಿಣಾಮ ಬೀರಬಲ್ಲವು ಎಂದೂ ಆ ಅಧ್ಯಯನ ತಿಳಿಸಿದೆ.

ಜಾಹೀರಾತುಗಳೂ ಡಿಜಿಟಲ್ ನತ್ತ ಹೊರಳುತ್ತಿವೆ

ಪತ್ರಿಕೆ, ಟಿವಿ, ರೇಡಿಯೋ ಮಾಧ್ಯಮಗಳು ಅದರ ಬಳಕೆದಾರ ಕೊಡುವ ಹಣಕ್ಕಿಂತ ಹೆಚ್ಚಾಗಿ ಜಾಹೀರಾತುಗಳ ಮೇಲೆ ಅವಲಂಬಿಸಿರುತ್ತವೆ. ಉದಾಹರಣೆಗೆ ದೈನಿಕ ಪತ್ರಿಕೆಗಳ ಉತ್ಪಾದನೆ ವೆಚ್ಚವೇ ಬಳಕೆದಾರ ಕೊಡುವ ಹಣಕ್ಕಿಂತ ಹೆಚ್ಚಾಗಿರುತ್ತದೆ. ದೈನಿಕ ಒಟ್ಟು ವಹಿವಾಟಿನ ಶೇ. 80 ಜಾಹೀರಾತಿನಿಂದ ಬಂದರೆ, ಶೇ. 20 ಮಾತ್ರ ಬಳಕೆದಾರರಿಂದ ಬರುತ್ತದೆ. ಆದ್ದರಿಂದ ನಿರ್ದಿಷ್ಟ ಪತ್ರಿಕೆಗಳ ಮತ್ತು ಇಡೀ ಮಾಧ್ಯಮದ (ಉದಾ: ಎಲ್ಲಾ ಪತ್ರಿಕೆಗಳ) ಭವಿಷ್ಯ ಜಾಹೀರಾತುದಾರರ ಮರ್ಜಿ ಮೇಲೆ ಅವಲಂಬಿಸಿರುತ್ತದೆ. ಜಾಹೀರಾತುದಾರರು ಅವರು ಮಾರಾಟ ಮಾಡಬೇಕಾದ ಸರಕು–ಸೇವೆಗಳ ಗ್ರಾಹಕರು ಎಲ್ಲಿದ್ದಾರೆ, ಅವರನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಖಾತರಿಯಾಗಿ ತಲುಪುವುದು ಹೇಗೆ ಎಂಬುದರ ಮೇಲೆ ಎಲ್ಲಿ ಜಾಹೀರಾತು ಕೊಡಬೇಕು ಎಂದು ನಿರ್ಧರಿಸುತ್ತಾರೆ. ಡಿಜಿಟಲ್ ಅಥವಾ ವೆಬ್ ಮಾಧ್ಯಮ ಜಾಹೀರಾತುದಾರರಿಗೆ (ಪತ್ರಿಕೆ, ಟಿವಿ, ರೇಡಿಯೋಗಳಿಗೆ ಹೋಲಿಸಿದರೆ) ಒಂದೇ ಕಡೆ ಬಹು–ಮಾಧ್ಯಮಗಳ ಜತೆಗೆ ಕೆಲವು ಅನುಕೂಲಗಳನ್ನು (ನಿರ್ದಿಷ್ಟ ಜನವಿಭಾಗಕ್ಕೆ ಟಾರ್ಗೆಟ್ ಮಾಡುವ, ತಕ್ಷಣದ ಸ್ಪಂದನೆ ಮಾಡುವ, ಜನರ ಪತ್ರಿಕ್ರಿಯೆ ಅಳೆಯುವ ಇತ್ಯಾದಿ) ಕೊಡುತ್ತದೆ. ಆದ್ದರಿಂದ ಅವರು ವೆಬ್ ಮಾಧ್ಯಮದತ್ತ ಹೊರಳುತ್ತಿದ್ದಾರೆ.

ಫಿಕಿ–ಕೆ.ಪಿ.ಎಂ.ಜಿ (FICCI-KPMG) 2017 ರ ಮಾಧ್ಯಮ–ಮನೋರಂಜನಾ ಉದ್ಯಮ ವರದಿಯ ಅಂಕಿಅಂಶಗಳ ಪ್ರಕಾರ ಟಿವಿ, ಪತ್ರಿಕೆಗಳು ಮತ್ತು ರೇಡಿಯೋ ಮಾಧ್ಯಮ ಉದ್ಯಮಗಳ ಒಟ್ಟು ವಹಿವಾಟು 2016ರಲ್ಲಿ 91,430 ಕೋಟಿ ರೂ. ಆಗಿತ್ತು. ಇದರಲ್ಲಿ ಜಾಹೀರಾತಿನಿಂದ ಬಂದ ಆದಾಯ 42,520 ಕೋಟಿ ರೂ.ಗಳಾಗಿತ್ತು. ರಾಜ್ಯವಾರು ಭಾಷಾವಾರು ಮಾಧ್ಯಮ ಉದ್ಯಮಗಳ ವಹಿವಾಟು, ಜಾಹೀರಾತಿನ ಅಂಕಿ ಅಂಶಗಳು ಲಭ್ಯವಿಲ್ಲ.

ಫಿಕಿ–ಕೆ.ಪಿ.ಎಂ.ಜಿ (FICCI-KPMG) 2017 ರ ವರದಿ ಪ್ರಕಾರವೇ ಕಳೆದ 5 ವರ್ಷಗಳಲ್ಲಿ ಜಾಹೀರಾತುದಾರರು ವಿವಿಧ ಮಾಧ್ಯಮಗಳಲ್ಲಿ ಯಾವುದನ್ನು ಎಷ್ಟರ ಮಟ್ಟಿಗೆ ಆರಿಸಿಕೊಂಡರು ಎಂಬುದನ್ನು ನೋಡಿದರೆ ತಿಳಿಯುತ್ತದೆ. ಕೆಳಗಿನ ಕೋಷ್ಟಕದಲ್ಲಿ ಜಾಹೀರಾತುಗಳಲ್ಲಿ ಪಾಲು ಹಾಗೂ ಹೆಚ್ಚಳದ ದರ ಎರಡೂ ಗಮನಿಸಿದರೆ ಡಿಜಿಟಲ್ ನತ್ತ ದೊಡ್ಡ ರೀತಿಯಲ್ಲಿ ಜಾಹೀರಾತುದಾರರು ಹೊರಳುತ್ತಿದ್ದಾರೆ ಎಂಬುದು ಸ್ಪಷ್ಟ. ಟಿವಿ ಜಾಹೀರಾತು ಸ್ಥಗಿತಗೊಂಡಿದ್ದರೆ, ಪತ್ರಿಕೆಗಳು ದೊಡ್ಡ ಪ್ರಮಾಣದಲ್ಲಿ ಕಳೆದುಕೊಳ್ಳುತ್ತಿವೆ.

ಕನ್ನಡದಲ್ಲೂ ವೆಬ್ ಸಾಮಾಜಿಕ ಮಾಧ್ಯಮದ ಬೆಳವಣಿಗೆ

ಭಾರತೀಯ ಭಾಷಾ (ಕನ್ನಡ ಸೇರಿ) ಮಾಧ್ಯಮಗಳಲ್ಲಿ ವೆಬ್ ಮಾಧ್ಯಮದತ್ತ ಬಳಕೆದಾರರೂ ಜಾಹೀರಾತುದಾರರೂ (ಅದರಲ್ಲೂ 15ರಿಂದ 40 ವರ್ಷದ ಯುವಜನರು) ಹೊರಳುವುದು ಇಂಗ್ಲೀಷಿನಲ್ಲಿ ಆದಷ್ಟು ಪ್ರಮಾಣದಲ್ಲಿ ವೇಗದಲ್ಲಿ ಆಗದಿದ್ದರೂ ಅದೇ ಟ್ರೆಂಡ್ ಕಂಡು ಬಂದಿದೆ. ಎಲ್ಲಾ ಪ್ರಮುಖ ದೈನಿಕಗಳು ಇ–ಪೇಪರ್ ಮತ್ತು ವೆಬ್ ಆವೃತ್ತಿಯನ್ನು ಆರಂಭಿಸಿವೆ. ವಿವಿಧ ಮೂಲಗಳಿಂದ ಸುದ್ದಿಯನ್ನು ಸಂಗ್ರಹಿಸಿ ಪ್ರಕಟಿಸುವ ವೆಬ್ ತಾಣಗಳು (sify/samachar, sumanasa, newskannada.in, oneindia ಇತ್ಯಾದಿ) ಮತ್ತು ಹೊಸ ವೆಬ್ ನಲ್ಲಿ ಮಾತ್ರ ಇರುವ ಸುದ್ದಿತಾಣಗಳು (ಸ್ಟೇಟ್.ನ್ಯೂಸ್, ಕರಾವಳಿ ಕರ್ನಾಟಕ ಇತ್ಯಾದಿ). ಹಲವು ವೆಬ್ ನಲ್ಲಿ ಮಾತ್ರ ಇರುವ ಪತ್ರಿಕೆಗಳು (ವರ್ತಮಾನ, ಅನಿಕೇತನ, ಮಾಧ್ಯಮ.ನೆಟ್ ಇತ್ಯಾದಿ) ಆರಂಭವಾಗಿವೆ.

ಇದಕ್ಕೆ ಸಂಬಂಧಿಸಿದ ಮಾಧ್ಯಮ ಕ್ಷೇತ್ರದಲ್ಲಿ ಆದ ಇನ್ನೊಂದು ದೊಡ್ಡ ಬೆಳವಣಿಗೆ ಎಂದರೆ ಸಾಮಾಜಿಕ ಮಾಧ್ಯಮಗಳ ಬಳಕೆಯಲ್ಲಿ ಆದ ಕ್ಷಿಪ್ರಕ್ರಾಂತಿ. 2014 ಲೋಕಸಭಾ ಚುನಾವಣೆಗಳಲ್ಲಿ ಸಾಮಾಜಿಕ ಮಾಧ್ಯಮ ನಿರ್ಣಾಯಕ ಪ್ರಭಾವ ಬೀರಿತು ಎಂದು ಹೇಳಲಾಗುತ್ತದೆ. ಜುಲೈ 2017ರ ಹೊತ್ತಿಗೆ ಭಾರತದ ಫೇಸ್ ಬುಕ್ ಬಳಕೆದಾರರ ಸಂಖ್ಯೆ 24 ಕೋಟಿ ಮುಟ್ಟಿದ್ದು, ಈಗ ಅಮೆರಿಕಕ್ಕಿಂತ ಹೆಚ್ಚಾಗಿದೆ. ಅದರಲ್ಲೂ ಕನ್ನಡ ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಈ ಅವಧಿಯಲ್ಲಿ ಸಾಮಾಜಿಕ ಮಾಧ್ಯಮಗಳ ಬಳಕೆ ಗಮನಾರ್ಹವಾಗಿದೆ. ಅದೇ ರೀತಿಯಲ್ಲಿ ಬಹು ಮಾಧ್ಯಮ ಸಂದೇಶ ರವಾನೆಗೆ ವಾಟ್ಸಪ್ (ಫೆಬ್ರುವರಿ 2017ರ ಹೊತ್ತಿಗೆ 20 ಕೋಟಿ) ಸಹ ಬೇಗನೇ ಜನಪ್ರಿಯವಾಯಿತು. ಯೂ ಟ್ಯೂಬ್ (20 ಕೋಟಿ, ಸಿನಿಮಾ ಟ್ರೇಲರ್ ಗಳೂ ಈಗ ಇದರಲ್ಲೇ ಬಿಡುಗಡೆಯಾಗುತ್ತವೆ) ಸಹ ಜನಪ್ರಿಯವಾಗಿದೆ. ರಾಜ್ಯವಾರು ಸಂಖ್ಯೆಗಳು ಲಭ್ಯವಿಲ್ಲದಿದ್ದರೂ ರಾಷ್ಟ್ರೀಯ ಪ್ರಮಾಣದಲ್ಲಿ ರಾಜ್ಯದಲ್ಲೂ ಬಳಕೆದಾರರು ಇದ್ದಾರೆ ಎಂದು ಇಟ್ಟು ಕೊಂಡರೆ, ಕರ್ನಾಟಕದಲ್ಲಿ ಕನಿಷ್ಟ 1.34 ಕೋಟಿ ಫೇಸ್ ಬುಕ್, 1 ಕೋಟಿ ವಾಟ್ಸಪ್ ಮತ್ತು ಯೂಟ್ಯೂಬ್ ಬಳಕೆದಾರರು ಇದ್ದಾರೆ. ಫೇಸ್ ಬುಕ್ ವೆಬ್ ಪತ್ರಿಕೆಗಳು ಸೇರಿದಂತೆ ಎಲ್ಲಾ ವೆಬ್ ತಾಣಗಳಿಗೆ ಪ್ರಸಾರ/ಪ್ರಚಾರ ಮಾಧ್ಯಮವಾಗಿ ಹೊಮ್ಮಿದೆ. ●

ಗಜೇಂದ್ರಗಡದಲ್ಲಿ ಸಿಪಿಐ(ಎಂ) ಅಖಂಡ ಧಾರವಾಡ ಜಿಲ್ಲಾ 11ನೇ ಸಮ್ಮೇಳನ...... ಪುಟ 9 ರಿಂದ

ಮಹೇಶ ಹಿರೇಮಠ, ಬಾಲು ರಾಠೋಡ, ಫಯಾಜ್ ಅಹ್ಮದ ತೋಟದ (ಒಂದು ಮಹಿಳೆ ಖಾಲಿ ಬಿಡಲಾಗಿದೆ) (ಗದಗ ಜಿಲ್ಲೆ) ಬಸವರಾಜ ಪೂಜಾರ, ವಿನಾಯಕ ಕುರಬರ, ಸುಭಾಸ ಮಾದರ (ಕಾಯಂ ಆಹ್ವಾನಿತ) (ಹಾವೇರಿ ಜಿಲ್ಲೆ) ಆಯ್ಕೆಯಾದರು.

ಸಮಾರೋಪ:

ಸಮಾರೋಪ ಭಾಷಣ ಮಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಪಕ್ಷ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗದಿರಬಹುದು ಆದರೇ ಜನತೆಯ ಪ್ರಶ್ನೆ ಬಂದಾಗ ಅವರ ಪರವಾಗಿ ಹೋರಾಟವನ್ನು ಮಾಡುವ ತನ್ನ ರಾಜಕೀಯ ಕರ್ತವ್ಯ ಎಂದಿಗೂ ಮರೆತಿಲ್ಲ. ಈ ಕಾರಣಕ್ಕಾಗಿಯೇ ಕೋಮುವಾದಿ, ಬಂಡವಾಳಶಾಹಿ ಪಕ್ಷಗಳು ನಮ್ಮ ಮೇಲೆ ನಿರಂತರ ಅಪಪ್ರಚಾರ ನಡೆಸಿವೆ. ಹಲವು ದಶಕಗಳ ಕಾಲ ನಮ್ಮ ಪಕ್ಷ ಅಧಿಕಾರ ನಡೆಸಿದ ಪಶ್ಚಿಮ ಬಂಗಾಲ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿ ಭ್ರಷ್ಟಾಚಾರ ರಹಿತ, ಜನಾಭಿವೃದ್ಧಿ ಕಾರ್ಯಕ್ರಮಗಳನ್ನು ನೀಡುವ ಮುಖಾಂತರ ನಮ್ಮ ರಾಜಕೀಯ ಎದುರಾಳಿಗಳಿಗೆ ತಕ್ಕ ಉತ್ತರ ನೀಡಲಾಗಿದೆ. ಪ್ರಸ್ತುತ ರಾಜಕೀಯ ಪರಿಸ್ಥಿತಿಯಲ್ಲಿ ನಮ್ಮ ಪಕ್ಷದ ಕಾರ್ಯಕ್ರಮಗಳೆ ಪರ್ಯಾಯವಾಗಿವೆ ಎನ್ನುವದನ್ನು ಕಾರ್ಯಕ್ರಮ ಹೋರಾಟಗಳ ಮೂಲಕ ಜನತೆಗೆ ಮನವರಿಕೆ ಮಾಡಲು ಪಕ್ಷದ ಕಾರ್ಯಕರ್ತರು ಮುಂದಾಗಬೇಕು ಎಂದು ಕರೆ ನೀಡಿದರು.

ಕಳೆದ ಹತ್ತು ವರ್ಷಗಳಿಂದ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿ ಬಿಡುಗಡೆಗೊಂಡ ಬಿ.ಎಸ್.ಸೊಪ್ಪಿನ ಅವರಿಗೆ ಸಭೆಯಲ್ಲಿ ಗೌರವ ಸಲ್ಲಿಸಲಾಯಿತು. ನೂತನ ಕಾರ್ಯದರ್ಶಿ ಮಹೇಶ ಪತ್ತಾರ ವಂದಿಸಿದರು.

ಸಮ್ಮೇಳನ ಕೈಗೊಂಡ ಪ್ರಮುಖ ನಿರ್ಣಯಗಳು :

ಗಜೇಂದ್ರಗಡ ಮತ್ತು ಸುತ್ತಲಿನ 10 ಗ್ರಾಮಗಳ 10 ಸಾವಿರ ಎಕರೆ ಭೂಮಿಗೆ ನೀರೂಣಿಸುವ ಕೃಷ್ಣಾ ಬಿ ಸ್ಕೀಂ ಮೈಕ್ರೋ ಏತ ನೀರಾವರಿ ಯೋಜನೆ ಮತ್ತು ಸಿಂಗಟಾಲೂರ ಏತ ನೀರಾವರಿ ಯೋಜನೆಗಳ ಶೀಘ್ರ ಅನುಷ್ಠಾನ ಮತ್ತು ಮಹದಾಯಿ ಕಳಸಾ ಬಂಡೂರಿ ಸಮಸ್ಯೆ ಇತ್ಯರ್ಥಕ್ಕೆ ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸಬೇಕು.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯ ಎಲ್ಲಾ ರೈತರ ಎಲ್ಲಾ ಕೃಷಿ ಸಾಲಗಳನ್ನು ಮನ್ನಾ ಮಾಡಬೇಕು.

ವಿಜಯಪುರದ ದಲಿತ ವಿದ್ಯಾರ್ಥಿನಿ ಧಾನಮ್ಮಳ ಮೇಲೆ ಅತ್ಯಾಚಾರ ಎಸುಗಿದವರನ್ನು ಬಂದಿಸಿ ಶಿಕ್ಷಿಸಲು ಹಾಗೂ ಮಹಿಳೆಯರು ಮತ್ತು ದಲಿತರ ಮೇಲೆ ನಡೆಯುತ್ತಿರುವ ಅತ್ಯಾಚಾರ, ದೌಜನ್ಯಗಳನ್ನು ತಡೆಗಟ್ಟಲು ಒತ್ತಾಯ.

ಬಿಜೆಪಿ ಸಂಸದರಾದ ಅನಂತಕುಮಾರ ಹೆಗಡೆ, ಶೋಭಾ ಕರಂದ್ಲಾಜೆ, ನಳೀನ ಕಟೀಲ್ ಹಾಗೂ ಪ್ರತಾ ಸಿಂಹ ಅವರ ಅಸಂವಿಧಾನಿಕ ಮತ್ತು ಸೌಹಾರ್ದತೆಗೆ ದಕ್ಕೆ ತರುವ ಬೇಜವಾಬ್ದಾರಿ ಹೇಳಿಕೆಗಳಿಗೆ ಖಂಡನೆ.

ಅಕ್ರಮ ಸಾಗುವಳಿದಾರರಿಗೆ ಮತ್ತು ಸರಕಾರಿ ಪಡಾ ಜಾಗದಲ್ಲಿ ಮನೆ ಕಟ್ಟಿಕೊಂಡವರಿಗೆ ಹಕ್ಕುಪತ್ರ ನೀಡಲು ಒತ್ತಾಯ.

ಗಜೇಂದ್ರಗಡ ನಗರದಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಾಗೂ ಮೇಟ್ರಿಕ್ ನಂತರ ಬಾಲಕರ ವಸತಿ ನಿಲಯ ಸ್ಥಾಪನೆಗೆ ಆಗ್ರಹ.

“ಸೌಹಾರ್ದತೆಗಾಗಿ ಕರ್ನಾಟಕ” ಜನೇವರಿ–30 ಮಾನವ ಸರಪಳಿ ಯಶಸ್ವಿಗೊಳಿಸಲು ಕರೆ.

ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ವೇತನ ರೂ. 18 ಸಾವಿರ ನಿಗದಿಗೊಳಿಸಲು ಒತ್ತಾಯ. ●

ಸಿ.ಪಿ.ಐ(ಎಂ) ರಾಯಚೂರು ಜಿಲ್ಲಾ 12ನೇ ಸಮ್ಮೇಳನ.... ಪುಟ 9 ರಿಂದ

ಕೆಂಗಲ್) ಸಮ್ಮೇಳನ ಆಯ್ಕೆಮಾಡಿತು.

ಮೆರವಣಿಗೆ–ಬಹಿರಂಗಸಭೆ:

ಮಹಿಳಾ ಸಮಾಜ ದಿಂದ ಪ್ರಾರಂಭಗೊಂಡ ಸಿಪಿಐ(ಎಂ)ನ 12ನೇ ಜಿಲ್ಲಾ ಸಮ್ಮೇಳನದ ನಿಮಿತ್ತ್ಯ ನಡೆದ ಮೆರವಣಿಗೆಯಲ್ಲಿ ಪಕ್ಷದ ನೂರಾರು ಕಾರ್ಯಕರ್ತರು ಹಿತೈಷಿಗಳು ಭಾಗವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆ ನಗರದ ಟಿಪ್ಪುಸುಲ್ತಾನ ಉದ್ಯಾನವನದಲ್ಲಿ ನಡೆಯಿತು. ಬಹಿರಂಗ ಸಭೆಯನ್ನು ಉದ್ಘಾಟಿಸಿ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾಂ. ಪ್ರಕಾಶ್ ಮಾತನಾಡುತ್ತಾ ಇಂದಿನ ಕೇಂದ್ರ ಸರಕಾರದ ಆಡಳಿತದಿಂದ ಜನಸಾಮಾನ್ಯರಿಗೆ ಯಾವುದೇ ಅನೂಕೂಲವಿಲ್ಲ, ನೋಟ್ ಬ್ಯಾನ್ ನಿಂದಾಗಿ 100 ಜನ ಸಾವನ್ನಪ್ಪಿದರು. ಆದರೂ ಮಾಧ್ಯಮಗಳಲ್ಲಿ ಮೋದಿಯವರನ್ನು ವಿಜೃಂಭಣೆ ಮಾಡಲಾಗುತ್ತದೆ. ಯುದ್ದ ವಿಮಾನ ತಯಾರಿಸಲು ಗೊತ್ತಿಲ್ಲದ ರಿಲಾಯನ್ಸ್ ಕಂಪನಿ ಮಾಲೀಕ ಅಂಬಾನಿಗೆ ಗುತ್ತಿಗೆಯನ್ನು ನೀಡಲಾಗಿದೆ. ಎಚ್.ಎ.ಎಲ್. ಗೆ ನೀಡಬೇಕಿದ್ದ ಗುತ್ತಿಗೆಯನ್ನು ಅಂಬಾನಿಗೆ ನೀಡಲಾಗಿದೆ. ನಿಗದಿಯಾಗಿದ್ದ ಗ್ಯಾಸ್ ಸಿಲಿಂಡರ್ ಇಂದು 800 ರೂ. ವರೆಗೆ ತಲುಪಿದೆ. ಮುಂದೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಗೋದಾವರಿ ಮತ್ತು ಕೃಷ್ಣಾ ಸಂಧಿಸುವ ಸ್ಥಳ ವಿಜಯವಾಡದಲ್ಲಿ 8 ಸಾವಿರ ಚ.ಕಿ.ಮೀ ಜಾಗವನ್ನು ಗ್ಯಾಸ್ ತಯಾರಿಕಾ ಘಟಕ ಸ್ಥಾಪನೆಗಾಗಿ ರಿಲಾಯನ್ಸ್ ಕಂಪನಿಗೆ ಜವಾಬ್ದಾರಿ ವಹಿಸಲಾಗಿದೆ. ಹೀಗೆ ನರೇಂದ್ರ ಮೋದಿ ಸರಕಾರ ಬಂಡವಾಳ ಶಾಹಿಗಳ ಕೈವಶದಲ್ಲಿದೆ ಎಂದರು.

ನಿರ್ಣಯಗಳು :

ರಾಯಚೂರು ಜಿಲ್ಲೆಯ ಮೂಲಭೂತ ಸೌಲಭ್ಯಕ್ಕೆ ಒತ್ತಾಯಿಸಿ; ದಲಿತ, ಅಲ್ಪಸಂಖ್ಯಾತ ಹಾಗೂ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ತಡೆಯಲು; 371(ಜೆ) ಕಲಂ ನ ಸರಿಯಾದ ಜಾರಿಗಾಗಿ; ಜಿಲ್ಲೆಗೆ ಸತತ ವಿದ್ಯುತ್ತಿಗಾಗಿ, ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ಕೂಲಿ ಜಾರಿಗಾಗಿ, ಜಿಲ್ಲೆಯ ಸಮಗ್ರ ನೀರಾವರಿ ಯೋಜನೆ ಜಾರಿಗಾಗಿ, ಸೌಹಾರ್ದ ಕರ್ನಾಟಕ್ಕಾಗಿ ನಡೆಯುವ ಮಾನವ ಸರಪಳಿ ಯಶಸ್ವಿಗೊಳಿಸಲು. ಜನಶಕ್ತಿ ಪ್ರಸಾರ ಹೆಚ್ಚಿಸಲು ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

“ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು ಕಟ್ಟೆ ಕಟ್ಟುತ್ತೇವ, ಒಡೆದ ಮನಸ್ಸುಗಳ ಕಂಡ ಕನಸುಗಳ ಕಟ್ಟೆ ಕಟ್ಟುತ್ತೇವ” ಹಾಗೂ “ಗೆಲವು ನಮ್ಮದು” ಹಾಡಿನೊಂದಿಗೆ ಸಮ್ಮೇಳನ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಲಾಯಿತು. ●

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಸಿರಿಯಾದ ಸಮರ ಅಂತಿಮ ಘಟ್ಟದ ಸಮೀಪದಲ್ಲಿ

ಅದರ 'ರಾಜಕೀಯ ಸಾರ್ವಭೌಮತ್ವ, ಸ್ವಾತಂತ್ರ್ಯ, ಏಕತೆ ಮತ್ತು ಪ್ರಾದೇಶಿಕ ಸಮಗ್ರತೆ'ಗಾಗಿ ಸೋಚಿಯಲ್ಲಿ ಘೋಷಣೆ ಅಂಗೀಕಾರ.

ಮೊದಲ ಬಾರಿಗೆ, ಸಿರಿಯಾದಲ್ಲಿ ಅಮೆರಿಕದ ಆಟ ನಡೆಯಲಿಲ್ಲ. ಅದು 'ಅಸ್ಸಾದ್ ನ ಉಚ್ಚಾಟನೆ ಹಾಗೂ ಅಧಿಕಾರ ಹಸ್ತಾಂತರ ಮಾಡುವ ತನ್ನ ಕಾರ್ಯದಲ್ಲಿ ವಿಫಲವಾಗಿದೆ. ಅಲ್ಲಿ ಕಾಲೂರಲು, ಆಮೂಲಕ ಒಂದು ದೊಡ್ಡ ಪ್ರಾದೇಶಿಕ ಶಕ್ತಿಯಾದ ಇರಾನ್‌ನಲ್ಲಿ ಕಾಲೂರುವಲ್ಲಿ ಸಂಪೂರ್ಣ ಸೋತಿದೆ.

ಸುಮಾರು 3,30,000 ಕ್ಕಿಂತಲೂ ಹೆಚ್ಚು ನಾಗರಿಕರ ಕೊಲೆಗಳು ಮತ್ತು ಲಕ್ಷಾಂತರ ಜನರ ಸ್ಥಳಾಂತರಕ್ಕೆ ಕಾರಣವಾಗಿದ್ದ, ಆರು ವರ್ಷಗಳ ಈ ವಿನಾಶಕಾರಿ ಸಿರಿಯಾದ ಸಮರವು ನಿರ್ಣಾಯಕ ಹಂತವನ್ನು ತಲುಪುವ ಸಾಧ್ಯತೆಗಳು ಗರಿಗೆದರಿವೆ. ವಿಶ್ವ ಸಂಸ್ಥೆಯ ಮಧ್ಯಸ್ಥಿಕೆಯ ಮಾತುಕತೆಯು ನವೆಂಬರ್ 28 ರಂದು ಜಿನಿವಾದಲ್ಲಿ ಆರಂಭಗೊಂಡು, ಡಿಸೆಂಬರ್‌ನಲ್ಲಿ ಮುಗಿಯುವ ಸಾಧ್ಯತೆ ಇದೆ. ಸಿರಿಯಾ ಮತ್ತು ಅದರ ವಿರೋಧಿ ಗುಂಪುಗಳ ನಡುವಿನ ಈ ಮಾತುಕತೆ ಫಲಪ್ರದಗೊಂಡು ಸಮರಕ್ಕೆ ಪರದೆ ಎಳೆಯುವ ನಿಟ್ಟಿನಲ್ಲಿ ಆಶಾವಾದ ವ್ಯಕ್ತವಾಗಿದ್ದೆ, ಮೊದಲು ನವೆಂಬರ್ 24 ರಂದು "ಸೋಚಿ" ಯಲ್ಲಿ ರಶಿಯಾದ ನೇತೃತ್ವದಲ್ಲಿ ಇರಾನ್ ಮತ್ತು ಟರ್ಕಿಯ ಅಧ್ಯಕ್ಷರು ಭೇಟಿಯಾಗಿ ಇದರ ನೀಲನಕ್ಷೆಯ ರೂಪುರೇಷೆಯನ್ನು ಅಂತಿಮಗೊಳಿಸಿದ್ದು, ಅದೂ ಪ್ರಪಂಚದ ಪ್ರಧಾನ ಮಹಾಶಕ್ತಿ ಎಂದು ಬಿಂಬಿತಗೊಂಡಿರುವ ಅಮೆರಿಕಾದ ಅನುಪಸ್ಥಿತಿಯಲ್ಲಿ– ಎಂಬುದು ಮಹತ್ವದ್ದು ಎಂಬುದನ್ನು ಇಲ್ಲಿ ಗುರುತಿಸಬೇಕಾಗಿದೆ.

ಸೆಪ್ಟಂಬರ್ 2015 ರಲ್ಲಿ ಬಶರ್ ಅಲ್ ಅಸ್ಸಾದ್ ಕೋರಿಕೆಯ ಮೇರೆಗೆ ರಷ್ಯಾ ದೇಶವು ಸಿರಿಯಾದ ಯುದ್ಧ ರಂಗಕ್ಕೆ ಪ್ರವೇಶಿಸಿತು. ರಷ್ಯಾದ ಅಧ್ಯಕ್ಷರಾದ ಪುತಿನ್ ಆಗಲೇ ರಷ್ಯಾದ ಯುದ್ಧ ಪ್ರವೇಶದ ಉದ್ದೇಶವನ್ನು ಸ್ಪಷ್ಟವಾಗಿ ಘೋಷಿಸಿದರು. "ಸಿರಿಯಾದಲ್ಲಿ ಕಾನೂನು ಬದ್ಧ ಅಧಿಕಾರವನ್ನು ಸ್ಥಿರಗೊಳಿಸುವುದು ಮತ್ತು ರಾಜಕೀಯ ರಾಜಿಗಾಗಿ ಪರಿಸ್ಥಿತಿಯನ್ನು ಸೃಷ್ಟಿಸುವುದು" ಅದರಂತೆಯೇ, ರಷಿಯ ಅಸ್ಸಾದ್ ಸರ್ಕಾರಕ್ಕೆ ಮಿಲಿಟರಿ ಬೆಂಬಲವನ್ನು ಒದಗಿಸುವ ಜೊತೆಗೆ, ಇಸ್ಲಾಂಮಿಕ್ ಸ್ಟೇಟ್ಸ್ (ಐಎಸ್ಸ್) ಉಗ್ರರನ್ನು ಸೋಲಿಸಲು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಿದೆ ಮತ್ತು ಸಿರಿಯಾದ ರಾಜಕೀಯ ಬಿಕ್ಕಟ್ಟಿಗೆ ಪರಿಹಾರವನ್ನು ಖಾತ್ರಿಪಡಿಸಲು ಅದರ ಮಿಲಿಟರಿ ಪಡೆ ಆಯಕಟ್ಟಿನ ಪ್ರದೇಶಗಳಲ್ಲಿ ಬೀಡುಬಿಟ್ಟಿತ್ತು.

ರಷಿಯಾದ ಮಿಲಿಟರಿ ಪ್ರವೇಶದಿಂದಾಗಿ, 'ಸಿರಿಯನ್ ಯುದ್ಧದ ಆಯಾಮ ಸಂಪೂರ್ಣವಾಗಿ ಬದಲಾಯಿತು. ರಷ್ಯಾ, ಇರಾನ್ ಮತ್ತು ಹೆಜ್ಬಲ್ಲಾಗಳ ಸಹಾಯದಿಂದ ಸಿರಿಯನ್ ಸರ್ಕಾರದ ಯುದ್ಧ ಪಡೆಗಳು, ಈ ಹಿಂದೆ ಐ.ಎಸ್. ಆಲ್ ನುಸ್ರಾ, ಆಲ್ ಶಾಮ್ ಮತ್ತು ಇತರೆ ಭಯೋತ್ಪಾದಕ ಗುಂಪುಗಳು ಆಕ್ರಮಿಸಿಕೊಂಡಿದ್ದ ಸಿರಿಯನ್ ಭೂ ಪ್ರದೇಶಗಳನ್ನು 'ಮತ್ತೆ ಪಡೆದುಕೊಳ್ಳಲು ಸತತವಾಗಿ ಮುಂದುವರಿಯಲು ಸಹಕಾರಿಯಾಯಿತು. ಇದರಿಂದಾಗಿ ಐಎಸ್ಸ್ ಮತ್ತು ಆಲ್ ಖೈದಾ ಗುಂಪುಗಳಿಗೆ ಸಕ್ರಿಯವಾಗಿ ಉತ್ತೇಜನ ನೀಡುತ್ತಿದ್ದ ಅಮೆರಿಕಾದ ಬೂಟಾಟಿಕೆ ಕ್ರಮ ಹಾಗೂ ಸಿರಿಯಾ ಆಡಳಿತ ಬದಲಾವಣೆಯನ್ನು ಖಾತ್ರಿ ಪಡಿಸುವ ಉದ್ದೇಶವು ಬಹಿರಂಗಗೊಂಡಿತು. ಅಷ್ಟೇ ಅಲ್ಲದೆ, ಅಮೆರಿಕಾ ಮತ್ತು ಅದರ ಮಿತ್ರ ರಾಷ್ಟ್ರಗಳಾದ ಸೌದಿ ಅರೇಬಿಯಾ, ಕತಾರ್ ತಮ್ಮ ಕಾರ್ಯಗಳಲ್ಲಿ ಸಿಕ್ಕಿ ಬಿದ್ದವು. ಇಷ್ಟೆಲ್ಲಾ ಬಹಿರಂಗಗೊಂಡಿದ್ದು ರಷ್ಯಾ ನೇತೃತ್ವದ ಮಿಲಿಟರಿ ಪಡೆಗಳು ಪ್ರಾರಂಭಿಸಿದ ದಾಳಿಯಿಂದಾಗಿ, ಏಕೆಂದರೆ ರಷ್ಯಾದ ಮಿಲಿಟರಿ ದಾಳಿಯನ್ನು ಉಗ್ರಗಾಮಿ ವಿರೋಧಿ ಗುಂಪುಗಳು ತಡೆದುಕೊಳಲ್ಲು ಅಸಮರ್ಥರಾಗಿದ್ದರಿಂದ ಅಮೆರಿಕಾದ ಬೂಟಾಟಿಕೆ ಬಯಲಾಯಿತು.

ಅಮೆರಿಕಾದ ಪೂರ್ವಗ್ರಹ ಪೀಡಿತ ಷರತ್ತು

ಸಿರಿಯಾದೊಂದಿಗೆ ಯಾವುದೇ ಮಾತುಕತೆಗಳ ಮುನ್ನ, ಅಸ್ಸಾದ್‌ನನ್ನು ಆಡಳಿತದಿಂದ ಉಚ್ಚಾಟನೆ ಮಾಡಬೇಕೆಂಬ ಅಮೆರಿಕಾದ ಪೂರ್ವಗ್ರಹ ಪೀಡಿತ–ಷರತ್ತು ಎಲ್ಲಾ ರಾಜತಾಂತ್ರಿಕ ಮಾತುಕತೆಗಳಿಗೆ ಅಡ್ಡಿ ಉಂಟುಮಾಡಿತ್ತು. ವಿಶ್ವ ಸಂಸ್ಥೆಯ ಈ ಹಿಂದಿನ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಬಾನ್ ಕಿ ಮೂನ್, ಕೋಫಿ ಅನ್ನನ್ ಮತ್ತು ಲಖ್ದರ್ ಬ್ರಹಿಮಿ ಅವರು ಕೂಡ ಸಿರಿಯಾದ ರಾಜಕೀಯ ಸ್ಥಿರತೆಗೆ ಮುಂದಾಗುವ ನಿಟ್ಟಿನಲ್ಲಿ ಯಾವುದೇ ರೀತಿಯ ಗಂಭೀರ ರಾಜತಾಂತ್ರಿಕ' ಮಾತುಕತೆಗೆ ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳ ನಿಲುವುಗಳು ಅಡ್ಡಿಯುಂಟು ಮಾಡುತ್ತಿದ್ದರಿಂದ ರಾಜೀ ಸೂತ್ರದ ನಿಯೋಗಗಳಿಗೆ ಈ ಹಿಂದೆ ರಾಜೀನಾಮೆ ನೀಡಿದ್ದರು ಎಂಬುದನ್ನು ಇಲ್ಲಿ ಅರಿಯಬೇಕಾಗಿದೆ. ಅಮೆರಿಕಾದ ಈ ನಿಲುವುಗಳನ್ನು ರಷ್ಯಾ, ಚೀನಾ ಮತ್ತು ಭಾರತವು ಕೂಡ ವಿಶ್ವ ಸಂಸ್ಥೆಯ ಸಭೆಗಳಲ್ಲಿ ಅಮೆರಿಕದ ವಿರುದ್ಧ



ಹಲವು ಬಾರಿ ಮತ ಹಾಕುವ ಮೂಲಕ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ.

ರಷ್ಯಾವು ತನ್ನ ರಾಜತಾಂತ್ರಿಕತೆಯ ಚಾಣಾಕ್ಷತನದಿಂದ ಇರಾನ್ ಮತ್ತು ಟರ್ಕಿ ದೇಶಗಳನ್ನು ತನ್ನ ಕಡೆ ಗೆಲ್ಲುವಲ್ಲಿ ಯಶಸ್ವಿಯಾಗಿತ್ತು. ಈ ಪ್ರದೇಶದ ಎರಡು ಪ್ರಮುಖ ದೇಶಗಳನ್ನು ತನ್ನ ಬಗಲಿಗೆ ಸೆಳೆದುಕೊಳ್ಳಲು, ಒಂದು ವರ್ಷದ ಹಿಂದೆಯಷ್ಟೇ ರಷ್ಯಾದ ಒಂದು ಯುದ್ಧ ವಿಮಾನವನನು ಹೊಡೆದುರುಳಿಸಿದ ಟರ್ಕಿಯ ಪಡೆಗಳನನು ತನ್ನ ಕಡೆಗೆ ಗೆದ್ದುಕೊಂಡದ್ದು ಒಂದು ರೀತಿಯ ರಾಜತಾಂತ್ರಿಕ ಕ್ಷಿಪ್ರಕ್ರಾಂತಿಯಾಗಿತ್ತು. ಹೀಗೆ ಟರ್ಕಿಯನ್ನು ಮೊದಲು ತನ್ನ ಕಡೆ ಸೆಳೆದ ನಂತರ, ಕಝಾಕಿಸ್ತಾನದ ರಾಜಧಾನಿಯಾದ 'ಅಸ್ತನ್'ನಲ್ಲಿ ಮೊದಲ ಮಾತುಕತೆಯನ್ನು ರಷ್ಯಾ ಆರಂಭಿಸಿತು. ಈ ಎರಡು ದೇಶಗಳು ಮಾತುಕತೆಗೆ ಖಾತ್ರಿಯಾಗಿ ಸಿರಿಯಾಗೆ ತಮ್ಮ ಹೆಗಲು ಕೊಟ್ಟರು. ಆ ನಂತರ ಇರಾನ್ ಮತ್ತೊಬ್ಬ ಖಾತ್ರಿಯಾಗಿ ಭುಜಕೊಟ್ಟರು,

ಈ ಮೂರು ರಾಷ್ಟ್ರಗಳು ಆರಂಭಿಸಿದ ಮೊದಲ 'ಅಸ್ತನ್'ನ ಮಾತುಕತೆಗಳು 'ವಿಶ್ವಾಸರ್ಹತೆ'ಯನ್ನು ಮೂಡಿಸಲು ಯಶಸ್ವಿಯಾಗಿದೆ. ಐಎಸ್ ಆಕ್ರಮಿಸಿಕೊಂಡಿರುವ ಸಿರಿಯಾದ ಭೂಪ್ರದೇಶಗಳನ್ನು ಪುನಃ ಪಡೆದುಕೊಡಿಸುವಲ್ಲಿ ನಡೆಸಿದ ಮಿಲಿಟರಿ ಬೆಳವಣಿಗೆಗಳು ಫಲಕೊಡುತ್ತಿವೆ. ಇದು ಒಂದು ದೊಡ್ಡ ಭೂ–ರಾಜಕೀಯ ಪಲ್ಲಟವಾಗಿದ್ದು, ಮೊದಲ ಬಾರಿಗೆ ಅಮೆರಿಕವು ಈ ಪ್ರಕ್ರಿಯೆಯಲ್ಲಿ ಕೇವಲ 'ವೀಕ್ಷಕರಾಗಿ' ಹೊರಗಡೆಯಿಂದ ನೋಡುವಂತೆ ಮಾಡಲಾಗಿದೆ.

2017 ರ ಜನವರಿಯಿಂದ 'ಅಸ್ತನ್' ದಲ್ಲಿ 7 ಸುತ್ತುಗಳ ಮಾತುಕತೆ ಈ ಮೂರು ದೇಶಗಳ ನಡುವೆ ಸರಾಗವಾಗಿಯೇ ನಡೆದಿವೆ. ಈ ಮಾತುಕತೆಗಳು ಫಲಿತಾಂಶ ನೀಡುವ ನಿಟ್ಟಿನಲ್ಲಿ ಹೊಸ ಭರವಸೆ ಮೂಡಿಸಿತ್ತಾದರೂ ಸಹ, ಮಾತುಕತೆಗಳ ಮಧ್ಯೆ ಟರ್ಕಿಯು ಸಿರಿಯಾದ ಅಸ್ಸಾದ್ ಆಡಳಿತ ಬದಲಾಗಬೇಕೆಂಬ ತನ್ನ ಹಿಂದಿನ ನಿಲುವನ್ನು ಮತ್ತೆ ಕೆದಕಿ ಸ್ವಲ್ಪ ಕಾಲ ಅಡಚಣೆ ಉಂಟು ಮಾಡಿ ಪರಿಸ್ಥಿತಿಯ ಗಾಂಭೀರ್ಯತೆಯನ್ನು ತಿರುಚಲು ಪ್ರಯತ್ನಿಸಿತು. ಸಿರಿಯನ್ ಸರ್ಕಾರ ಮತ್ತು ವಿರೋಧಿ ಗುಂಪುಗಳೊಂದಿಗೆ ಮಾತುಕತೆಗೆ ಏರ್ಪಡಿಸಬೇಕೆಂಬ ಟರ್ಕಿಯ ಬೇಡಿಕೆಯನ್ನು, ರಷ್ಯಾ ದೇಶವು ರಾಜತಾಂತ್ರಿಕ ದಾರಿಗಳಿಂದ ಬಗೆಹರಿಸಿತು. ಟರ್ಕಿಯ ಬೇಡಿಕೆಯಂತೆ, ವಿರೋಧಿ ಗುಂಪುಗಳೊಂದಿಗೆ ಸಿರಿಯನ್ ಸರ್ಕಾರ ಮಾತುಕತೆಯಲ್ಲಿ ಭಾಗವಹಿಸುವಂತೆ, ರಷ್ಯಾವು ಮನವರಿಕೆಯ ಖಾತ್ರಿ ನೀಡಿತು. ಇದೀಗ ಮೊದಲ ಬಾರಿಗೆ, ಸಿರಿಯನ್ ಸರ್ಕಾರ ಮತ್ತು ವಿರೋದಿ ಪ್ರತಿನಿಧಿಗಳು ಮುಖಾ–ಮುಖಿಯಾಗಿ ಮುಂದಿನ ಮಾರ್ಗಗಳ ಬಗ್ಗೆ ಚರ್ಚಿಸುವಂತಾಗಿದೆ.

ಮಾತುಕತೆ ಸಂದರ್ಭದಲ್ಲಿ ತಮ್ಮ ಒಟ್ಟಾರೆಯ ಸಾಮಾನ್ಯ ದೃಷ್ಟಿಕೋನವನ್ನು ಪ್ರದರ್ಶಿಸಲು, ವಿರೋಧಿ ಗುಂಪುಗಳು ಒಂದು ಉನ್ನತ ಮಾತುಕತೆ ಸಮಿತಿ (ಹೆಚ್.ಎನ್.ಸಿ) ಯನ್ನು ರಚಿಸಿಕೊಂಡು ಒಗ್ಗಟ್ಟಾದರು. ಈ ಸಮಿತಿಯು ಸೌದಿ ಅರೇಬೀಯಾದ ರಾಜಧಾನಿ ರಿಯಾದ್ ನಗರದ ಸಭೆಯಲ್ಲಿ ಭೇಟಿ ನಡೆಸಿತು. ಆರಂಭದ ಸುತ್ತಿನ ಮಾತುಕತೆಗಳಲ್ಲಿ ಅಸ್ಸಾದ್ ಸರ್ಕಾರದಲ್ಲಿ ಹಿಂದೆ ಪ್ರಧಾನಿಯಾಗಿದ್ದ 'ರಿಯಾದ್ ಹಿಜಿಭ್' ಅವರು ಹೆಚ್.ಎನ್.ಸಿ. ಸಭೆಯ ನೇತೃತ್ವವಹಿಸಿದ್ದರು. ಅಸ್ಸಾದ್ ರನ್ನು ಉಚ್ಚಾಟನೆ ಮಾಡಬೇಕೆಂಬ ಒತ್ತಾಯ ಮೂಡಿಬಂದಿತು. ಆದರೆ ಇತ್ತೀಚೆಗೆ ನಡೆದ ರಿಯಾದ್ ಸಭೆ–2 ರಲ್ಲಿ ಮಾತುಕತೆ ನಡೆಯುತ್ತಿದ್ದಾಗ ಥಟ್ಟನೆ ರಿಯಾದ್ ಹಿಜಿಭ್' ರಾಜೀನಾಮೆ ನೀಡಿದರು. ಇವರಿಗೆ ಬದಲಾಗಿ ರಷ್ಯನ್ ಬೆಂಬಲಿತ ಟರ್ಕಿಯವರಾದ ನಸ್ರ್ ಹರೀರಿ ಅವರನ್ನು ನೇಮಿಸಲಾಯಿತು. ಇದರಿಂದಾಗಿ ಸಿರಿಯನ್ ವಿರೋಧಿ ಗುಂಪುಗಳು ಇನ್ನು ಮುಂದೆ ಸಿರಿಯಾದಲ್ಲಿ ಮೇಲುಗೈ ಸಾಧಿಸಲು ಅಸಾಧ್ಯವೆಂಬ ಪರಿಸ್ಥಿತಿ ಉದ್ಭವಗೊಂಡಿತು. ಈ ಮಧ್ಯೆ ಅಮೆರಿಕಾದ ಮಧ್ಯವರ್ತಿ ಸ್ಟಾಪನ್ ಡೆ ಮಿಸ್ಟೂರ ರವರು ವಿರೋಧಿ ಗುಂಪಿನ ಹೆಚ್.ಎನ್.ಸಿ. ಪ್ರತಿನಿಧಿಗಳ ಸಭೆಯಲ್ಲಿ ನೀವು ಇನ್ನ ಮುಂದೆ ಸಿರಿಯನ್ ಸರ್ಕಾರದ ಮೇಲೆ ಯುದ್ಧವನ್ನು ಗೆಲ್ಲಲು ಅಸಾಧ್ಯವೆಂಬ ಹೇಳಿಕೆಯು ವಿರೋಧಿ ಗುಂಪುಗಳಿಗೆ ಇನ್ನು ಅಸ್ಸಾದ್ ಉಚ್ಚಾಟನೆ ಸಾಧ್ಯವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಟ್ಟಂತಾಯಿತು.

ಅಮೆರಿಕಾದ ಪ್ರಭಾವ ದುರ್ಬಲ

ಸೌದಿ ಅರೇಬಿಯಾ ಮತ್ತು ಇಸ್ರೇಲ್ ಹೊರತುಪಡಿಸಿ, ಅಮೆರಿಕಾ ಮತ್ತು ವಿರೋಧಿ ಗುಂಪುಗಳ ಬೇಡಿಕೆಯಾದ ಸಿರಿಯನ್ ಅಧ್ಯಕ್ಷ ಅಸ್ಸಾದ್ ನನ್ನು ಅಧಿಕಾರದಿಂದ ಉಚ್ಚಾಟನೆ ಮಾಡುವ ಉದ್ದೇಶಕ್ಕೆ ಯಾವುದೇ ಇತರೆ ಪ್ರಾದೇಶಿಕ ದೇಶಗಳ ಬೆಂಬಲ ಕ್ಷೀಣಿಸುತ್ತಿದೆ. ಕೆಲವು ವರದಿಗಳ ಪ್ರಕಾರ ಸೌದಿ ಅರೇಬಿಯಾವು ಸಹ, ಪ್ರತಿ ಪಕ್ಷಗಳ ಗುಂಪಿಗೆ ಹಣಕಾಸು ನೆರವನ್ನು ಇದೀಗ ನಿಲ್ಲಿಸಿದೆ. ಇದರ ಅರ್ಥ ವಿರೋಧಿ ಗುಂಪಿನ ಅಥವಾ ಅಮೆರಿಕಾದ ಬೆಂಬಲಿತ ಮಿಲಿಟರಿ ಪಡೆಗೆ ಸಹಕಾರ ನಿಲ್ಲಿಸಿ, ಪರೋಕ್ಷವಾಗಿ ಸಿರಿಯಾಗೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ವ್ಯಾಖ್ಯಾನಿಸಲಾಗಿದೆ. ಕತಾರ್ ತನ್ನ ಸ್ವಂತ ಹಿತಾಸಕ್ತಿಯಿಂದಾಗಿ ಯುದ್ಧದಿಂದ ಈಗಾಗಲೇ ಹೊರ ಬಂದಿದೆ. ಜೋರ್ಡಾನ್ ಕೂಡ ತನ್ನ ಹಿಂದಿನ ನಿಲುವನ್ನು ಬದಲಾಯಿಸಿ ಸಿರಿಯಾಗೆ ಬೆಂಬಲ ಸೂಚಿಸಿದೆ. ಇನ್ನು ಈಜಿಪ್ಟ್ ಯಾವಾಗಲೂ ರಷಿಯಾ ಮತ್ತು ಅದರ ಪ್ರಯತ್ನಗಳನ್ನು ಬೆಂಬಲಿಸುತ್ತದೆ. ಇರಾನ್ ಮತ್ತು ಲೆಬನಾನ್ ಸಿರಿಯಾದೊಂದಿಗೆ ಈಗಾಗಲೇ ಕೈ ಜೋಡಿಸಿವೆ. ಕುರ್ಡ್‌ಗಳನ್ನು ಹೆಚ್.ಎನ್.ಸಿ. ಮಾತುಕತೆಗಳಿಂದ ಹೊರತು ಪಡಿಸಬೇಕೆಂಬ ಟರ್ಕಿಯ ಬೇಡಿಕೆಯನ್ನು ರಷ್ಯಾವು ಪೂರೈಸಿ, ಟರ್ಕಿಯನ್ನು ಮನವೊಲಿಸಿ ಮಾತುಕತೆಯಲ್ಲಿ ಅದಕ್ಕೆ ಪ್ರಾಮುಖ್ಯತೆ ನೀಡಿತು. ಹೀಗಾಗಿ ಎಲ್ಲಾ ಪ್ರಾದೇಶಿಕ ಆಟಗಾರರು (ದೇಶಗಳು) ವಾಸ್ತವತೆಯನ್ನು ಒಪ್ಪಿಗೊಂಡಂತಾಯಿತು. ಹಾಗಾಗಿ ರಷ್ಯಾದ 'ಅಸ್ತಾನ' ಪ್ರಯತ್ನಕ್ಕೆ ಸಂಪೂರ್ಣ ಬೆಂಬಲ ವ್ಯಕ್ತವಾಯಿತು. ಇದೀಗ ಅಮೆರಿಕಾದ ಬೆಂಬಲಕ್ಕೆ ವಿಪರೀತ ವ್ಯತಿರಿಕ್ತ ಪರಿಣಾಮ ಉಂಟಾಗಿ ಅದರ 'ಅಸ್ಸಾದ ಉಚ್ಚಾಟನೆ' ಪ್ರಭಾವವು ದುರ್ಬಲಗೊಂಡಂತಾಯಿತು.

ಬಲವಂತದಿಂದ ಅಮೆರಿಕಾ ಬದಲಾವಣೆಯತ್ತ. . .ರಷ್ಯಾದ ಪ್ರಯತ್ನಗಳು ಫಲಗೊಳ್ಳುವ ಸೂಚನೆಗಳ ನೈಜತೆಯನ್ನು ಅಮೆರಿಕವು ಕೂಡ ಒಪ್ಪಿಕೊಂಡು, ಸ್ವಲ್ಪಮಟ್ಟಿಗೆ ಬಲವಂತದಿಂದ ತನ್ನ ಹಿಂದಿನ ನಿಲುವುಗಳನ್ನು ತುಸು ಬದಲಾಯಿಸಿ ಕೊಳ್ಳುವಂತೆ ಮಾಡಿತು. ನವೆಂಬರ್ 11 ರಂದು ವಿಯಟ್ನಾಂ ನಲ್ಲಿ ಭೇಟಿಯಾದ ಪುತಿನ್ ಮತ್ತು ಟ್ರಂಪ್ ರವರು ನೀಡಿದ ಜಂಟೀ ಹೇಳಿಕೆ ಇದನ್ನು ಸಮರ್ಥಿಸುತ್ತದೆ. ಈ ಎರಡೂ ಅಧ್ಯಕ್ಷರು ಸಿರಿಯಾದ ಸಾರ್ವಭೌಮತ್ವಕ್ಕೆ ತಮ್ಮ ಬದ್ಧತೆಯನ್ನು ದೃಢಪಡಿಸಿದ್ದಾರೆ. ಏಕತೆ, ಸ್ವಾತಂತ್ರ್ಯ, ಪ್ರಾದೇಶಿಕ ಸಮಗ್ರತೆ ಮತ್ತು ಪ್ರಾಂತ್ಯಗಳ ಪಾತ್ರ ನಿರ್ವಹಣೆ ಕುರಿತಂತೆ, ಒಮ್ಮತ ವ್ಯಕ್ತವಾಗಿದೆ. ಮೊದಲ ಬಾರಿಗೆ ಅಮೆರಿಕಾದ ಅಧ್ಯಕ್ಷ ಅಸ್ಸಾದ್ ಉಚ್ಚಾಟನೆಯಿಂದ ಹೊರಬಂದು, 'ಸಿರಿಯಾದ ರಾಜಕೀಯ ಸಾರ್ವಭೌಮತ್ವವನ್ನು ಸ್ವೀಕರಿಸಿದ್ದಾರೆ. ಈ ಕುರಿತಂತೆ 'ಏಕೀಕೃತ ಸಿರಿಯಾದ ಸ್ಥಿರತೆಯನ್ನು ಖಚಿತ ಪಡಿಸಿರುವ ಪ್ರತಿಜ್ಞೆಯನ್ನು ಟ್ರಂಪ್ ಸ್ಪಷ್ಟಗೊಳಿಸಿದರು. ಇದನ್ನು ಟರ್ಕಿಯ ಅಧ್ಯಕ್ಷ ಎರ್ಡೋಗಾನ್ ಗೆ ದೂರವಾಣಿ ಮೂಲಕ ತಿಳಿಸಿದ್ದಾರೆ. ಮಾತ್ರವಲ್ಲದೆ, ಟರ್ಕಿಯು ಭಯೋತ್ಪಾದಕರು ಎಂದು ಪರಿಗಣಿಸಿರುವ ಸಿರಿಯನ್ ಕುರ್ದಿಶ್ ಸೈನಿಕರಿಗೆ, ಅಮೆರಿಕವು ಇನ್ನು ಮುಂದೆ ಶಸ್ತ್ರಾಸ್ತ್ರ ಪೂರೈಸುವುದಿಲ್ಲ ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ.

ಸೋಚಿ ಘೋಷಣೆಗೆ ಅಮೆರಿಕದ ಅಧ್ಯಕ್ಷರ ಗೌರವ

ಸಿರಿಯಾದ 'ರಾಜಕೀಯ ಸಾರ್ವಭೌಮತ್ವ, ಸ್ವಾತಂತ್ರ್ಯ, ಏಕತೆ ಮತ್ತು ಪ್ರಾದೇಶಿಕ ಸಮಗ್ರತೆ'ಯನ್ನು ಅಮೆರಿಕವು ಗೌರವಿಸುತ್ತದೆ ಮತ್ತು ಮೂರು ದೇಶಗಳು ಶಾಂತಿ ಮತ್ತು ಸ್ಥಿರತೆ ಸ್ಥಾಪನೆಗೆ ಕೆಲಸ ಮಾಡುತ್ತವೆ ಎಂದು ರಷಿಯಾ, ಇರಾನ್ ಮತ್ತು ಟರ್ಕಿಯು ಅನುಮೋದಿಸಿದ ಘೋಷಣೆ ತಿಳಿಸಿದೆ.

ಹೊಸ ಸಂವಿಧಾನವನ್ನು ರೂಪಿಸಲು ಮತ್ತು ವಿಶ್ವಸಂಸ್ಥೆ ಮೇಲ್ವಿಚಾರಣೆಯಲ್ಲಿ ಸಂವಿಧಾನ ಬದ್ಧತೆಯ ಆಧಾರದಲ್ಲಿ ಚುನಾವಣೆಯನ್ನು ನಡೆಸಲು ಸಕ್ರಿಯಗೊಳಿಸಬೇಕು. ಸಿರಿಯನ್ ಸರ್ಕಾರ ಮತ್ತು ಎಲ್ಲಾ ವಿರೋಧ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಂಡಿರುವ ರಾಷ್ಟ್ರೀಯ ಸಂವಾದ ಅಧಿವೇಶನವನ್ನು ಆಯೋಜಿಸಲು ರಷ್ಯಾದ ಪ್ರಸ್ತಾಪಗಳನ್ನು ಅನುಮೋದಿಸಲಾಯಿತು. ಸಿರಿಯಾಕ್ಕೆ ಮಾನವೀಯ ನೆರವು ವಿಸ್ತರಿಸುವಲ್ಲಿ ಮತ್ತು ಅದರ ಯುದ್ಧದ ಆ ನಂತರದ ಪುನರ್ ನಿರ್ಮಾಣದಲ್ಲಿ ವಿಶ್ವದ ಎಲ್ಲಾ ದೇಶಗಳು ಸಹಾಯ ಹಸ್ತ ನೀಡಬೇಕೆಂಬ ಮನವಿಯನ್ನು ಅಂಗೀಕರಿಸಲಾಯಿತು.

ಹೊಸ–ಮಧ್ಯ–ಪೂರ್ವ ಉದಯ

ರಷಿಯಾ, ಇರಾನ್ ಮತ್ತು ಟರ್ಕಿ– ಈ ಮೂರು ಮುಖ್ಯಸ್ಥರ 'ಸೋಚಿ' ಸಭೆಯ ಸಿರಿಯಾ ಕುರಿತಂತೆ ನಡೆದಿರುವ ಬೆಳವಣಿಗೆಗಳನ್ನು ಉತ್ಸಾಹದಿಂದ 'ಸೋಚಿ' ಯಲ್ಲಿ ಸ್ವಾಗತಿಸಲಾಗಿದೆ. ಇರಾನಿನ ಕೆಲವು ಮಾಧ್ಯಮಗಳ ಪ್ರಕಾರ ಇದು 'ಹೊಸ–ಮಧ್ಯ–ಪೂರ್ವ ಉದಯ' ಕ್ಕೆ ಪೂರ್ವಭಾವಿಯಾಗಿದೆ. ಅಮೆರಿಕ, ಇಸ್ರೇಲ್ ಮತ್ತು ಸೌದಿ ಅರೇಬಿಯಾಗಳ ಪ್ರಭಾವ ದುರ್ಬಲಗೊಂಡಿದೆ. ಅದೇನೇ ಇದ್ದರೂ 1991 ರ ನಂತರ ಮೊದಲ ಬಾರಿಗೆ ಅಮೆರಿಕವನ್ನು ಮೂಲೆಗೆ ತಳ್ಳಿದಂತಾಗಿದೆ ಎಂಬ ಸ್ಪಷ್ಟವಾದ ಸಂದೇಶ ರವಾನಿಸಲಾಗಿದೆ.

ಅಮೆರಿಕಾವು ಇರಾಕ್ ಮತ್ತು ಲಿಬಿಯಾದಲ್ಲಿ ಯಶಸ್ವಿಯಾಗಿತ್ತು. ಅಲ್ಲಿ ಸದ್ದಾಂ ಹುಸೇನ್ ಮತ್ತು ಗಡಾಫಿಯನ್ನು ಹೊರದಬ್ಬಿ ಕೊಲ್ಲಲಾಯಿತು. ಈ ದೇಶಗಳಲ್ಲಿ ಅದು ಅಸ್ತವ್ಯಸ್ತತೆಯನ್ನು ಉಂಟುಮಾಡಿತ್ತು. ಈ ಎರಡು ದೇಶಗಳಲ್ಲಿ ತನ್ನ ಮಿಲಿಟರಿಯ ಮೂಲಕ ತನಗೆ ಬೇಕಾದಂತೆ ಆದೇಶಿಸುವ ಮತ್ತು ತಾನು ಇಲ್ಲಿ ಶಾಶ್ವತವಾಗಿ ಇರುವುದನ್ನು ಖಚಿತ ಪಡಿಸಿಕೊಂಡು ಮೆರೆಯಿತು. ಅದರೆ, ಮೊದಲ ಬಾರಿಗೆ, ಸಿರಿಯಾದಲ್ಲಿ ಅಮೆರಿಕದ ಆಟ ನಡೆಯಲಿಲ್ಲ. ಅದು 'ಅಸ್ಸಾದ್ ನ ಉಚ್ಚಾಟನೆ ಹಾಗೂ ಅಧಿಕಾರ ಹಸ್ತಾಂತರ ಮಾಡುವ ತನ್ನ ಕಾರ್ಯದಲ್ಲಿ ವಿಫಲವಾಗಿದೆ. ಅಲ್ಲಿ ಕಾಲೂರಲು, ಆಮೂಲಕ ಒಂದು ದೊಡ್ಡ ಪ್ರಾದೇಶಿಕ ಶಕ್ತಿಯಾದ ಇರಾನ್‌ನಲ್ಲಿ ಕಾಲೂರುವಲ್ಲಿ ಸಂಪೂರ್ಣ ಸೋತಿದೆ. ಈ ಬೆಳವಣಿಗೆಗಳ ಪ್ರಾಮುಖ್ಯತೆಯನ್ನು ಮರೆಯಬಾರದು.

JANASHAKTHI KANNADA VARA PATRIKE   January 01-07, 2018   Price: Rs. 10/-   Date of Publication: 29 December 2017   RNI No. KARKAN /2006/17926   Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026   Licensed to Post without prepayment License No. WPP-283

ಗಜೇಂದ್ರಗಡದಲ್ಲಿ ಸಿಪಿಐ(ಎಂ) ಅಖಂಡ ಧಾರವಾಡ ಜಿಲ್ಲಾ 11ನೇ ಸಮ್ಮೇಳನ

“ಬಿಜೆಪಿ ಗಿಮಿಕ್ ಗಳನ್ನು ಬಿಟ್ಟು ಕಳಸಾ-ಬಂಡೂರಿಗೆ ಪ್ರಧಾನಿ ಮಧ್ಯಸ್ತಿಕೆಗೆ ಪ್ರಯತ್ನಿಸಲಿ”

ಎಂ.ಎಸ್. ಹಡಪದ



ಚುನಾವಣಾ ಪೂರ್ವದಲ್ಲಿ ಭರವಸೆಗಳ ಮಹಾಪೂರವನ್ನೇ ಹರಿಸಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರಕಾರ ನೋಟು ರದ್ದತಿ, ಜಿಎಸ್‌ಟಿ ಜಾರಿಮಾಡುವುದರೊಂದಿಗೆ ಸಾಮಾನ್ಯ ಜನರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ. ಈ ದೇಶದ ಅನ್ನದಾತರ ಸಾಲ ಮನ್ನಾ ಮಾಡಲಾಗದ ಸರಕಾರ ಬಂಡವಾಳಶಾಹಿಗಳ ನೂರಾರು ಕೋಟಿ ಸಾಲಗಳನ್ನು ಮನ್ನಾ ಮಾಡಿದೆ. ಉದ್ಯೋಗ ಸೃಷ್ಠಿಸಲು, ರೈತರ ಆತ್ಮಹತ್ಯೆ ತಡೆಯಲು, ಕಾರ್ಮಿಕರಿಗೆ ನ್ಯಾಯಯುತ ವೇತನ, ಬೆಲೆ ಏರಿಕೆ ನಿಯಂತ್ರಣ ಮಾಡಲು ಸರಕಾರ ವಿಫಲವಾಗಿದೆ. ಜನರ ಸಮಸ್ಯೆಗಳನ್ನು ಬಗೆಹರಿಸಿ ಸಮಾಜದಲ್ಲಿ ಶಾಂತಿಯುತ ಬದುಕನ್ನು ಕಟ್ಟಿಕೊಡಬೇಕಾದ ಚುನಾಯಿತ ಸರಕಾರಗಳ ತಪ್ಪು ಆರ್ಥಿಕ ನೀತಿಗಳಿಂದಾಗಿ ಜನಸಾಮಾನ್ಯರ ರೈತರ ಜೀವನ ದಿನದಿಂದ ದಿನಕ್ಕೆ ದುಸ್ತರವಾಗುತ್ತಿದೆ. ನರೇಂದ್ರ ಮೋದಿ ಸೃಷ್ಠಿಸಿದ ಭ್ರಮೆಗಳು ಜನಮಾನಸದಿಂದ ಕಳಚುತ್ತಿವೆ. ದೇಶದ ಪ್ರಧಾನಿ 125 ಕೋಟಿ ಜನರ ಪಿಇ ಮಾಸ್ಟರ್ ಆಗಿದ್ದಾರೆಯೇ ಹೊರತು ಪಿಎಂ ಅಗಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಎನ್.ಉಮೇಶ ಹೇಳಿದರು.

ಧಾರವಾಡ, ಗದಗ, ಹಾವೇರಿ ಜಿಲ್ಲೆಗಳನ್ನೊಳಗೊಂಡ ಅಖಂಡ ಧಾರವಾಡ ಜಿಲ್ಲಾ 11ನೇ ಸಿಪಿಐ(ಎಂ) ಜಿಲ್ಲಾ ಸಮ್ಮೇಳನದ ಅಂಗವಾಗಿ ಗದಗ ಜಿಲ್ಲಾ ಗಜೇಂದ್ರಗಡದ ದುರ್ಗಾ ಸರ್ಕಲ್‌ನಲ್ಲಿಯ ಕಾಮ್ರೇಡ್ ಎಸ್. ಪ್ರಸನ್ನಕುಮಾರ ವೇದಿಕೆಯಲ್ಲಿ ನಡೆದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಕೇಂದ್ರ ಸರಕಾರ ತನ್ನ ವಿಫಲತೆಯನ್ನು ಮರೆಮಾಚಲು ಮತ್ತು ಜನತೆಯ ದಿಕ್ಕು ತಪ್ಪಿಸಲು ಭಾವನಾತ್ಮಕ ವಿಚಾರಗಳನ್ನು ಹರಿಬಿಟ್ಟು ಕೋಮುವಾದಕ್ಕೆ ಕುಮ್ಮಕ್ಕು ನೀಡುತ್ತಿದೆ. ಈ ಅಪಾಯದಿಂದ ಜನತೆ ಎಚ್ಚರದಿಂದ ಇದ್ದು ನಾಡಿದ ಕೋಮುಸೌಹಾರ್ದತೆ, ಜಾತ್ಯಾತೀತೆಯನ್ನು ಕಾಪಾಡಿಕೊಳ್ಳಲು ಮುಂದಾಗಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ ಮಾತನಾಡಿ “ಈ ಭಾಗದಲ್ಲಿ ಕಳೆದ ಎರಡು ವರ್ಷಗಳಿಂದ ಜನತೆ ಮಹದಾಯಿ ಕಳಸಾ ಬಂಡೂರಿ ನೀರಿಗಾಗಿ ನಿರಂತರವಾದ ಚಳುವಳಿ ನಡೆಸುತ್ತಿದ್ದಾರೆ. ಆದರೇ ಅಧಿಕಾರದಲ್ಲಿರುವ ಕೇಂದ್ರದ ನರೇಂದ್ರ ಮೋದಿ ಮತ್ತು ರಾಜ್ಯದ ಸಿದ್ದರಾಮಯ್ಯ ಸರಕಾರಗಳು ತಮ್ಮ ಮತರಾಜಕಾರಣಕ್ಕಾಗಿ ಕುಡಿಯುವ ನೀರಿನಲ್ಲಿಯೂ ನೀಚರಾಜಕಾರಣಕ್ಕಿಳಿದಿವೆ. ರಾಜ್ಯದ ಬಿಜೆಪಿ ನಾಯಕರಿಗೆ ನಿಜವಾದ ಕಾಳಜಿ ಇದ್ದರೆ ರಾಜಕೀಯ ಗಿಮಿಕ್‌ಗಳನ್ನು ಕೈಬಿಟ್ಟು ಪ್ರಧಾನ ಮಂತ್ರಿಗಳು ಮಧ್ಯಸ್ಥಿಕೆ ವಹಿಸುವಂತೆ ಪ್ರಯತ್ನಗಳನ್ನು ಮಾಡಲಿ” ಎಂದರು

ಪುರ ಸಭೆ ಸದಸ್ಯ ಎಂ.ಎಸ್.ಹಡಪದ ಪ್ರಸ್ತಾವಿಕವಾಗಿ ಮಾತನಾಡಿದರು. ಎಂ.ಬಿ.ಸೊಂಪೂರ ಸ್ವಾಗತಿಸಿದರು, ಶಿವು ಚವ್ಹಾಣ ವಂದಿಸಿದರು. ಫಯಾಜ್ ಅಹಮ್ಮದ ತೋಟದ ಕಾರ್ಯಕ್ರಮ ನಿರೂಪಿಸಿದರು. ಗಜೇಂದ್ರಗಡ ಶಾಖಾ ಕಾರ್ಯದರ್ಶಿ ಬಾಲು ರಾಠೋಡ ಮತ್ತು ಜಿಲ್ಲಾ ಸಮಿತಿ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆಕರ್ಷಕ ಮೆರವಣಿಗೆ:

ಸಮ್ಮೇಳನದ ಅಂಗವಾಗಿ ಗಜೇಂದ್ರಗಡ ಮುಖ್ಯ ರಸ್ತೆಗಳನ್ನು ಕೆಂಬಾವುಟಗಳಿಂದ ಮತ್ತು ನಾಡಿನ ಸೌಹಾರ್ದತೆ ಸಾರುವ ಸಮಾಜ ಸುಧಾರಕರ ಹೇಳಿಕೆಗಳ ಪ್ಲೇಕ್ಸಗಳಿಂದ ಶೃಂಗರಿಸಲಾಗಿತ್ತು. ಕೆಂಪು ಸಮವಸ್ತ್ರದಾರಿಗಳು ಸೇರಿದಂತೆ ನೂರಾರು ಜನರ ಬೃಹತ್ ಆಕರ್ಷಕ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಯಲ್ಲಿ ಸಾಗಿಬಂದಿದ್ದು ಜನರನ್ನು ಆಕರ್ಷಿಸಿತು.



ಮಹೇಶ ಪತ್ತಾರ

ಪ್ರತಿನಿಧಿ ಅಧಿವೇಶನ :

ಜಿಲ್ಲಾ ಸಮಿತಿ ಸದಸ್ಯ ಬಸವರಾಜ ಮಂತೂರ ಧ್ವಜಾರೋಹಣ ಮಾಡಿದ ನಂತರ ಪ್ರತಿನಿಧಿಗಳು ಹುತಾತ್ಮ ಸ್ಥಂಬಕ್ಕೆ ಗೌರವಾರ್ಪಣೆ ಸಲ್ಲಿಸಿದರು. ಐದು ಜನರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯು ಕಲಾಪಗಳನ್ನು ಸುಗಮವಾಗಿ ನಡೆಸಿಕೊಟ್ಟಿತು. ಕಾರ್ಯದರ್ಶಿಗಳು ಮಂಡಿಸಿದ ಲಿಖಿತ ವರದಿಯ ಮೇಲೆ 14 ಜನ ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ನಂತರ ಕರಡು ವರದಿಯನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು.

ನೂತನ ಸಮಿತಿ ಆಯ್ಕೆ :

ಧಾರವಾಡ ಜಿಲ್ಲಾ ಸಂಘಟನಾ ಸಮಿತಿಗೆ ಸಮ್ಮೇಳನ 15 ಜನರ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಕಾರ್ಯದರ್ಶಿಯಾಗಿ ಮಹೇಶ ಪತ್ತಾರ ಜಿಲ್ಲಾ ಸಮಿತಿಯ ಸದಸ್ಯರಾಗಿ ಬಿ.ಎಸ್.ಸೊಪ್ಪಿನ, ಆರ್.ಎಚ್.ಆಯಿ, ಬಿ.ಎನ್.ಪೂಜಾರಿ, ಬಿ.ಐ.ಈಳಿಗೇರ (ಧಾರವಾಡ ಜಿಲ್ಲೆ) ಎಂ.ಎಸ್.ಹಡಪದ, ಬಸವರಾಜ ಮಂತೂರ, ಮಾರುತಿ ಚಿಟಗಿ, ಪೀರೂ ರಾಠೋಡ,

ಪುಟ 14 ಕ್ಕೆ



ಸಿಪಿಐ(ಎಂ) 16ನೇ ಚಿಕ್ಕಬಳ್ಳಾಪುರ ಜಿಲ್ಲಾ ಸಮ್ಮೇಳನ

ಹೇಮಚಂದ್ರ

ಸಿಪಿಐ(ಎಂ) 16ನೇ ಚಿಕ್ಕಬಳ್ಳಾಪುರ ಜಿಲ್ಲಾ ಸಮ್ಮೇಳನ ಗುಡಿಬಂಡೆ ತಾಲೂಕಿನ ಯೆಲ್ಲೋಡು ಗ್ರಾಮ ಪಂಚಾಯತಿನ ಆದಿನಾರಾಯಣ ಬೆಟ್ಟದಲ್ಲಿ ಡಿಸೆಂಬರ್ 21 ರಿಂದ 23ರವರೆಗೆ ಜರುಗಿತು. ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟನೆಯುನ್ನು ನೆರವೇರಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಮತ್ತು ಪ್ರತಿನಿಧಿ ಅಧಿವೇಶನದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ವಿ.ಜೆ.ಕೆ.ನಾಯರ್, ಕಾ. ಜಿ.ಎನ್. ನಾಗರಾಜ್, ಕಾ. ಎಸ್. ವರಲಕ್ಷ್ಮಿ ಮತ್ತು ಕಾ. ಮುನಿವೆಂಕಟಪ್ಪ ಅವರುಗಳೂ, ಜಿಲ್ಲಾ ನಾಯಕರೂ ಭಾಗವಹಿಸಿದ್ದರು. ಧ್ವಜಾರೋಹಣ ನಂತರ ಪ್ರತಿನಿಧಿ ಅಧಿವೇಶನ ಜರುಗಿತು. ಜಿಲ್ಲಾ ಕಾರ್ಯದರ್ಶಿ ಕಾ. ಮುನಿವೆಂಕಟಪ್ಪ ಮಂಡಿಸಿದ ವರದಿ ಮೇಲೆ ಚರ್ಚೆ ನಡೆಸಲಾಯಿತು.





ಚರ್ಚೆ ನಂತರ ವರದಿ ಅಂಗೀಕರಿಸಿದ ಸಮ್ಮೆಳನ – ಶಾಶ್ವತ ನೀರಾವರಿ ಯೋಜನೆ, ಸ್ವಾಮಿನಾಥನ್ ವರದಿ, ಬಗರ್ ಹುಕುಂ ಸಾಗುವಳಿ, ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆ, ಮಹಿಳೆ–ದಲಿತ–ಅಲ್ಪಸಂಖ್ಯಾತರ ರಕ್ಷಣೆಗೆ, ಗಣಿಗಾರಿಕೆ–ಮುಕ್ತ ವಲಯ, ಎಪಿಎಂಸಿ ರೈತ–ಸ್ನೇಹಿ ಮಾಡಲು, ಕೆರೆ ಪುನಶ್ಚೇತನಗೊಳಿಸಲು, ಕೋಮು ಸೌಹಾರ್ದ ಕಾಪಾಡಲು – ಮುಂತಾದವುಗಳಿಗೆ ಒತ್ತಾಯಿಸಿ ಒಟು 13 ನಿರ್ಣಯಗಳನ್ನು ಅಂಗೀಕರಿಸಿತು.

ಸಮ್ಮೇಳನ 17 ಸದಸ್ಯರ ಜಿಲ್ಲಾ ಸಮಿತಿ ಮತ್ತು ರಾಜ್ಯ ಸಮ್ಮೇಳನಕ್ಕೆ 43 ಪ್ರತಿನಿಧಿಗಳನ್ನು ಆಯ್ಕೆ ಮಾಡಿತು. ಕಾ. ಬಿ.ಜಯರಾಮರೆಡ್ಡಿ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಚನ್ನರಾಯಪ್ಪ, ಅಶ್ವತ್ಥಪ್ಪ ಸಿ.ಸಿ., ಹೆಚ್.ಪಿ, ಲಕ್ಷ್ಮಿನಾರಾಯಣ, ಎ.ಎನ್.ಶ್ರೀರಾಮಪ್ಪ, ಮಹಮ್ಮದ್ ಅಕ್ರಂ ಅವರು ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



ಬಿ. ಜಯರಾಮರೆಡ್ಡಿ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**